# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 3 ಶುಕ್ರವಾರ 2025

₹4

ಸಂಪುಟ: 46 | ಸಂಚಿಕೆ: 166 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



# ಜಂಬೂ ಸವಾರಿಗೆ ಮೆರಗು ನೀಡಿದ ವಿವಿಧ ಸಾಂಸ್ಕೃತಿಕ ಕಲಾತಂಡಗಳು

## ಲಕ್ಷಾಂತರ ಜನರ ಆಕರ್ಷಿಸಿದ ವಿಶಿಷ್ಟ ಪ್ರದರ್ಶನ





ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಗಿದ ಗೊರವರ ಕುಣಿತ ಹಾಗೂ ಗಾರುಡಿ ಗೊಂಬೆ ಕಲಾ ತಂಡಗಳು.

ಮೈಸೂರು, ಅ.2(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಬಹು ಜನಾಕರ್ಷಣೆಯ ಜಗತ್‌ಪ್ರಸಿದ್ಧ 'ಜಂಬೂ ಸವಾರಿ' ಅದ್ದೂರಿ ಮೆರವಣಿಗೆಗೆ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಕಲಾವೈಭವದ ಮೆರಗು ನೀಡಿದವು.

ಮೈಸೂರು ಅರಮನೆ ಆವರಣದಲ್ಲಿ ನಂದಿಧ್ವಜ ಪೂಜೆಯೊಂದಿಗೆ ವಿದ್ಯುಕ್ತವಾಗಿ ಆರಂಭವಾದ ಮೆರವಣಿಗೆಯಲ್ಲಿ ಸಾಗಿದ 90ಕ್ಕೂ ಹೆಚ್ಚು ಕಲಾತಂಡಗಳ ನೂರಾರು ಕಲಾವಿದರು, ತಮ್ಮ ತಮ್ಮ ಕಲಾ ಕೌಶಲ್ಯತೆಯನ್ನು ಪ್ರಸ್ತುತಪಡಿಸುತ್ತಾ, ವಿವಿಧ ಕಲಾ ಪ್ರಕಾರಗಳ ಪ್ರದರ್ಶನ ನೀಡುತ್ತಾ ಸ್ತಬ್ಧಚಿತ್ರಗಳ ನಡುವೆ ಬನ್ನಿಮಂಟಪದವರೆಗೆ ಹೆಜ್ಜೆ ಹಾಕಿದರು.

ಮೈಸೂರಿನ ಗೌರಿಶಂಕರ ನಂದಿಧ್ವಜ ತಂಡ ಹಾಗೂ ಶ್ರೀ ಗುರುಮಲ್ಲೇಶ್ವರ ನಂದಿ ಧ್ವಜ ಸಂಘದ ಕಲಾವಿದರು ನಂದಿ ಧ್ವಜ ಹಿಡಿದು ಸಾಗಿದರೆ, ಕೆಆರ್.ಮೊಹಲ್ಲಾದ ಅಭಿನವಶ್ರೀ ವೀರಭದ್ರ ನೃತ್ಯತಂಡ ಕಲಾವಿದರು ಅಘೋಷ 'ವೀರಭದ್ರನ ಕುಣಿತ' ಹಾಕುವ ಮೂಲಕ ಜಂಬೂ ಸವಾರಿ ವೀಕ್ಷಣೆಗೆ ಆಗಮಿಸಿದ್ದವರ ಮನಸ್ಸನ್ನಲ್ಲಿ ಉತ್ಸಾಹ ಹೆಚ್ಚಿಸಿದರು.

ಬೆಂಗಳೂರಿನ ಶ್ರೀ ಮಾರಮ್ಮದೇವಿ ಕಲಾತಂಡ, ಮಂಡ್ಯದ ಕಸಲಗೆರೆ ಕೊಂಬು ಕಹಳೆ ಕಲಾ ತಂಡ, ಹಗ್ಗದಹಳ್ಳಿ ಪಟ್ಟಲದಮ್ಮ ಜಾನಪದ ಕಲಾ ಬಳಗ ಹಾಗೂ ಚಿತ್ರದುರ್ಗದ ಚಿಕ್ಕಬೆನ್ನೂರಿನ ಕೊಂಬು ಕಹಳೆ ತಂಡಗಳ ಕಲಾವಿದರು ಕಹಳೆ ಮೊಳಗಿಸಿ, ವಿಜಯೋತ್ಸವದ ಸಂಕೇತ ಸಾರಿದರು. ಹಾಗೆಯೇ ದಾವಣಗೆರೆ ಬಸಾಪುರದ ಶ್ರೀ ಬಸವಕಲಾ ಲೋಕ ಮತ್ತು ವಿಜಯನಗರದ ಶ್ರೀ ಬಸವೇಶ್ವರ ಸಮಾಳ ಮತ್ತು ನಂದಿಧ್ವಜ ಸಾಂಸ್ಕೃತಿಕ ಕಲಾ ಸೇವಾ ಟ್ರಸ್ಟ್ ಕಲಾವಿದರ 'ನಂದಿ ಕೋಲು' ಪ್ರದರ್ಶನ ನೆರೆದಿದ್ದವರನ್ನು ಆಕರ್ಷಿಸಿತು.

ಧಾರವಾಡ ಕಲಗೇರಿಯ ಶ್ರೀ ದುರ್ಗಾದೇವಿ ಜಾನಪದ ಜಗ್ಗಲಗಿ ಮೇಳ ಹಾಗೂ ಬೆಳಗಾವಿ ಗುಂಡೇನಹಟ್ಟಿಯ ಶ್ರೀ ಬಸವೇಶ್ವರ ಜಾನಪದ 'ಜಗ್ಗಲಗಿ ಮೇಳ', ಉಡುಪಿ ಮಂದಾರ್ತಿ ನಕ್ಕೋಡಿ ಹೆಗ್ಗುಂಜೆಯ ಕುಡುಬಿ ಹೋಳಿ ಜಾನಪದ ಕಲಾ ಸಮಿತಿಯ 'ಕುಡುಬಿ ಗುಮಟೆ ನೃತ್ಯ', ಮಂಡ್ಯದ ಸಂತೆಕಸಲಗೆರೆಯ ಭೂಮಿಸಿದ್ದೇಶ್ವರ ಕಲಾಬಳಗ ಹಾಗೂ ಜಡೆ ಕೋಲಾಟ ಕಲಾತಂಡದ ಕಲಾವಿದರ 'ಜಡೆ ಕೋಲಾಟ' ಪ್ರದರ್ಶನ ನೀಡಿದರು.

ಬೆಳಗಾವಿಯ ಕಿಡದಾಳ ಸಪ್ತಸ್ವರ ಸಂಗೀತ ಕಲಾ ಬಳಗದ 'ಕರಬಲ ನೃತ್ಯ', ಮಂಡ್ಯದ ಎಲೆತೋಟದ ಕ್ಯಾತಮ್ಮ ಯುವಕರ ಜಾನಪದ ಕಲಾತಂಡ ಹಾಗೂ ಕೆನ್ನಾಳಿನ ಶ್ರೀ ವೀರಮದಕರಿ ನಾಯಕರ ಯುವಕ ಸಂಘದ 'ಡೊಣ್ಣೆ ವರಸೆ' ನೋಡುಗರನ್ನು ನಿಬ್ಬೆರಗಾಗಿಸಿದರೆ, ಚಿಕ್ಕಬಳ್ಳಾಪುರ ಜಂಗಮಕೋಟೆಯ ಶ್ರೀ ನಂಜುಂಡೇಶ್ವರ ಯಕ್ಷಗಾನ ಗೊಂಬೆ ಯುವಕರ ಸಂಘದ 'ಗಾರುಡಿ ಗೊಂಬೆ' ಪ್ರದರ್ಶನ ವಿಶೇಷವಾಗಿತ್ತು.

ಹುಬ್ಬಳ್ಳಿ ರೇಣುಕಾನಗರದ ಶ್ರೀ ಜಾನಪದ ನೆರಳು ಕಲೆ ಮತ್ತು ಸಾಂಸ್ಕೃತಿಕ ನಿರ್ವಹಣೆ ಹಾಗೂ ಸುಶೋಧನಾ ಕೇಂದ್ರದ 'ಜೋಗತಿ ನೃತ್ಯ', ಉಡುಪಿ ತೆಂಕುರ್ತಿ ಬ್ರಹ್ಮಾವರ ತಾಲೂಕಿನ ಅಂಕದ ಮನೆ ಜಾನಪದ ಕಲಾ ಸಂಘ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸುಗಿಪು ಜಾನಪದ ಕಲಾತಂಡದ 'ಕಂಗಿಲು ನೃತ್ಯ', ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದಿಂದ ಬಂದಿದ್ದ ತಮಿಳುನಾಡಿನ ಕಲಾವಿದರ 'ಕರಗ ತಪ್ಪಾಟಂ' ಮನಸೂರೆಗೊಂಡಿತು.



ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರದ ಕಲಾವಿದರಿಂದ ತಪ್ಪಟಗುಲು ಜಾನಪದ ನೃತ್ಯ

ಧಾರವಾಡ ಗೌರಿಗದ್ದೆ ದೇವಸ್ಥಾನ ದಾಲಪಟ ಕಲಾವಿದರ ಸಂಘ ಹಾಗೂ ಅಲೆವಾರಿ ದಾಲಪಟ ಕಲಾವಿದರ ಸಂಘದ 'ದಾಲಪಟ' ಪ್ರದರ್ಶನ, ಉತ್ತರ ಕನ್ನಡದ ಶ್ರೀ ದುರ್ಗಾ ಗೊಂಡರ ಡಕ್ಕೆ ಕುಣಿತ ಜಾನಪದ ಸಂಘದ 'ಡಕ್ಕೆ ಕುಣಿತ', ಬಾಗಲಕೋಟೆ ಶಿರೂರ ಶ್ರೀ ಗಜಾನನ ಯುವಕ ಮಂಡಳದ 'ಹೂವಿನ ನೃತ್ಯ', ಬುಡ್ಗ ಜಂಗಮ ಹಗಲುವೇಷ ಕಲಾವಿದರ ಸಂಘ 'ಹಗಲು ವೇಷ' ನೆರೆದಿದ್ದವರನ್ನು ನಿಬ್ಬೆರಗಾಗಿಸಿತು.

ಶಿವಮೊಗ್ಗ ಜಿಲ್ಲೆ ಅಂಬಾರಗೊಪ್ಪ ಗ್ರಾಮದ ಬೀರಲಿಂಗೇಶ್ವರ ವಾಲ್ಮೀಕಿ ಯುವಕರ ಡೊಳ್ಳಿನ ಸಂಘ, ಅನವಟ್ಟಿ ಶ್ರೀ ದುರ್ಗಾಂಬ ಯುವಕ ಡೊಳ್ಳಿನ ಸಂಘ, ಹಾವೇರಿ ಜಿಲ್ಲೆ ಇನಾಂಯಲ್ಲಾಪುರ ಶ್ರೀ ಬೀರಲಿಂಗೇಶ್ವರ ಜಾನಪದ ಕಲಿಕಾ ವಿದ್ಯಾ ಸಂಸ್ಥೆ, ದಾವಣಗೆರೆಯ ಶ್ರೀ ಬೀರಲಿಂಗೇಶ್ವರ ಡೊಳ್ಳಿನ ಯುವಕ ಸಂಘ 'ಡೊಳ್ಳು ಕುಣಿತ', ವಿಜಯಪುರದ ಶ್ರೀ ರೇವಣ್ಣಸಿದ್ದೇಶ್ವರ ಯುವಕ ಕಲಾ ಸಂಘದ 'ಸಿದ್ದಿಗೆ ಕುಣಿತ', ದಕ್ಷಿಣ ಕನ್ನಡ ಕಲಾವಿದರ 'ಕರ್ಗೋಲು ಕುಣಿತ', ಕಲಬುರಗಿ ಮಾತಂಗಿ ಹಲಗೆ ಕಲಾವಿದರ ಸಂಘದ 'ಹಲಗೆ ಮೇಳ' ರೋಮಾಂಚನ ನೀಡಿತು.

ತುಮಕೂರು ಕಿತ್ತಾಮಂಗಲದ ಸೋಮನ ಕುಣಿತ ತಂಡ ಹಾಗೂ ಹಾಸನದ ಸುಗ್ಗಿ–ಹಗ್ಗಿ ಸಾಂಸ್ಕೃತಿಕ ಯುವಕ ಸಂಘದ 'ಸೋಮನ ಕುಣಿತ', ಉಡುಪಿ ಪಡುಬೈಲೂರು ಕಲಾವಿದರ 'ಹುಲಿವೇಷ' ಕೊಡಗಿನ ಸುಗ್ಗಿ ಕುಣಿತ ಕಲಾತಂಡದ 'ಕೊಡವ ಒಕ್ಕಲಿಗರ ಸುಗ್ಗಿ ಕುಣಿತ', ಉತ್ತರ ಕನ್ನಡ ಹೊನ್ನಾವರ ಕಲಾವಿದರ 'ಹಾಲಕ್ಕಿ ಸುಗ್ಗಿ ಕುಣಿತ', ಮಂಡ್ಯ ಹೊಸಹಳ್ಳಿ ವಿನಾಯಕ ಮಹಿಳಾ ಕೋಲಾಟ ತಂಡದ 'ಮಹಿಳಾ ಕೋಲಾಟ', ರಾಮನಗರ ತೂಬಿನಕೆರೆ ಕಲಾವಿದರು 'ಪಟಾ ಕುಣಿತ' ಚಿಕ್ಕಮಗಳೂರು ಕಡೂರಿನ ಮಹಿಳಾ ಕಲಾವಿದರ 'ಮಹಿಳಾ ವೀರಗಾಸೆ' ಹಾಗೂ ಉತ್ತರ ಕನ್ನಡ ಹಳಿಯಾಳ ಕಲಾವಿದರ 'ಸಿದ್ದಿ ಡಮಾಮಿ ನೃತ್ಯ' ಮೆರವಣಿಗೆಯ ಸಂಭ್ರಮವನ್ನು ಇಮ್ಮಡಿಗೊಳಿಸಿತು.

ಬಾಗಲಕೋಟೆ ಹಾಗೂ ಗದಗ ಜಿಲ್ಲೆಯ ಕೊಣ್ಣೂರು ಕಲಾವಿದರ 'ಕರಡಿ ಮಜಲು', ಮೈಸೂರಿನ ಸುಂದರೇಶ್ ಮತ್ತು ಸಿ.ಪೂಜಾ ಕಲಾತಂಡ ಹಾಗೂ ಮಂಡ್ಯ ಕೆ.ಎಂ.ದೊಡ್ಡಿಯ ಮಹಿಳಾ ಪೂಜಾ ಕುಣಿತ ಸಾಂಸ್ಕೃತಿಕ ಕಲಾ ಸಂಘದ 'ಪೂಜಾ ಕುಣಿತ', ರಾಮನಗರ ಕಲಾವಿದರ 'ಕರಗ ನೃತ್ಯ', ಬೆಂಗಳೂರಿನ ಶ್ರೀ ಕೃಷ್ಣ ಜಾನಪದ ನವಿಲು ನೃತ್ಯ ಕಲಾ ತಂಡದ 'ನವಿಲು ನೃತ್ಯ' ನೋಡುಗರಿಗೆ ರೋಮಾಂಚನ ನೀಡಿತು.

ಹಾಗೆಯೇ 'ಹೆಜ್ಜೆ ಮೇಳ', 'ಗೊರವರ ಕುಣಿತ', 'ದಟ್ಟಿ ಕುಣಿತ', 'ಲಿಂಗಿ ನೃತ್ಯ', 'ಕೋಲಾಟ', 'ಲಂಬಾಣಿ ನೃತ್ಯ', 'ಪುರವಂತಿಕೆ', 'ಉರುಮಿ ವಾದನ', 'ಸರಪಳಿ ನೃತ್ಯ', 'ಚಿಲಿಪಿಲಿ ಗೊಂಬೆ', 'ಜಿಲ್ಲಾ ಕುಸಾಳೆ', 'ಧ್ವಜಾ ಪಥಕ', 'ರಾಮ ಫಲಕ ನೃತ್ಯ', 'ಕರಗ ಕೋಲಾಟ', 'ಚಿಟ್ಟಿಕೆ ನೃತ್ಯ', 'ಕೊಳಗ ಗೊಂಬೆ', 'ಮರಗಾಲು', 'ತಪ್ಪಟೆಗಳು', 'ವೀರ ಮಕ್ಕಳ ಕುಣಿತ', 'ತಮಟೆ ವಾದನ', 'ಬೇಡರ ವೇಷ', 'ಶಹನಾಯಿ ವಾದನ', 'ಗಾರುಡಿ ಗೊಂಬೆ' ಜೊತೆಗೆ ಮಂಗಳವಾದ್ಯ ಹಾಗೂ 'ಪೊಲೀಸ್ ಬ್ಯಾಂಡ್' ಜಂಬೂಸವಾರಿ ಮೆರವಣಿಗೆಗೆ ಸಾಂಸ್ಕೃತಿಕ ಮೆರಗು ನೀಡಿದವು.



ಕಂಸಾಳೆ ನೃತ್ಯ ಪ್ರದರ್ಶನ

# ದಸರಾ ಗಜಪಡೆಗೆ ಸಾಂಪ್ರದಾಯಿಕ ವರ್ಣರಂಚಿತ ಚಿತ್ತಾರ!



ಅಂಬಾರಿ ಆನೆ ಅಭಿಮನ್ಯುವಿಗೆ ಕಲಾವಿದ ನಾಗಲಿಂಗಪ್ಪ ಚಂದ್ರಪ್ಪ ಬಡಿಗೇರ್ ಅಲಂಕಾರ ಮಾಡುತ್ತಿರುವುದು.

ಮೈಸೂರು, ಅ.2(ಎಂಕೆ)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ 'ಜಂಬೂ ಸವಾರಿ'ಯ ಕೇಂದ್ರ ಬಿಂದುಗಳು ಹಾಗೂ ರೂವಾರಿಗಳಾದ 'ದಸರಾ ಗಜಪಡೆ'ಗೆ ಸಾಂಪ್ರದಾಯಿಕ ಶೈಲಿಯಲ್ಲಿ ಬಣ್ಣ ಬಣ್ಣದ ಚಿತ್ತಾರಗಳಿಂದ ಸಿಂಗರಿಸಲಾಯಿತು.

ಕಳೆದ ಒಂದೂವರೆ ತಿಂಗಳಿಂದ ತಾಲೀಮಿನಲ್ಲಿ ನಿರತವಾಗಿದ್ದ ಗಜಪಡೆ ಗುರುವಾರ ಆಕರ್ಷಕ ಬಣ್ಣದ ಚಿತ್ತಾರದೊಂದಿಗೆ ಕಂಗೊಳಿಸಿದವು. ಬುಧವಾರ ರಾತ್ರಿ 11 ಗಂಟೆಯಿಂದಲೇ ಕಲಾವಿದ ನಾಗಲಿಂಗಪ್ಪ ಚಂದ್ರಪ್ಪ ಬಡಿಗೇರ್ ನೇತೃತ್ವದ 8 ಮಂದಿ ಕಲಾವಿದರು, 14 ಆನೆಗಳನ್ನು ಸಾಂಪ್ರದಾಯಿಕ ಬಣ್ಣ ಬಣ್ಣದ ಚಿತ್ತಾರದೊಂದಿಗೆ ಸಿಂಗರಿಸಿದರು.

ಲಕ್ಷ್ಮಿ ಆನೆಯಿಂದ ಆರಂಭಿಸಿ, ಕೊನೆಗೆ ಅಂಬಾರಿ ಆನೆ ಅಭಿಮನ್ಯು ಆನೆಯನ್ನು ಸಿಂಗರಿಸಿ, ಆಕರ್ಷಕವಾಗಿ ಕಾಣುವಂತೆ ಮಾಡಿದರಲ್ಲದೆ ಚಿನ್ನದ ಅಂಬಾರಿ ಹೊರಲು ಸಜ್ಜುಗೊಳಿಸಿದರು. ಆನೆಗಳ ಹಣೆಯ ಹರಿಸಿನ ಬಣ್ಣದ ಅರ್ಧಚಂದ್ರ ಮತ್ತು ನಾಮ, ಕಿವಿಗಳಿಗೆ ಶಂಕುಚಕ್ರ, ಸೊಂಡಿಲಿಗೆ ಗಂಡುಬೇರುಂಡ, ದಂತದ ಮೇಲೆ ಹಾರುವ ಗಿಳಿ, ಕಾಲುಗಳು ಮತ್ತು ಬಾಲಕ್ಕೆ ಹೂ ಬಳ್ಳಿ ಬಿಡಿಸಿದರು.

ಮಧ್ಯಾಹ್ನ 12 ಗಂಟೆಗೆ ಸುಮಾರಿಗೆ ಅಂಬಾರಿ ಆನೆ ಅಭಿಮನ್ಯುವಿಗೆ ಚಿತ್ತಾರ ಬಿಡಿಸಲಾಯಿತು. ಎಲ್ಲಾ ಕಲಾವಿದರು ಸೇರಿ ಏಕಕಾಲದಲ್ಲಿ ಒಂದೊಂದು ಭಾಗದಲ್ಲಿ ಚಿತ್ರಗಳನ್ನು ಬಿಡಿಸಿ, ವಿಶೇಷವಾಗಿ ಕಾಣುವಂತೆ ಮಾಡಿದರು.

ಈ ವೇಳೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಕಲಾವಿದ ನಾಗಲಿಂಗಪ್ಪ ಚಂದ್ರಪ್ಪ ಬಡಿಗೇರ್, ರಾತ್ರಿ 11 ಗಂಟೆಯಿಂದಲೇ ಆನೆಗಳ ಸಿಂಗಾರ ಕೆಲಸ ಆರಂಭಿಸಿದ್ದೇವೆ. ಪೇಪರ್ ಮೇಲೆ ಚಿತ್ರ ಬಿಡಿಸುವುದಕ್ಕೂ ಆನೆಗಳ ಮೈಮೇಲೆ ಚಿತ್ರ ಬಿಡಿಸುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಚಿತ್ರ ಬಿಡಿಸುವಾಗ ಕಾಲು, ಬಾಲ ಅಲುಗಾಡಿಸುತ್ತವೆ. ಆದರೂ ನಿಧಾನವಾಗಿ ಏಕಾಗ್ರತೆಯಿಂದ ಬಿಡಿಸಬೇಕಾಗುತ್ತದೆ ಎಂದರು.

ಜಂಬೂ ಸವಾರಿಗೆ ಇನ್ನೂ ಒಂದು ವಾರ ಇರುವಂತೆಯೇ ಬಣ್ಣಗಳನ್ನು ತಯಾರಿಸಲಾಗುವುದು. ಯಾವುದೇ ರಾಸಾಯನಿಕ ಬಳಸದೆ, ಪುಡಿ ಬಣ್ಣ ಹಾಗೂ ಮರದಂಟು ಮಿಶ್ರಣ ಮಾಡಿ ನೈಸರ್ಗಿಕವಾಗಿ ಬಣ್ಣ ತಯಾರಿಸಲಾಗುವುದು. ನೀರು ಹಾಕದಿದ್ದರೆ ಮೂರರಿಂದ ನಾಲ್ಕು ದಿನಗಳವರೆಗೂ ಬಣ್ಣ ಹಾಗೆಯೇ ಇರಲಿದೆ ಎಂದು ತಿಳಿಸಿದರು.

# ಅಖಾಡಕ್ಕೆ ಬಿಡುವುದು ವಿಳಂಬ; ಕಾದು... ಕಾದು ಬೇಸತ್ತ ಅರಮನೆ ಜಗ ಜಟ್ಟಿಗಳು



ಅಖಾಡದಿಂದ ಹೊರಗಡೆ ಕಾದು ನಿಂತಿರುವ ಜಟ್ಟಿಗಳು.

ಮೈಸೂರು, ಅ.2(ಎಂಕೆ)– ಸಾಂಪ್ರದಾಯಿಕ ವಜ್ರಮುಷ್ಠಿ ಕಾಳಗದ ಮೂಲಕ ನಾಡ ಅಧಿದೇವತೆ ಚಾಮುಂಡೇಶ್ವರಿಗೆ ರಕ್ತ ಸಮರ್ಪಿಸುವ ಜಗ ಜಟ್ಟಿಗಳನ್ನು ಅಂಗಳಕ್ಕೆ ಬಿಡದೆ ಸತಾಯಿಸಿದ ಘಟನೆ ನಡೆಯಿತು.

ಅರಮನೆ ಆವರಣದಲ್ಲಿ ಭದ್ರತೆ ದೃಷ್ಟಿಯಿಂದ ಎಲ್ಲೆಡೆ ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದ ಪೊಲೀಸರು, ವಜ್ರಮುಷ್ಠಿ ಕಾಳಗಕ್ಕೆ ಆಗಮಿಸಿದ್ದ ಜಟ್ಟಿಗಳು ಹಾಗೂ ಅವರನ್ನು ಕರೆತರುವ ಹಿರಿಯ ಜಟ್ಟಿಗಳು, ಉಸ್ತಾದರು ಮತ್ತು ಅವರ ಕುಟುಂಬಸ್ಥರಿಗೆ ಪ್ರವೇಶ ನೀಡದೆ ಅರಮನೆ ಆವರಣದಲ್ಲೇ ಅಲೆದಾಡುವಂತೆ ಮಾಡಿದರು.

ಜಟ್ಟಿಗಳಾದ ಮೈಸೂರಿನ ಮಂಜುನಾಥ್, ಬೆಂಗಳೂರಿನ ಪ್ರದ್ಯುಮ್ನ, ಚಾಮರಾಜನಗರದ ಮಹೇಶ್ ನಾರಾಯಣ, ಚನ್ನಪಟ್ಟಣದ ರಾಘವೇಂದ್ರ ಜಟ್ಟಿಗಳಿಗೆ ನೇರವಾಗಿ ಪ್ರವೇಶ ನೀಡಿದ ಅರಮನೆ ಮಂಡಳಿ ಕಚೇರಿ ಎದುರು ಕಾಯುವಂತೆ ಮಾಡಲಾಯಿತು. ಈ ವೇಳೆ ಜಟ್ಟಿಗಳನ್ನು ಕರೆತರುವ ಉಸ್ತಾದರು ಪೊಲೀಸರ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ ನಾವಿಲ್ಲಿ ಸಂಪ್ರದಾಯ ಆಚರಣೆಗೆ ಬಂದಿದ್ದೇವೆ. ಅವಕಾಶ ಮಾಡಿ ಕೊಡದಿದ್ದರೆ ತಡವಾಗಲಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈ ವೇಳೆ ಕೆಲಕಾಲ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು ಸುಮಾರು 30 ನಿಮಿಷಗಳ ಕಾಲ ಅಖಾಡದಿಂದ ಹೊರಗೆ ಇದ್ದ ಜಟ್ಟಿಗಳನ್ನು ನಂತರ ಕರೆಸಿಕೊಂಡು ಅಖಾಡದೊಳಗೆ ಪ್ರವೇಶಿಸಲು ಅವಕಾಶ ನೀಡಲಾಯಿತು.

# ಚಾಮುಂಡೇಶ್ವರಿ ದರ್ಶನ; ಭಕ್ತಿಯ ಪರಾಕಾಷ್ಠೆ ಮೆರೆದ ಜನಸ್ತೋಮ

## ಮೊಬೈಲ್‌ಗಳಲ್ಲಿ ಚಿತ್ರೀಕರಿಸಿ ಸಂಭ್ರಮ

ಮೈಸೂರು,ಅ.2(ಪಿಎಂ)– ಗಂಟೆ ಗಟ್ಟಲೇ ಕಾದು ಕುಳಿತಿದ್ದ ಭಾರೀ ಜನ ಸ್ತೋಮ, ಅಭಿಮನ್ಯು ಆನೆ ಮೇಲೆ ಚಿನ್ನದ ಅಂಬಾರಿಯಲ್ಲಿ ಚಾಮುಂಡೇಶ್ವರಿ ದರ್ಶನ ಆಗುತ್ತಿದ್ದಂತೆ ಭಕ್ತಿಯ ಪರಾಕಾಷ್ಠೆ ಮೆರೆಯಿತು. ಜೈಕಾರ ಹಾಕಿ, ಭಕ್ತಿ–ಭಾವ ವ್ಯಕ್ತಪಡಿಸಿತು.

ಈ ಪೈಕಿ ಹಲವರು ಹೂ ಹಿಡಿದು ತಾವಿದ್ದಲ್ಲೇ ಪುಷ್ಪಾರ್ಚನೆ ಮಾಡಿ ತಮ್ಮ ಭಕ್ತಿ ಸಮರ್ಪಿಸಿದರು. ಇಂತಹ ಅನುಭವವನ್ನು ಪ್ರತಿ ವರ್ಷದಂತೆ ಈ ವರ್ಷವೂ ಲಕ್ಷಾಂತರ ಮಂದಿ ಪಡೆದು ಸಂಭ್ರಮಿಸಿದರು. 'ಜೈ ಚಾಮುಂಡೇಶ್ವರಿ' ಎಂದು ಕೂಗಿ ತಾಯಿ ಕೃಪೆಗೆ ಪಾತ್ರರಾದರು. ಅಲ್ಲದೆ, ತಮ್ಮ ಮೊಬೈಲ್‌ಗಳಲ್ಲಿ ವರ್ಷಕ್ಕೊಮ್ಮೆ ಮಾತ್ರ ಕಾಣಸಿಗುವ ಈ ಅಪರೂಪದ ದೃಶ್ಯವನ್ನು ಸೆರೆ ಹಿಡಿದು ಹರ್ಷಗೊಂಡರು. ಜೊತೆಗೆ ಹಲವರು ತಮ್ಮ ಮೊಬೈಲ್‌ಗಳಲ್ಲಿ ಅಭಿಮನ್ಯು ಆನೆ ಹಾಗೂ ಚಿನ್ನದ ಅಂಬಾರಿಯೂ ಕಾಣಿಸುವಂತೆ ತಾವಿದ್ದಲ್ಲೇ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.



ಅಂಬಾರಿಗೆ ಪುಷ್ಪ ನಮನ ಸಲ್ಲಿಸಲು ತಾವಿದ್ದಲೇ ಹೂ ಹಿಡಿದು ಕಾಯುತ್ತಿರುವ ಜನ.

# ತುಂತುರು ಮಳೆ ; ಕೊಡೆ ಹಿಡಿದು ಕಲಾ ತಂಡಗಳ ವೈಭವ ಕಣ್ತುಂಬಿಕೊಂಡ ಜನ



ಹಲವರು ಕೊಡೆ ಹಿಡಿದು ಮಳೆಯಿಂದ ರಕ್ಷಣೆ ಪಡೆದಿರುವುದು.

ಮೈಸೂರು, ಅ.2(ಪಿಎಂ)– ಅರಮನೆ ಆವರಣದಲ್ಲಿ ಮುಖ್ಯ ಆಕರ್ಷಣೆಯಾದ ಜಂಬೂ ಸವಾರಿ ಸೇರಿದಂತೆ ಕಲಾ ತಂಡಗಳ ಸಾಂಸ್ಕೃತಿಕ ವೈಭವ ಹಾಗೂ ಸ್ತಬ್ಧಚಿತ್ರಗಳ ವೈವಿಧ್ಯತೆ ಕಣ್ತುಂಬಿಕೊಳ್ಳಲು ಕಾದು ಕುಳಿತ್ತಿದ್ದ ಜನಸ್ತೋಮಕ್ಕೆ ಈ ಬಾರಿ ಬಿಸಿಲಿನ ತಾಪದ ಕಿರಿಕಿರಿ ಇರಲಿಲ್ಲ. ಆದರೆ ತುಂತುರು ಮಳೆ ಕಾಡಿತು. ಅದಾಗ್ಯೂ ಲೆಕ್ಕಿಸದೇ ಕೊಡೆಯ ಆಶ್ರಯದಲ್ಲಿ ಜನತೆ ಸಂಭ್ರಮಿಸಿತು.

ಬೆಳಗ್ಗೆಯಿಂದಲೇ ಅರಮನೆ ಆವರಣಕ್ಕೆ ತಂಡೋಪ ತಂಡವಾಗಿ ಆಗಮಿಸಿ ಆಸೀನರಾದ ಜನತೆಗೆ ಆರಂಭದಲ್ಲಿ ಬಿಸಿಲಿನ ತಾಪ ಒಂದಿಷ್ಟು ಕಾಡಿತು. ಆದರೆ ಕೆಲ ಹೊತ್ತಿನಲ್ಲೇ ಮೋಡ ಕವಿದ ವಾತಾವರಣದಿಂದ ಬಿಸಿಲಿನ ತಾಪ ತಪ್ಪಿತು. ಇದರಿಂದ ನಿರಾಳರಾದ ಜನತೆ, ಕಲಾ ತಂಡಗಳ ಪ್ರದರ್ಶನಕ್ಕೆ ಆಕರ್ಷಿತರಾಗಿ ಸಂಭ್ರಮಿಸುತ್ತಿದ್ದಂತೆ ಮಧ್ಯಾಹ್ನ 2.45ರ ವೇಳೆಗೆ ತ್ಂತ್ರು ಮಳೆಯು ಸಿಂಚನವಾಯಿತು. ಆಗ ಹಲವರು ತಾವು ತಂದಿದ್ದ ಕೊಡೆಗಳನ್ನು ಹಿಡಿದು ಮಳೆ ಹನಿಗಳಿಂದ ರಕ್ಷಣೆ ಪಡೆದರು.

ಅಂಬಾರಿಗೆ ಪುಷ್ಪಾರ್ಚನೆ ಮಾಡಲು ಸುಮಾರು ಅರ್ಧ ತಾಸು ಇರುವ ವೇಳೆಗೆ ತುಂತುರು ಮಳೆ ನಿಂತಿತು. ಹಲವರು ಖಾಲಿ ಕುರ್ಚಿಗಳನ್ನು ತಲೆ ಮೇಲೆ ಹಿಡಿದು ಮಳೆಯಿಂದ ಪಾರಾದರು. ಇನ್ನು ಮೆರವಣಿಗೆ ಮಾರ್ಗದಲ್ಲೂ ತುಂತುರು ಮಳೆ ವೇಳೆ ಹಲವರು ಕೊಡೆ ಆಶ್ರಯದಲ್ಲಿ ಕಲಾತಂಡಗಳು ಪ್ರದರ್ಶನ ವೀಕ್ಷಿಸಿದರು. ಅಂತಿಮವಾಗಿ ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ವಿಗ್ರಹದ ದರ್ಶನವಾಗುತ್ತಿದ್ದಂತೆ ಭಕ್ತಿಭಾವ ಮೆರೆದು ನಮಿಸಿ, ಸಂಭ್ರಮಿಸಿದರು.

# ನಿಧನ

### ಎಂ.ಕೆ.ಪ್ರಶಾಂತ್ (ಪಚ್ಚಿ)



ಮೈಸೂರು, ಅ.2–ಮೈಸೂರು ಜೆಎಸ್‌ಎಸ್ ಮೆಡಿಕಲ್ ಕಾಲೇಜು ನೌಕರರಾಗಿದ್ದ ಎಂ.ಕೆ.ಪ್ರಶಾಂತ್ (ಪಚ್ಚಿ) ಅವರು ಗುರುವಾರ ಬೆಳಿಗ್ಗೆ ಅನಾರೋಗ್ಯದಿಂದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು. ಮೃತರಿಗೆ 51 ವರ್ಷ ವಯಸ್ಸಾಗಿತ್ತು.

ಮೃತರು ತಾಯಿ ಪದ್ಮ, ಪತ್ನಿ ಶಶಿಕಲಾ, ಇಬ್ಬರು ಪುತ್ರರು– ಎಂ.ಪಿ.ಕಾರ್ತಿಕ್ ಗೌಡ, ಎಂ.ಪಿ.ರತನ್‌ಗೌಡ, ಸಹೋದರ ಎಂ.ಕೆ.ಕೇಶವ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಶುಕ್ರವಾರ) ಬೆಳಗ್ಗೆ 11 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಚಿನ್ನಮ್ಮ




ಹೆಚ್.ಡಿ.ಕೋಟೆ, ಅ.2– ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ ಅವರ ತಾಯಿ ಚಿನ್ನಮ್ಮ(72) ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ತಾಲೂಕಿನ ಕಳಸೂರು ಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ.

### ನಾಗೇಶೇಗೌಡ



ಮೈಸೂರು, ಅ.2– ಮೈಸೂರು ತಾಲೂಕು ಮೆಲ್ಲಹಳ್ಳಿ ಗ್ರಾಮದ ಮಾಜಿ ಮಂಡಲ ಪ್ರಧಾನ ಹಾಗೂ ರೈಸ್‌ಮಿಲ್ ಮಾಲೀಕ ಎಂ.ವಿ. ನಾಗೇಶೇಗೌಡ (89) ಗುರುವಾರ ನಿಧನರಾದರು. ಇವರು ಪತ್ನಿ ನಿಂಗಮ್ಮ, ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಮಧ್ಯಾಹ್ನ 1 ಗಂಟೆಗೆ ಗ್ರಾಮದ ಜಮೀನಿನಲ್ಲಿ ನಡೆಯಲಿದೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**3.10.2025 ಶುಕ್ರವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025**
**ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ,**
**ತಿಥಿ: ಏಕಾದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಏಕಾದಶಿ, ಬೆಳಗ್ಗೆ ತುಳಸಿ ಅರ್ಚನೆ, ಸಾಯಂಕಾಲ ಅಶ್ವವಾಹನೋತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025, ಏಕಾದಶಿ, ಶ್ರೀ ಶಾಕಂಬರಿ ಅಲಂಕಾರ, ಶ್ರೀ ಲಕ್ಷ್ಮೀನಾರಾಯಣ ಹೃದಯ ಹೋಮ, ಸ್ಥಳ: ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025, ಬೆಳಗ್ಗೆ 9 ಗಂಟೆಗೆ ಅಮ್ಮನವರಿಗೆ ಶತಕಲಶಾಭಿಷೇಕ, ಶ್ರೀ ಮಹಿಷ ಮರ್ಧಿನಿ ಅಲಂಕಾರ, ಸಪ್ತಶತಿ ಪಾರಾಯಣ, ಸುಮಂಗಲಿಯರಿಂದ ಕುಂಕುಮಾರ್ಚನೆ, ಸ್ಥಳ: ದೇವಸ್ಥಾನ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ವ್ಯವಸ್ಥಾಪಕರು:** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ–2025, ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಉತ್ಸವ, ಶಾಂತಿ ಹೋಮ, ನವರಾತ್ರಿ ಮಂಗಳಾಚರಣೆ, ಸ್ಥಳ: ನಾದ ಮಂಟಪ, ಶ್ರೀ ಸಚ್ಚಿದಾನಂದ ಆಶ್ರಮದ ಆವರಣ, ಊಟಿ ರಸ್ತೆ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ ಹಾಗೂ ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ಅಂತರಾಷ್ಟ್ರೀಯ ವಿಶ್ವ ಹೃದಯ ದಿನಾಚರಣೆಯ ಸಂದರ್ಭದಲ್ಲಿ ಹೃದಯ ದಿನಾಚರಣೆಯ ಸಂದೇಶ ಮಹತ್ವ ಮತ್ತು ಹೃದಯದ ಆರೋಗ್ಯ ಕುರಿತು ತಿಳಿಸಿಕೊಡಲಿದ್ದಾರೆ ಮಂಡ್ಯದ ಇಂಟರ್‌ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ. ಹೇಮಾ ಎಸ್. ನಂತರ ಅಂತಾರಾಷ್ಟ್ರೀಯ ಹಿರಿಯ ನಾಗರಿಕರ ದಿನಾಚರಣೆಯ ಸಂದರ್ಭದಲ್ಲಿ ಹಿರಿಯ ನಾಗರಿಕ ಆರೋಗ್ಯ ಕಾಳಜಿ ಕುರಿತು ಡಾ. ಕಾರ್ತಿಕ್ ಉಡುಪ ಎನ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಡಾ. ಕುಲದೀಪ್ ಎನ್. ಮತ್ತು ಬೇದ್ರೆ ಮಂಜುನಾಥ, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ. ಎನ್. ಮಂಜುನಾಥ್

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡ ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ– ಸಖೀ ಸಂವಾದ– ದಸರಾ ಒಂದು ನೆನಪು, ಪ್ರಸ್ತುತಿ–ಕೀರ್ತನಾ .ವಿ ಹಾಗೂ ನೇತ್ರಾ .ಕೆ., 4.30 ವೃತ್ತಿ ಮಾರ್ಗದರ್ಶನ – ದಂತ ವೈದ್ಯಕೀಯ ಕ್ಷೇತ್ರದಲ್ಲಿ ಇರುವ ಅಧ್ಯಯನ, ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ಜೆ.ಎಸ್.ಎಸ್. ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಪ್ರಾಂಶುಪಾಲರಾದ ಡಾ. ದಾಕ್ಷಾಯಿಣಿ ಎಂ.ಆರ್. ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ ಹಲೋ ಕೃಷಿರಂಗ ಪ್ರಾಯೋಜಿತ ನೇರ ಫೋನ್ –ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ– ಕೃಷಿ ತ್ಯಾಜ್ಯಗಳ ಮರು ಬಳಕೆ ಭಾಗವಹಿಸುತ್ತಾರೆ–ಉಪ ಕೃಷಿ ನಿರ್ದೇಶಕರಾದ ಜಿ.ಹೆಚ್. ಯೋಗೀಶ್, ಪರಾಗ ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಹಳ್ಳಿಹಾಡು, ಭಾಗವಹಿಸುತ್ತಾರೆ–ಶ್ರೀರಂಗಪಟ್ಟಣ ತಾಲೂಕು, ಲಕ್ಷ್ಮೀಪುರದ ಮಹಾಲಿಂಗು, 10.30 ಸವಿನೆನಪು

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸ್‌ಲೆನ್ಸ್:** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸ್‌ಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಮೈಸೂರು ಬೊಂಬೆ ರಂಗ ಮಂದಿರ:** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30ರಿಂದ.

■ **ಜನಚೈತನ್ಯ ಫೌಂಡೇಷನ್ :** ಮೈಸೂರು ದಸರಾ ಎಷ್ಟೊಂದು ಸುಂದರ... ಸಂಗೀತ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30 ರಿಂದ.





# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 3 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 166 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


# ಅದ್ದೂರಿ ಜಂಬೂಸವಾರಿ

- ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ಚಾಮುಂಡೇಶ್ವರಿ ಕಣ್ತುಂಬಿಕೊಂಡ ಲಕ್ಷಾಂತರ ಜನ
- 6 ಬಾರಿ ಯಶಸ್ವಿಯಾಗಿ ಚಿನ್ನದ ಅಂಬಾರಿ ಹೊತ್ತು ಸೈ ಎನಿಸಿಕೊಂಡ ಅಭಿಮನ್ಯು
- ಜಾನಪದ ಕಲಾ ಸಿರಿವಂತಿಕೆ ಸಾರಿದ ವಿವಿಧ ಜಾನಪದ ಕಲಾ ತಂಡಗಳು


## ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಗಣ್ಯರಿಂದ ನಾಡದೇವತೆ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ

### ಇತಿಹಾಸ ಪ್ರಸಿದ್ಧ ರಾಜರ ಕಾಲದ ವೈಭವ, ದೇಶದ ಪ್ರಗತಿಯ ಮುನ್ನೋಟ ಅನಾವರಣ



ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಬಳಿಕ ಗಜಪಡೆಯ ನಾಯಕ ಅಭಿಮನ್ಯು 750 ಕೆ.ಜಿ.ತೂಕದ ಚಿನ್ನದ ಅಂಬಾರಿ ಹೊತ್ತು ಅರಮನೆಯಿಂದ ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಗಿದ ಮನಮೋಹಕ ದೃಶ್ಯ /ಚಿತ್ರಗಳು: ಲಕ್ಷ್ಮೀನಾರಾಯಣ ಯಾದವ.






**ಮೈಸೂರು, ಅ.2(ಬಿಎಲ್‌ಯು)– ಈ ಸಾಲಿನ ದಸರಾ ಮಹೋತ್ಸವದ ಅಂತಿಮ ಆಕರ್ಷಣೆ ಜಂಬೂ ಸವಾರಿ ಸುಗಮವಾಗಿ ಅಂತ್ಯಗೊಂಡಿತು. ರಾಜರ ಕಾಲದ ಗತವೈಭವ, ಐತಿಹಾಸಿಕ ಹಿನ್ನೆಲೆ, ದೇಶದ ಪ್ರಗತಿಯ ಮುನ್ನೋಟ, ಆಧುನಿಕ ತಂತ್ರಜ್ಞಾನದಲ್ಲಿ ಭಾರತದ ಕ್ರಾಂತಿ, ದೇಶದ ಮಿಲಿಟರಿ ಶಕ್ತಿ, ಜಾನಪದ ಕಲೆಯ ಮೆರಗು ಸೇರಿದಂತೆ ರಾಜ್ಯದ ಸಾಂಸ್ಕೃತಿಕ ಪರಂಪರೆಯನ್ನು ಕಣ್ಣಿಗೆ ಕಟ್ಟುವ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆ ಸಾಂಗವಾಗಿ ನೆರವೇರುವುದರೊಂದಿಗೆ ಒಂದು ತಿಂಗಳಿಗೂ ಅಧಿಕ ಕಾಲ ಇದಕ್ಕಾಗಿ ಶ್ರಮಿಸಿದ ಜಿಲ್ಲಾಡಳಿತದ ಪ್ರಯತ್ನ ಸಾರ್ಥಕವಾಗಿದೆ. 750 ಕೆ.ಜಿ. ತೂಕದ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ನಾಡದೇವತೆ, ತಾಯಿ ಚಾಮುಂಡೇಶ್ವರಿಯನ್ನು ಅಭಿಮನ್ಯು ಹೊತ್ತು ತಂದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ಇತರ ಗಣ್ಯರು ಪುಷ್ಪಾರ್ಚನೆ ಮಾಡುವ ಮೂಲಕ ಜಂಬೂ ಸವಾರಿ ಮೆರವಣಿಗೆಗೆ ವಿದ್ಯುಕ್ತ ಚಾಲನೆ ನೀಡಿದರು.**

ಶರನ್ನವರಾತ್ರಿಯ ನಂತರ ವಿಜಯದಶಮಿ ದಿನವಾದ ಇಂದು ನಡೆದ ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆ ವೈಶಿಷ್ಟತೆಯನ್ನು ಇಮ್ಮಡಿಗೊಳಿಸಿತು. 'ಮೈಸೂರು ದಸರಾ, ಎಷ್ಟೊಂದು ಸುಂದರ' ಎಂಬ ನಾಣ್ನುಡಿಗೆ ಅರ್ಥ ತುಂಬುವಂತೆ ದಸರಾ ಜಂಬೂಸವಾರಿ ಮೆರವಣಿಗೆ ವರ್ಣರಂಜಿತವಾಗಿ ನೆರವೇರಿತು.

ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಇಂದು ಮಧ್ಯಾಹ್ನ 1 ರಿಂದ 1.18 ಗಂಟೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪ್ರದಾಯದಂತೆ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿದರು.

ಗಜಪಡೆಯ ಕ್ಯಾಪ್ಟನ್ ಅಭಿಮನ್ಯು ಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಾ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪನೆಗೊಂಡಿದ್ದ ನಾಡದೇವತೆ ತಾಯಿ ಚಾಮುಂಡೇಶ್ವರಿಯ ಮೂರ್ತಿಯನ್ನು ವೇದಿಕೆ ಬಳಿ ಹೊತ್ತು ತಂದಾಗ ಇಂದು ಸಂಜೆ 4.42 ರಿಂದ 5.06 ಗಂಟೆಯೊಳಗೆ ಸಲ್ಲುವ ಶುಭ ಕುಂಭ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಇತರೆ ಗಣ್ಯರು ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ರಾಜ್ಯ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಹಾಗೂ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸಹ ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿದರು. ಪುಷ್ಪಾರ್ಚನೆ ವೇಳೆ ರಾಷ್ಟ್ರಗೀತೆ ಮೊಳಗಿದಾಗ 21 ಕುಶಾಲ ತೋಪುಗಳನ್ನು ಸಿಡಿಸಿ ಗೌರವ ವಂದನೆ ಸಲ್ಲಿಸಲಾಯಿತು. ಈ ವೇಳೆ ನೆರೆದಿದ್ದ ಸಾವಿರಾರು ಜನರು ಎದ್ದುನಿಂತು ಗೌರವ ಸಲ್ಲಿಸಿದರು. ನಂತರ, ಕುಮ್ಕಿ ಆನೆಗಳಾದ ಕಾವೇರಿ ಮತ್ತ ರೂಪ ಜೊತೆ ಅಭಿಮನ್ಯು ಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಾ ಮೆರವಣಿಗೆಯಲ್ಲಿ ಸಾಗಿದನು. ಈ ಬಾರಿ ದಸರಾ ಉದ್ಘಾಟನೆ ಮಾಡಿದ ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅವರು ಕುಟುಂಬ ಸಮೇತರಾಗಿ ಜಂಬೂಸವಾರಿ

■ 9ನೇ ಪುಟಕ್ಕೆ

ಇಂದು ಸಿನಿಮಾ ಪುರವಣಿ ಸ್ಥಳಾಭಾವದಿಂದ ಪ್ರಕಟವಾಗಿಲ್ಲ. ಇದನ್ನು ಶನಿವಾರದ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

## ವಿಶಿಷ್ಟ ಸಂಗೀತ, ಡ್ರೋನ್‌ಗಳ ಆಕೃತಿ ಚಿತ್ತಾರ; ಪಂಜಿನ ಫಲಕಗಳ ಬೆಳಕಿನ ಚಮತ್ಕಾರ




ಮೈಸೂರು ಅಶ್ವಾರೋಹಿ ದಳದ ರೋಚಕ ಟೆಂಟ್ ಪೆಗ್ಗಿಂಗ್. ಬಲಚಿತ್ರದಲ್ಲಿ ಧಾರವಾಡದ ಪೊಲೀಸ್ ತರಬೇತಿ ಶಾಲೆಯ ಪ್ರಶಿಕ್ಷಣಾರ್ಥಿಗಳ ಆಕರ್ಷಕ ಪಂಜಿನ ಕವಾಯತು ಪ್ರದರ್ಶನ.

ಮೈಸೂರು, ಅ.2(ಎಸ್‌ಬಿಡಿ)– ಬನ್ನಿಮಂಟಪ ಮೈದಾನದಲ್ಲಿ ಅತ್ಯಾಕರ್ಷಕ ಪಂಜಿನ ಕವಾಯತು ಪ್ರದರ್ಶನದೊಂದಿಗೆ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಗುರುವಾರ ರಾತ್ರಿ ವರ್ಣರಂಜಿತ ತೆರೆಬಿದ್ದಿತು.

ತಾಯಿ ಚಾಮುಂಡೇಶ್ವರಿ ವಿರಾಜಮಾನಳಾಗಿದ್ದ ಚಿನ್ನದ ಅಂಬಾರಿಯನ್ನು ಹೊತ್ತು ಅರ್ಜುನ ಬನ್ನಿಮಂಟಪ ತಲುಪಿದ ನಂತರ ಇಲ್ಲಿನ ಮೈದಾನದಲ್ಲಿ ಅಂತಿಮ ಹಂತದ ವೈವಿಧ್ಯಮಯ ಕಾರ್ಯ ಕ್ರಮ ಪ್ರಸ್ತುತಿಗೊಂಡವು. ಕಿಕ್ಕಿರಿದಿದ್ದ ಜನ ಸಮೂಹ ಆಕರ್ಷಕ ಪಥ ಸಂಚಲನ, ಅತ್ಯಮೋಘ ಡ್ರೋನ್ ಶೋ, ಅಶ್ವಪಡೆಯ ಸಾಹಸ, ವಿಶಿಷ್ಟ ವಾದ್ಯ ಸಂಗೀತ, ಪಂಜಿನ ಕವಾಯತು, ಬಾಣ ಬಿರುಸು ಗಳ ಚಿತ್ತಾರದ ರಸಾಯನವನ್ನು ಸವಿದು, ಸಂಭ್ರಮಿಸಿದರು.



ರಾಷ್ಟ್ರೀಯ ಗೌರವ ವಂದನೆ ಬಳಿಕ ಕಿಂಗ್ ಪವರ್ ಅಶ್ವದಲ್ಲಿ ಆಗಮಿಸಿದ ಖಡ್ಗಧಾರಿ ಪ್ರಧಾನ ದಳಪತಿ ಕೆ.ಎನ್.ಸುರೇಶ್, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಕವಾಯತು ವರದಿ ಸಲ್ಲಿಸಿ, ನಿಶ್ಚಲ ದಳಗಳ ಪರಿವೀಕ್ಷಣೆಗೆ ಆಹ್ವಾನಿಸಿದರು. ಬಳಿಕ ರಾಜ್ಯ ಪಾಲರು ತೆರೆದ ಜೀಪ್‌ನಲ್ಲಿ ದಳಗಳ ಪರಿವೀಕ್ಷಣೆ ಮಾಡಿದರು. ನಿಶಾನೆ ಆಧರಿಸಿ ಮೂರು ಸುತ್ತುಗಳಲ್ಲಿ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿ, ಕುಶಾಲತೋಪುಗಳ ಸಿಡಿಸಲಾಯಿತು. ಒಟ್ಟು 21 ಕುಶಾಲತೋಪುಗಳನ್ನು ಸಿಡಿಸಿದಾಗ ಪೊಲೀಸ್ ವಾದ್ಯ ವೃಂದ ರಾಷ್ಟ್ರಗೀತೆಯನ್ನೂ ಪೂರ್ಣವಾಗಿ ನುಡಿಸಿತು. ನಂತರ ಹಲವು ತುಕಡಿಗಳು ಶಿಸ್ತುಬದ್ಧ ಪಥಸಂಚ ಲನದ ಮೂಲಕ ಗಣ್ಯರಿಗೆ ವಂದನೆ ಸಲ್ಲಿಸಿ, ನಿರ್ಗಮಿಸಿದವು. ಗಾಯಕಿ ಚೈತ್ರಾ ಹಾಗೂ ಡಾ. ಸುಮಂತ್ ವಶಿಷ್ಠ ತಂಡದವರು ನಾಡಗೀತೆ ಪ್ರಸ್ತುತಪಡಿಸಿದರು.

**ವಿಶಿಷ್ಟ ವಾದ್ಯ ಸಂಗೀತ:** 'ಡಮರುಗ' ಶೀರ್ಷಿಕೆಯ ವಾದ್ಯ ಸಂಗೀತ ನೆರೆದಿದ್ದ ವರಿಗೆ ವಿಶಿಷ್ಟ ಅನುಭವ ನೀಡಿತು. ವಾದ್ಯ ಕಲಾವಿದರಾದ ಅರುಣ್ ಕುಮಾರ್ ಮತ್ತು ಗಣೇಶ್ ಗೋವಿಂದಸ್ವಾಮಿ ಸಂಯೋಜನೆಯಲ್ಲಿ

■ 9ನೇ ಪುಟಕ್ಕೆ



## ನಕ್ಕರೆ ಅದೇ ಸ್ವರ್ಗ

ಪೊಲೀಸ್ : ನೀನೇ ಅಲ್ವೆ ಮೂರು ಬಾರಿ ಒಂದೇ ಬಟ್ಟೆ ಅಂಗಡಿಯಲ್ಲಿ ಸೀರೆ ಕಳ್ಳತನ ಮಾಡಿದ್ದು!
ಕಳ್ಳ : ಹೌದು ಸ್ವಾಮಿ
ಪೊಲೀಸ್ : ಯಾಕಯ್ಯಾ ಒಂದೇ ಅಂಗಡಿಯಲ್ಲಿ ಮೂರು ಬಾರಿ ಸೀರೆ ಕಳ್ಳತನ ಮಾಡಿದೆ.
ಕಳ್ಳ : ಎರಡು ಸಲ ಕಳ್ಳತನ ಮಾಡಿದ ಸೀರೆ ನನ್ನ ಹೆಂಡತಿಗೆ ಇಷ್ಟವಾಗಲಿಲ್ಲ. ಅದಕ್ಕೆ ಮೂರನೇ ಬಾರಿ ಕಳ್ಳತನ ಮಾಡಿದೆ.

ಮೈಸೂರು ಮಿತ್ರ

ಶುಕ್ರವಾರ, 3 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತ ವಾಹಿನಿ......

ನಿಲ್ಲಲು ಕಲಿಸಿದ ತಾಯಿಯನ್ನು ಬೀಳದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ತಲೆ ಎತ್ತಿ ನಿಲ್ಲಲು ಕಲಿಸಿದ ತಂದೆಯನ್ನು ತಲೆ ತಗ್ಗಿಸದಂತೆ ನೋಡಿಕೊಳ್ಳುವುದು ಕೂಡ ನಮ್ಮ ಕರ್ತವ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.

## ನಿಮ್ಮ ಪತ್ರಗಳು

### ■ ಡಾ. ಎಸ್.ಎಲ್. ಭೈರಪ್ಪ ಅವರಿಗೆ ಜ್ಞಾನಪೀಠ ಪ್ರಶಸ್ತಿ ಮರಣೋತ್ತರವಾಗಿ ನೀಡುವರೇ?

ಮಾನ್ಯರೆ,



ಸರಸ್ವತಿ ಸಮ್ಮಾನ್, ಪದ್ಮಭೂಷಣ, ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ. ಎಸ್.ಎಲ್. ಭೈರಪ್ಪ ಅವರು ನಾಡಿನ ಸಾರಸ್ವತ ಲೋಕವನ್ನು ಬೆಳಗಿದ ಮಹನೀಯರು. ದೀರ್ಘ ಆಲೋಚನೆ, ಸುಧೀರ್ಘ ಅವಲೋಕನ, ಸಂಶೋಧನಾತ್ಮಕವಾದ ಬರಹ, ವಸ್ತುನಿಷ್ಠ ತುಲನೆ, ಪರಿಪಕ್ವವಾದ ವಿಚಾರ ಸಂಗ್ರಹ, ಅಕ್ಷರಗಳಿಂದ ಕಾದಂಬರಿ ಲೋಕವನ್ನು ಅದ್ವಿತೀಯವಾಗಿ ಅನಾವರಣಗೊಳಿಸಿದ ಬಹುಶ್ರುತ ಲೇಖಕ. ತಮ್ಮ ಕಾದಂಬರಿಗಳ ಮೂಲಕ ಹೊಸ ದಿಕ್ಸೂಚಿಯನ್ನು ತೋರಿದ ಮಹಾನ್ ಪ್ರೇರಕ ಶಕ್ತಿ, ಬರಹದ ಮೂಲಕವೇ ಭವ್ಯತೆಯ ಕಡೆಗೆ ನಡೆದ ಅಕ್ಷರ ಸಂತ. ಅವರನ್ನು ಕಳೆದುಕೊಂಡಿರುವ ನಾಡಿನ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಆದರೆ ಅವರು ತಮ್ಮ ಅಕ್ಷರಗಳಿಂದ ಅನುಗಾಲವೂ ನಮ್ಮೊಡನೆ ಬದುಕಿರುತ್ತಾರೆ. ಪ್ರತಿ ಅಕ್ಷರದಲ್ಲೂ ಅವರ ಅಸ್ಮಿತೆ, ಅವರ ಚಿಂತನೆ, ಅವರ ಆಲೋಚನೆ, ಅವರ ಬರಹಗಳು ಬಹುವಾಗಿ ನಮ್ಮನ್ನು ಪ್ರೇರಣೆಯ ಕಡೆಗೆ ಕೊಂಡೊಯ್ಯುತ್ತವೆ ಎಂದೋ ಬರಲೇಬೇಕಾಗಿದ್ದ ಜ್ಞಾನಪೀಠವನ್ನು ತಪ್ಪಿಸಿದ ಪುಣ್ಯಾತ್ಮರಿಗೆ ಈ ಮೂಲಕ ಒಂದು ಸಂದೇಶ. ಎಲ್ಲರಿಗೂ ಒಂದು ಅಂತ್ಯವಿದೆ. ಆದರೆ ಒಂದು ಅಂತ್ಯ ಹೊಸ ಆರಂಭಕ್ಕೆ ಕಾರಣವಾಗಬೇಕು. ಅದು ಸೃಷ್ಟಿಯ ನಿಯಮ. ಭೈರಪ್ಪನವರು ಬರಹದ ಮೂಲಕ ನಮ್ಮ ನಡುವೆ ಬದುಕಿದ್ದಾರೆ. ಅವರಿಗೆ ಜ್ಞಾನಪೀಠ ತಪ್ಪಿಸಿದವರಿಗೆ ಹೇಗೆ ನಮ್ಮೊಡನೆ ಬದುಕಿರಲು ಸಾಧ್ಯ? ಈಗ ಸಮಾಧಾನವಾಗಿರಬಹುದೇನೋ ಇದನ್ನು ಅರ್ಥಮಾಡಿಕೊಳ್ಳುವವರು ಅರ್ಥಮಾಡಿಕೊಳ್ಳಲಿ. ಜ್ಞಾನ ಕಣಜಕ್ಕೆ ಬರಲೇಬೇಕಾಗಿದ್ದ ಜ್ಞಾನಪೀಠ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡುವರೇ? ಎನ್ನುವ ಆಶಯ.

**–ಡಾ. ಗುಣವಂತ, ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕ, ಮೈಸೂರು.**

### ■ ಎಲ್ಲಾ ಜಾತಿಯವರು ತಮ್ಮಗಳ ಜಾತಿ ಮಾತ್ರ ಬರೆಸಿ, ಉಪಜಾತಿ ಬರೆಸಬೇಡಿ

ಮಾನ್ಯರೆ,

ಜಾತಿಗಣತಿ ಬಗ್ಗೆ ನೀವುಗಳು ಅಂದರೆ ಮತದಾರರು, ಜಾತಿಭೇದ, ಪಕ್ಷಭೇದ ಬಿಟ್ಟು ನಾಯಕರ, ಮಠಾಧಿಪತಿಗಳ ಮಾತನ್ನು ಕೇಳಬೇಡಿ. ಏಕೆಂದರೆ ನಾಯಕರುಗಳಿಗೆ ಮತದ ಬಗ್ಗೆ ಯೋಚನೆ, ಹಿರಿಯ ಮಠಾಧಿಪತಿಗಳಿಗೆ ಅಸಕ್ತಿ ಇಲ್ಲ. ಉಳಿಕೆ ಕಿರಿಯ ಕೆಲ ಮಠಾಧಿಪತಿಗಳು ಹಿರಿಯರು ಮಾತಾಡಲಿ ಅಂತ, ಉಳಿದ ಕೆಲ ಮಠಾಧಿಪತಿಗಳು ಆಸ್ತಿ ಉಳಿಸಿಕೊಳ್ಳುವ ಬಗ್ಗೆ ಚಿಂತೆ. ಅದ್ದರಿಂದ ಒಮ್ಮತದ ಹೇಳಿಕೆ ನೀಡಲು ಯಾರೂ ಮುಂದೆ ಬರುತ್ತಿಲ್ಲ. ನಾವುಗಳು ಹುಟ್ಟಿರುವುದು ಜಾತ್ಯಾತೀತ ದೇಶ ಭಾರತದಲ್ಲಿ. ಆದ್ದರಿಂದ ನಾವುಗಳು ನಮ್ಮ ಧರ್ಮ, ಜಾತಿಗಳನ್ನು ಬರೆಸೋಣ.

**ಧರ್ಮ:** ಹಿಂದೂ, ಇತರರು ತಮ್ಮ ಧರ್ಮ ಬರೆಸಿ.

**ಜಾತಿ :** ಒಕ್ಕಲಿಗ, ಲಿಂಗಾಯಿತ, ಬ್ರಾಹ್ಮಣ, ಕುರುಬ, ನಿಮ್ಮ ಜಾತಿ ಬರೆಸಿ. ಇತರರು ನಿಮ್ಮ ಜಾತಿ ಬರೆಸಿ. ನಿಮ್ಮಗಳ ಉಪಜಾತಿ ಬರೆಸಬೇಡಿ. ಇತರರು ತಮ್ಮ ಉಪ ಜಾತಿ ಬರೆಸಬೇಡಿ. ಏಕೆಂದರೆ ಮುಖ್ಯಮಂತ್ರಿಯವರು ಕುರುಬ ಅಂತ ಮಾತ್ರ ಬರೆಸಿ, ಉಪಜಾತಿ ಬರೆಸಬೇಡಿ ಎಂದು ಹೇಳಿದ್ದಾರೆ. ಆದ್ದರಿಂದ ಮುಖ್ಯಮಂತ್ರಿಗಳ ಮಾತಿಗೆ ಮಾನ್ಯತೆ ನೀಡಿ ಎಲ್ಲಾ ಜಾತಿಯವರು ತಮ್ಮಗಳ ಜಾತಿ ಮಾತ್ರ ಬರೆಸಿ, ಉಪಜಾತಿ ಬರಸಬೇಡಿ.

**–ಬಿ.ಶಿವರುದ್ರಪ್ಪ, ರಾಮಕೃಷ್ಣನಗರ , ಹಿರಿಯ ನಾಗರಿಕ, ಮೈಸೂರು.**

### ■ ತುತ್ತೂರಿ ನಿಷೇಧ ಸ್ವಾಗತಾರ್ಹ!

ಮಾನ್ಯರೆ,

ಈ ಬಾರಿಯ ದಸರಾ ಮಹೋತ್ಸವದಲ್ಲಿ ತುತ್ತೂರಿ ನಿಷೇಧಿಸಿರುವುದು ನಿಜಕ್ಕೂ ಉತ್ತಮ ನಿರ್ಧಾರ. ಏಕೆಂದರೆ ಇಷ್ಟು ವರ್ಷಗಳ ಕಾಲ ಪಡ್ಡೆ ಹುಡುಗರು ನಗರದ ಪ್ರಮುಖ ರಸ್ತೆಗಳಾದ ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸ್ ರಸ್ತೆ, ಧನ್ವಂತರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಝಾನ್ಸಿರಾಣಿ ಲಕ್ಷ್ಮೀಬಾಯಿ ರಸ್ತೆ, ಕಾಳಿದಾಸ ರಸ್ತೆ, ದಸರಾ ವಸ್ತುಪ್ರದರ್ಶನ, ಫಲಪುಷ್ಪ ಪ್ರದರ್ಶನ, ಅರಮನೆ, ಜಂಬೂ ಸವಾರಿ ದಿವಸ ಹೀಗೆ ಅನೇಕ ಕಡೆಗಳಲ್ಲಿ ತುತ್ತೂರಿ ಊದಿ ಸಾರ್ವಜನಿಕರಿಗೆ ಬಹಳ ಕಿರುಕುಳ ಕೊಡುತ್ತಿದ್ದರು. ಅದನ್ನು ನಿಷೇಧಿಸಿರುವುದು ಸ್ವಲ್ಪ ನೆಮ್ಮದಿ ತಂದಿದೆ. ಈ ಪ್ರಮುಖ ನಿರ್ಧಾರ ತೆಗೆದುಕೊಂಡ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರಿಗೆ ಅಭಿನಂದನೆಗಳು. ಅವರು ಮೈಸೂರಿನಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸೇವೆ ಸಲ್ಲಿಸಲಿ ಎಂಬುದೇ ನಮ್ಮೆಲ್ಲರ ಆಶಯ.

**–ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು**

### ■ ಆರೋಗ್ಯ ಸಂಜೀವಿನಿ ಯೋಜನೆಗೆ ಪಿಂಚಣಿದಾರರನ್ನು ಸೇರಿಸಲಿ

ಮಾನ್ಯರೆ,

ರಾಜ್ಯ ಸರ್ಕಾರವು ತನ್ನ ಹಾಲಿ ನೌಕರರಿಗೆ ಆರೋಗ್ಯ ಸಂಜೀವಿನಿ ಯೋಜನೆಯನ್ನು ತಂದಿರುವುದು ಸ್ವಾಗತಾರ್ಹ. ಆದರೆ ಇದು ಆಡಳಿತ ಯಂತ್ರ ಮತ್ತು ಆಸ್ಪತ್ರೆಯ ಸಿಬ್ಬಂದಿಯ ಸೇವಾ ಅರ್ಪಣಾ ಮನೋಭಾವದ ಮೇಲೆ ನಿಂತಿದೆ. ಈ ಯೋಜನೆಯಲ್ಲಿ ಹಾಲಿ ಸೇವೆಯಲ್ಲಿರುವ ನೌಕರರು ಮತ್ತು ಅವರ ಕುಟುಂಬ ವರ್ಗದವರನ್ನು ಸೇರ್ಪಡಿಸಿರುವುದು ಶ್ಲಾಘನೀಯ. ಆದರೆ ಇಷ್ಟು ವರ್ಷ ಸೇವೆ ಸಲ್ಲಿಸಿ, ಹಾಲಿ ನಿವೃತ್ತರಾಗಿರುವ ಪಿಂಚಣಿದಾರರು ಮತ್ತು ಅವರ ಕುಟುಂಬದವರನ್ನು ಸೇರಿಸಬೇಕಾಗಿತ್ತು. ಹಾಲಿ ಸೇವೆಯಲ್ಲಿರುವವರಿಗಿಂತ ನಿವೃತ್ತರ ದೇಹಾರೋಗ್ಯ, ಹಣಕಾಸಿನ ಸ್ಥಿತಿಯಲ್ಲಿ ದುರ್ಬಲರಾಗಿದ್ದಾರೆ. ಅಂತಹವರಿಗೆ ದಯೆ, ಮರುಕ ತೋರುವುದು ಆದ್ಯ ಕರ್ತವ್ಯ. ಎಲ್ಲಾ ಸೌಲಭ್ಯ ಪಡೆಯುತ್ತಿರುವ ನಾವೇ ಆಯ್ದ ಶಾಸಕರು ಪಕ್ಷಬೇಧ ಬಿಟ್ಟು, ಈ ಯೋಜನೆಯಲ್ಲಿ ನಿವೃತ್ತರನ್ನು ಮತ್ತು ಕುಟುಂಬದವರನ್ನು ಸೇರಿಸಲು ಕೈ ಜೋಡಿಸಲಿ. ಬೇಕಾದ ವಂತಿಗೆಯನ್ನು ಅವರ ಪಿಂಚಣಿಯಿಂದ ಹಿಡಿದುಕೊಳ್ಳಲಿ.

**–ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ, ಮೈಸೂರು.**

# ಗೋಲ್ಡ್ ಕಾರ್ಡ್ ಖರೀದಿಸಿದವರಿಗೆ ಅವಮಾನ!

## ಜಿಲ್ಲಾಡಳಿತಕ್ಕೆ ಹಿಡಿಶಾಪ







ಮೈಸೂರು, ಅ.2(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಬಹು ಆಕರ್ಷಣೆಯಾದ 'ಜಂಬೂ ಸವಾರಿ' ವೀಕ್ಷಣೆಗೆಂದು ಗೋಲ್ಡ್ ಕಾರ್ಡ್ ಖರೀದಿಸಿದ್ದರೂ ಪ್ರವೇಶ ಸಿಗದೆ ವಾಪಸ್ಸಾದ ಹಲವರು ಜಿಲ್ಲಾಡಳಿತದ ವಿರುದ್ಧ ತೀವ್ರ ಅಸಮಾದಾನ ಹೊರಹಾಕಿದ್ದಾರೆ.

ಅರಮನೆ ಆವರಣದಲ್ಲಿ ಗೋಲ್ಡ್ ಕಾರ್ಡ್ ಇದ್ದವರಿಗೆ ವರಾಹ ದ್ವಾರದ ಮೂಲಕ ಪ್ರವೇಶ ನೀಡಿ, ಪ್ರತ್ಯೇಕವಾಗಿ ಆಸನಗಳ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಆದರೆ, ಮಧ್ಯಾಹ್ನ 12.30ರ ನಂತರ ಬಂದವರಿಗೆ ಪ್ರವೇಶ ನಿರಾಕರಿಸಿದ ಪೊಲೀಸರು, ಫುಲ್ ಆಗಿದೆ. ಜಾಗ ಇಲ್ಲ ಎಂದು ವಾಪಸ್ ಕಳುಹಿಸಿದರು. ಅದಕ್ಕೂ ನಮ್ಮನ್ನು ಬಿಡುತ್ತಾರೆಂದು ಗಂಟೆಗಟ್ಟಲೇ ಕಾದರೂ ಯಾವುದೇ ಪ್ರಯೋಜನವಾಗದೆ ವಾಪಸ್ಸಾಗುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಈ ವೇಳೆ ಆಕ್ಷೇಪ ವ್ಯಕ್ತಪಡಿಸಿದ ಅಖಿಲ ಭಾರತ ಗ್ರಾಹಕರ ಕಲ್ಯಾಣ ಪರಿಷತ್‌ನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಾ.ಎಂ.ಪಿ. ವರ್ಷ, 6500 ರೂ.ಕೊಟ್ಟು ಖರೀದಿಸಿದ ದಸರಾ ಗೋಲ್ಡ್ ಕಾರ್ಡಿಗೆ ಬೆಲೆ ಇಲ್ಲವೇ... ಗೋಲ್ಡ್ ಕಾರ್ಡ್ ತೋರಿಸಿ ಎಷ್ಟೇ ಗೋಗರೆದರೂ ಒಳಗಡೆ ಬಿಡದೆ ಜಿಲ್ಲಾಡಳಿತ ಗ್ರಾಹಕರನ್ನು ವಂಚಿಸಿದೆ ಎಂದು ದೂರಿದರು.

ಮಧ್ಯಾಹ್ನ 12 ಗಂಟೆಯಷ್ಟರಲ್ಲಿ ಗೋಲ್ಡ್ ಕಾರ್ಡ್ ಸೀಟ್ ಫುಲ್ ಆಗಿದೆ ಎಂದರೆ ಏನರ್ಥ. ಹಾಗಾದರೆ ಏಕೆ ಗೋಲ್ಡ್ ಕಾರ್ಡ್ ಮಾರಾಟ ಮಾಡಲಾಗಿದೆ. ಜನರ ಹಣಕ್ಕೆ ಬೆಲೆಯೇ ಇಲ್ಲವೆ. ಗೋಲ್ಡ್ ಕಾರ್ಡ್ ಇದ್ದರೂ ಪ್ರವೇಶ ನೀಡದ ಜಿಲ್ಲಾಡಳಿತದ ವಿರುದ್ಧ ಹಕ್ಕುಗಳ ಕಾಯಿದೆ 2019ರ ಪ್ರಕಾರ ಸೂಕ್ತ ದಂಡನೆಯಾಗಬೇಕು. ಇಲ್ಲವೇ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

**ಕುಟುಂಬ ಸಮೇತ ಬಂದಿದ್ದೂ ವೇಸ್ಟ್ ಆಯ್ತು:** ಹಾಸನದಿಂದ ಕುಟುಂಬ ಸಮೇತರಾಗಿ ಬಂದಿದ್ದ ವ್ಯಕ್ತಿಯೊಬ್ಬರು, ನಾವು 6 ಜನ ಗೋಲ್ಡ್ ಕಾರ್ಡ್ ಖರೀದಿಸಿ ಬಂದಿದ್ದೇವೆ. ಜಂಬೂ ಸವಾರಿ ಆರಂಭಕ್ಕೆ ಇನ್ನೂ ಗಂಟೆಗೂ ಹೆಚ್ಚು ಸಮಯವಿದ್ದರೂ ಪ್ರವೇಶ ನೀಡಲಿಲ್ಲ. ಗೋಲ್ಡ್ ಕಾರ್ಡ್ ಇದ್ದವರಿಗೆ ಆಸನ ವ್ಯವಸ್ಥೆ ಮಾಡದ ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾಗೆಯೇ ಬೆಂಗಳೂರಿನಿಂದ ಬಂದಿದ್ದ ಮಹಿಳೆ ಹಾಗೂ ವ್ಯಕ್ತಿಯೊಬ್ಬರು ಜಿಲ್ಲಾಡಳಿತದ ವಿರುದ್ಧ ಹಿಡಿ ಶಾಪ ಹಾಕಿದರಲ್ಲದೆ ಒಳಗಡೆ ಎಂಟ್ರಿ ಇರಲಿ ಕುಡಿಯಲು ನೀರಿಲ್ಲ. ಸರಿಯಾದ ಆಸನ ವ್ಯವಸ್ಥೆ ಮಾಡಿಲ್ಲ. ಜಿಲ್ಲಾಡಳಿತ ಜನರ ಹಣ ಲೂಟಿ ಮಾಡಿದೆ ಎಂದು ಕಿಡಿಕಾರುತ್ತಾ ವಾಪಸ್ ತೆರಳಿದರು.

## ಪಂಜಿನ ಕವಾಯತು ವೀಕ್ಷಣೆಗೆ ತೆರಳಿದ್ದ ಯುವಕನ ಮೇಲೆ ಹಲ್ಲೆ; ಪೊಲೀಸರ ವಿರುದ್ಧ ಆರೋಪ



ಮೈಸೂರು, ಅ.2 (ಪಿಎಂ, ಎಲ್‌ಎನ್‌ವೈ)– ಪಾಸ್ ಇದ್ದರೂ ಪಂಜಿನ ಕವಾಯತು ವೀಕ್ಷಣೆಗೆ ಅವಕಾಶ ನೀಡದೇ ಯುವಕನೊಬ್ಬನ ಮೇಲೆ ಪೊಲೀಸರು ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಬನ್ನಿಮಂಟಪದ ಪಂಜಿನ ಕವಾಯತು ಮೈದಾನದ ಸುತ್ತಲ ಎಲ್ಲಾ ಗೇಟ್‌ಗಳಲ್ಲಿ ಪಾಸ್ ಇದ್ದವರಿಗೆ ಮಾತ್ರವೇ ಒಳ ಪ್ರವೇಶಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ವೇಳೆ ಮುಖದ ಮೇಲೆ ರಕ್ತದ ಕಲೆಗಳಿರುವ ಯುವಕ ಹಾಗೂ ಆತನ ಸಂಗಡಿಗರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದ ದೃಶ್ಯ ಕಂಡು ಬಂದಿತು.

'ನಾಗರಿಕರ ಮೇಲೆ ಈ ರೀತಿ ದೌರ್ಜನ್ಯ ಮಾಡಲು ಇವರಿಗೆ ಯಾರು ಅಧಿಕಾರ ಕೊಟ್ಟವರು. ಹೇಳುವವರು, ಕೇಳುವವರು ಯಾರೂ ಇಲ್ಲವೇ' ಎಂದು ಈ ಯುವಕರು ಕಿಡಿಕಾರುತ್ತಿದ್ದರು. ಹಲ್ಲೆಗೊಳಗಾದವರ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

## ನೂಕು ನುಗ್ಗಲಿನಲ್ಲಿ ಸಿಲುಕಿಕೊಂಡಿದ್ದ ಹಿರಿಯರಿಗೆ ಪೊಲೀಸರಿಂದ ರಕ್ಷಣೆ




ಮೈಸೂರು,ಅ.2 (ಜಿಎ)–ನೂಕು ನುಗ್ಗಲಿನಲ್ಲಿ ಸಿಲುಕಿಕೊಂಡು ಅಸ್ವಸ್ಥರಾದ ಹಿರಿಯ ಮಹಿಳೆಯರು, ಮಕ್ಕಳು, ಯುವತಿಯರನ್ನು ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಸಿಬ್ಬಂದಿಗಳು ರಕ್ಷಿಸಿ, ಶುಶ್ರೂಷೆ ಮಾಡಿದರು. ವಿಶ್ವವಿಖ್ಯಾತ ದಸರಾ ಜಂಬೂಸವಾರಿ ವೀಕ್ಷಣೆಗಾಗಿ ಬೆಳಗ್ಗೆಯಿಂದಲ್ಲೇ ಚಾಮರಾಜೇಂದ್ರ ವೃತ್ತ, ಕೆಆರ್ ವೃತ್ತ, ಸಯ್ಯಾಜಿರಾವ್ ರಸ್ತೆಯ ಇಕ್ಕೆಲ್ಲಗಳಲ್ಲಿ ಕುಳಿತುಕೊಂಡಿದ್ದ ಸಾಕಷ್ಟು ಹಿರಿಯ ಮಹಿಳೆಯರು ಮಧ್ಯಾಹ್ನ ಆಗುತ್ತಿದ್ದಂತೆ ನೂಕು ನುಗಲಿಗೆ ಅಸ್ವಸ್ಥಗೊಂಡವರನ್ನು ತಕ್ಷಣ ಪೊಲೀಸ್ ಸಿಬ್ಬಂದಿ ರಕ್ಷಣೆ ಮಾಡಿದ್ದರು.

ಪುಟ್ಟ ಪುಟ್ಟ ಮಕ್ಕಳು ಬ್ಯಾರಿಗೇಡ್ ನಡುವೆ ಸಿಲುಕಿಕೊಂಡಿದ್ದ ದೃಶ್ಯ ಕಂಡ ತಕ್ಷಣ ಪೊಲೀಸರು ಮಕ್ಕಳನ್ನು ಬ್ಯಾರಿಗೇಡ್‌ನಿಂದ ಹೊರತಂದು ವೃತ್ತದ ಪಕ್ಕದಲ್ಲಿ ಕೂರಿಸಿದರು. ಆದರೆ, ಮಕ್ಕಳು ಅಮ್ಮ, ಅಪ್ಪ ಬೇಕು ಎಂದು ಅಳಲು ಆರಂಭಿಸುತ್ತಿದ್ದಂತೆ ಮಹಿಳಾ ಪೊಲೀಸ್ ಸಿಬ್ಬಂದಿಗಳು ಅವರಿಗೆ ಕುಡಿಯಲು ನೀರು ಕೊಟ್ಟು ಸಂತೈಸಿದರು.

60 ವರ್ಷ ಮೇಲ್ಪಟ್ಟ ಹಲವಾರು ಮಹಿಳೆಯರು ಬ್ಯಾರಿಗೇಡ್ ಹಿಂಭಾಗದಲ್ಲಿ ಗುಂಪಿನ ನಡುವೇ ಸಿಲುಕಿ ಉಸಿರಾಟ ಸಮಸ್ಯೆಯಿಂದ ನರಳಲು ಆರಂಭಿಸಿದ್ದರು. ತಕ್ಷಣ ಅವರನ್ನು ಮೂವರು ಪೊಲೀಸರು ಬ್ಯಾರಿಗೇಡ್‌ನಿಂದ ಹಾರಿ ಹೊತ್ತುಕೊಂಡು ವೃತ್ತದ ಬಳಿ ಹಾಕಿದ ಕುರ್ಚಿಗಳ ಮೇಲೆ ಕೂರಿಸಿ ಶುಶ್ರೂಷೆ ಮಾಡಿದರು.

## ಕಿಡಿಗೇಡಿಗಳಿಂದ ಮಹಿಳೆಯರು, ಮಕ್ಕಳ ಗೋಳಾಟ; ಪುಂಡರ ನಿಯಂತ್ರಿಸಲು ಪೊಲೀಸರ ಹರಸಾಹಸ





ಮೈಸೂರು, ಅ.2(ಪಿಎಂ)– ಪ್ರತಿವರ್ಷದಂತೆ ಈ ಬಾರಿಯೂ ಹಲವಡೆ ಕಿಡಿಗೇಡಿಗಳ ನೂಕಾಟಕ್ಕೆ ಮಹಿಳೆಯರು ಹಾಗೂ ಮಕ್ಕಳು ನರಕ ಯಾತನೆ ಅನುಭವಿಸಿದರು. ಕಿಡಿಗೇಡಿಗಳ ನಿಯಂತ್ರಣಕ್ಕೆ ಪೊಲೀಸರು ಹರಸಾಹಸ ಪಡಬೇಕಾಯಿತು.

ಚಾಮರಾಜ ಒಡೆಯರ್ ವೃತ್ತ (ದೊಡ್ಡ ಗಡಿಯಾರ ಕಡೆ), ಆಲ್ಬರ್ಟ್ ವಿಕ್ಟರ್ ರಸ್ತೆ (ಜಯಚಾಮರಾಜ ಒಡೆಯರ್ ವೃತ್ತದ ಕಡೆ), ಕೆಆರ್ ವೃತ್ತದಲ್ಲಿ ಸಯ್ಯಾಜಿರಾವ್ ರಸ್ತೆಯ ನಗರ ಬಸ್ ನಿಲ್ದಾಣದ ಕಡೆ, ದೇವರಾಜ ಅರಸು ರಸ್ತೆ ಕಡೆಗಳಲ್ಲಿ ಅಳವಡಿಸಿದ್ದ ಬ್ಯಾರಿಕೇಡ್‌ಗಳ ಹಿಂಭಾಗದಲ್ಲಿ ಪುಂಡರ ನೂಕಾಟ ಹಾಗೂ ಕಿಡಿಗೇಡಿತನಕ್ಕೆ ಮಕ್ಕಳು ಹಾಗೂ ಮಹಿಳೆಯರು ಹೈರಾಣಾದರು. ಅಲ್ಲದೆ, ಹೈವೇ ವೃತ್ತದಲ್ಲಿ ಸಾಗುವ ಮೆರವಣಿಗೆ ವೀಕ್ಷಿಸಲು ಜೋಡಿ ತೆಂಗಿನಮರ ಸ್ಮಶಾನ ರಸ್ತೆಯಲ್ಲಿ ಸಹ ಜನ ಸೇರಿದ್ದರು. ಇಲ್ಲಿಯೂ ಕಿಡಿಗೇಡಿಗಳು, ಹಿಂದಿನಿಂದ ನೂಕಾಟ ನಡೆಸುತ್ತಿದ್ದರು.

ಪೊಲೀಸರು ಲಾಠಿ ಬಿಸಿ ಕಿಡಿಗೇಡಿಗಳಿಗೆ ಎಚ್ಚರಿಕೆ ನೀಡಿದರು. ಅದಾಗ್ಯೂ ನಿಯಂತ್ರಣಕ್ಕೆ ಬರದಿದ್ದ ಸ್ಥಳಗಳಲ್ಲಿ ಬ್ಯಾರಿಗೇಡ್ ಹತ್ತಿ ಪೊಲೀಸರೇ ತೆರಳಿ ಕಿಡಿಗೇಡಿಗಳನ್ನು ನಿಯಂತ್ರಸಬೇಕಾಯಿತು. ಇಂತಹ ಸ್ಥಳಗಳಲ್ಲಿ ನೂಕಾಟ ತಡೆಯಲಾರದೇ ಕಣ್ಣೀರಾಕುತ್ತಿದ್ದ ಮಕ್ಕಳು ಹಾಗೂ ಮಹಿಳೆಯರನ್ನು ಪೊಲೀಸರು ಬ್ಯಾರಿಕೇಡ್‌ನಿಂದ ಒಳಗೆ ಕರೆದು ಮೆರವಣಿಗೆ ಮಾರ್ಗದ ಬದಿಯಲ್ಲಿ ಕೂರಿಸುವ ಕ್ರಮ ವಹಿಸಿದ್ದರು. ಪ್ರತಿವರ್ಷವೂ ಮೆರವಣಿಗೆ ಮಾರ್ಗಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಕೂರುವ ಸ್ಥಳಗಳಲ್ಲಿ ಇದೇ ಪರಿಸ್ಥಿತಿ ಉದ್ಭವಿಸುತ್ತಿದ್ದು, ಇಂತಹ ಸ್ಥಳಗಳಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸುವುದು ಅಗತ್ಯವಾಗಿದೆ.

## ಪಂಜಿನ ಕವಾಯತಿಗೆ ಪಾಸಿದ್ರೂ ಬಿಡಲಿಲ್ಲ

ಮೈಸೂರು,ಅ.2(ಪಿಎಂ)– ಪಂಜಿನ ಕವಾಯತು ಕಾರ್ಯಕ್ರಮ ಆಯೋಜಿಸಿದ್ದ ಬನ್ನಿಮಂಟಪದ ಮೈದಾನದ ಸುತ್ತಲು ಭಾರೀ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಕಳೆದ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಭಾರೀ ಬಿಗಿ ಭದ್ರತೆ ಕೈಗೊಳ್ಳಲಾಗಿತ್ತು. ಮೈದಾನದ ಎಲ್ಲಾ ಗೇಟ್‌ಗಳಲ್ಲೂ ಜನದಟ್ಟಣೆ ಆಗದಂತೆ ಸಾಕಷ್ಟು ದೂರದಲ್ಲೇ ಬ್ಯಾರಿಕೇಡ್‌ಗಳನ್ನು ಹಾಕಿ ಸಾರ್ವಜನಿಕರನ್ನು ನಿಯಂತ್ರಿಸಲಾಯಿತು.

ನೆಲ್ಸನ್ ಮಂಡೇಲಾ ರಸ್ತೆ, ಮೈಸೂರು–ಬೆಂಗಳೂರು ರಸ್ತೆ, ಹನುಮಂತನಗರ ರಸ್ತೆ, ಮೆರವಣಿಗೆಯಲ್ಲಿ ಬರುವ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಗಳು ಸಾಗುವ ರಸ್ತೆಗಳಲ್ಲಿ ಭಾರೀ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು.

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ್ದ ಕಾಲ್ತುಳಿತ ಹಾಗೂ ತಮಿಳುನಾಡಿನ ಕರೂರಿನಲ್ಲಿ ನಡೆದ ಕಾಲ್ತುಳಿತ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಈ ರೀತಿಯ ಕಟ್ಟೆಚ್ಚರ ವಹಿಸಲಾಗಿತ್ತು.



ಪೊಲೀಸರ ಭಾರೀ ಭದ್ರತೆ ಹಿನ್ನೆಲೆಯಲ್ಲಿ ಬನ್ನಿಮಂಪಟದ ಪಂಜಿನ ಕವಾಯತು ಮೈದಾನಕ್ಕೆ ಸಂಪರ್ಕ ಕಲ್ಪಿಸುವ ನೆಲ್ಸನ್ ಮಂಡೇಲಾ ರಸ್ತೆಯು ಎಲ್‌ಐಸಿ ವೃತ್ತದ ಸಮೀಪದಲ್ಲಿ ಕಾರ್ಯಕ್ರಮ ಆರಂಭವಾಗುವ ವೇಳೆಯಲ್ಲಿ ಜನದಟ್ಟಣೆ ಇಲ್ಲದಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಅಲ್ಲದೆ, ಪಾಸ್ ಇದ್ದರೂ ಒಳಪ್ರವೇಶಿಸಲು ಅವಕಾಶ ನೀಡದೇ ವಾಪಸ್ ಕಳುಹಿಸಿದ್ದಾರೆ ಎಂದು ಹಲವರು ಕಿಡಿಕಾರುತ್ತಿದ್ದ ದೃಶ್ಯ ಸಹ ಮೈದಾನದ ಬಳಿ ಕಂಡು ಬಂದಿತು. ಆಸನಗಳು ಭರ್ತಿಯಾಗಿವೆ ಎಂಬ ಕಾರಣವನ್ನು ಪೊಲೀಸರು ನೀಡುತ್ತಿದ್ದು, ಹಾಗಿದ್ದಲ್ಲಿ ನಮ್ಮ ಪಾಸ್‌ನ ಆಸನಗಳಲ್ಲಿ ಯಾರನ್ನು ಕೂರಿಸಿದ್ದಾರೆ ಎಂದು ಒಳಗೆ ಹೋಗಲು ಅವಕಾಶ ದೊರೆಯದ ಸಾರ್ವಜನಿಕರು ಪ್ರಶ್ನಿಸಿ, ಆಕ್ರೋಶ ವ್ಯಕ್ತಪಡಿಸಿದರು.

## ಜಂಬೂ ಸವಾರಿ ನಕಲಿ ಪಾಸ್; ಓರ್ವ ಪೊಲೀಸರ ವಶಕ್ಕೆ!

ಮೈಸೂರು, ಅ.2(ವಿವಿಹೆಚ್)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಅಂಗವಾದ ಜಂಬೂಸವಾರಿ ವೀಕ್ಷಿಸಲು



ರಾಜ್ಯದ ಮೂಲೆ ಮೂಲೆಗಳಿಂದ ಜನರು ಆಗಮಿಸಿದ್ದರು. ಅರಮನೆ ಆವರಣದಲ್ಲಿ ಜಂಬೂ ಸವಾರಿ ಕಣ್ತುಂಬಿಕೊಳ್ಳಲು ಜಿಲ್ಲಾಡಳಿತದ ವತಿಯಿಂದ ಪಾಸ್ ವಿತರಣೆ ಮಾಡಲಾಗಿತ್ತು. ಅದರನ್ವಯ ಇಂದು ಅರಮನೆ ಆವರಣಕ್ಕೆ ಪ್ರವೇಶ ಪಡೆಯುವ ವೇಳೆ ವ್ಯಕ್ತಿಯೊಬ್ಬ ನಕಲಿ ಪಾಸ್ ತೋರಿಸಿ ಈಗ ಪೊಲೀಸರ ಅತಿಥಿಯಾಗಿದ್ದಾನೆ. ಪೊಲೀಸರು ಆತನನ್ನು ವಿಚಾರಣೆಗೆ ಒಳಪಡಿಸಿದಾಗ ಅದು ನಕಲಿ ಪಾಸ್ ಎಂಬುದು ಗೊತ್ತಾಗಿದೆ. ತಕ್ಷಣ ಆ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದಾರೆ. ವ್ಯಕ್ತಿಯ ಗುರುತು ಮತ್ತು ಮಾಹಿತಿಯನ್ನು ಪೊಲೀಸರು ಬಹಿರಂಗಪಡಿಸಿಲ್ಲ. ಸದ್ಯ ಈ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಒಂದೆಡೆ ಪೊಲೀಸರ ಕ್ರಮಕ್ಕೆ ಶಬ್ಬಾಸ್ ಎಂದರೆ, ಮತ್ತೊಂದೆಡೆ ನಮ್ಮ ಬಳಿ ಪಾಸ್ ಇದ್ದು ನಮ್ಮನ್ನು ಪೊಲೀಸರು ಒಳಗೆ ಬಿಟ್ಟಿಲ್ಲ ಎಂದು ಕೆಲವರು ಬೇಸರ ಹೊರಹಾಕಿದ್ದಾರೆ.

## ಬರೀ 40 ನಿಮಿಷದಲ್ಲಿ ಸುಭದ್ರ ರೀತಿ ಅಭಿಮನ್ಯು ಮೇಲೆ ಅಂಬಾರಿ ಕಟ್ಟಿದ ವಿಶೇಷ ಸಿಬ್ಬಂದಿ

ಮೈಸೂರು, ಅ.2(ಎಂಟಿವೈ)– ಮಳೆಯ ನಡುವೆಯೂ ಗಜಪಡೆಯ ಕ್ಯಾಪ್ಟನ್ ಅಭಿಮನ್ಯುವಿನ ಮೇಲೆ ಮಾವುತರ ತಂಡ 40 ನಿಮಿಷದಲ್ಲೇ ಅಚ್ಚುಕಟ್ಟಾಗಿ ಅಂಬಾರಿ ಕಟ್ಟಿ ಸೈ ಎನಿಸಿಕೊಂಡರು.

ಅರಮನೆಯ ಕೋಡಿ ಸೋಮೇಶ್ವರ ದೇವಾಲಯದ ಬಳಿ ಅಂಬಾರಿ ಆನೆ ಅಭಿಮನ್ಯುವಿಗೆ ಗಾದಿ, ನಮ್ದಾ ಕಟ್ಟಿ ಮಧ್ಯಾಹ್ನ 3.30ರ ವೇಳೆಗೆ ಅಂಬಾರಿ ಕಟ್ಟುವ ಸ್ಥಳಕ್ಕೆ ಕರೆತರಲಾಯಿತು. ಅಷ್ಟರಲ್ಲಾಗಲೇ ಅರಮನೆಯಿಂದ ಚಿನ್ನದ ಅಂಬಾರಿಯನ್ನು ಜಿಲ್ಲಾಡಳಿತದ ವಶಕ್ಕೆ ತೆಗೆದುಕೊಂಡು ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಅದಕ್ಕೆ ಹೂವಿನ ಅಲಂಕಾರ ಮಾಡಲಾಗಿತ್ತು. ಕ್ರೇನ್ ಸ್ಥಳದಲ್ಲಿ ಅಂಬಾರಿ ಆನೆ ಅಭಿಮನ್ಯುವನ್ನು ನಿಲ್ಲಿಸಿದ ಬಳಿಕ ಟ್ರ್ಯಾಲಿಯಲ್ಲಿ ಅಂಬಾರಿಯನ್ನು ಬಿಗಿ ಭದ್ರತೆಯಲ್ಲಿ ತರಲಾಯಿತು.

ಈ ವೇಳೆ ಭಾರೀ ಹಗ್ಗದಿಂದ ಅಂಬಾರಿಯನ್ನು ಕಟ್ಟಿ, ರಾಟೆ ಮೂಲಕ ಹಂತ ಹಂತವಾಗಿ ಮೇಲೆತ್ತಲಾಯಿತು. ನಂತರ ಅಭಿಮನ್ಯು ಮೇಲೆ ನಿಧಾನವಾಗಿ ಇರಿಸಿ, ಬಿಗಿಯಾಗಿ ಕಟ್ಟಲಾಯಿತು. ಸಿಬ್ಬಂದಿ ಅಕ್ರಂ ನೇತೃತ್ವದಲ್ಲಿ ವಿಶೇಷ ಮಾವುತರು ಹಾಗೂ ಇನ್ನಿತರ ಸಿಬ್ಬಂದಿ ಕೇವಲ 40 ನಿಮಿಷದಲ್ಲಿಯೇ ಅಚ್ಚುಕಟ್ಟಾಗಿ ಕಟ್ಟಿದರು. ನಂತರ ರಾಜವಂಶಸ್ಥರ ನಿವಾಸದ ಬಳಿ ಸೆಲ್ಯೂಟ್ ಹೊಡೆಸಲಾಯಿತು.

ಸಂಜೆ 4.19ಕ್ಕೆ ಒಡೆಯರ್ ನಿವಾಸದ ಮುಂಭಾಗದಿಂದ ಅಂಬಾರಿ ಹೊತ್ತು ಹೊರಟ ಅಭಿಮನ್ಯು, ತ್ರಿನೇಶ್ವರ ಸ್ವಾಮಿ ದೇವಾಲಯ, ಜಯಮಾರ್ತಾಂಡ ದ್ವಾರದ ರಸ್ತೆ, ವರಹಾ ಸ್ವಾಮಿ ದೇವಾಲಯದ ಪಕ್ಕದ ರಸ್ತೆಯ ಎರಡೂ ಬದಿಯ ಆಸನದಲ್ಲಿ ಕುಳಿತಿದ್ದವರಿಗೆ ಅಂಬಾರಿ ದರ್ಶನ ಮಾಡಿಸಿ, ಸಂಜೆ 4.40ಕ್ಕೆ ಪುಷ್ಪಾರ್ಚನೆ ಸ್ಥಳಕ್ಕೆ ಕರೆತರಲಾಯಿತು. ಪುಷ್ಪಾರ್ಚನೆಯ ಮುಹೂರ್ತ 4.42ರಿಂದ 5.06ರವರೆಗೆ ಸಲ್ಲುವ ಶುಭ ಕುಂಭದಲ್ಲಿ ನಿಗಧಿಯಾಗಿದ್ದರಿಂದ, ಅಂಬಾರಿ ಹೊತ್ತ ಅಭಿಮನ್ಯು ಬಂದೊಡನೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಗಣ್ಯರು ವೇದಿಕೆ ಏರಿದರು. ಬಳಿಕ ನಿಗದಿತ ಮುಹೂರ್ತದಲ್ಲಿ ಪುಷ್ಪಾರ್ಚನೆ ಮಾಡಿದ ಬಳಿಕ ಅಭಿಮನ್ಯು ನೇತೃತ್ವದ ಜಂಬೂಸವಾರಿ ಸಾಗಿತು.

## ಅಗ್ನಿ ಅವಘಡ ತಡೆಗೆ ಅಗ್ನಿಶಾಮಕ ದಳದ 250 ಸಿಬ್ಬಂದಿ ಕಾರ್ಯನಿರ್ವಹಣೆ

ಮೈಸೂರು,ಅ.2(ಜಿಎ)–ಜಂಬೂಸವಾರಿ ಮೆರವಣಿಗೆ ಸಾಗುವ ಮಾರ್ಗದಲ್ಲಿ ಯಾವುದೇ ರೀತಿಯ ಅಗ್ನಿ ಅನಾಹುತ ಸಂಭವಿಸಿದರೆ ತುರ್ತಾಗಿ ಸ್ಪಂದಿಸಲು ಅಗ್ನಿಶಾಮಕ ದಳದ 250 ಸಿಬ್ಬಂದಿ ಕಾರ್ಯನಿರ್ವಹಿಸಿದರು.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ರಾಮನಗರ ಜಿಲ್ಲೆಯ ಒಟ್ಟು 20ಕ್ಕೂ ಹೆಚ್ಚು ಜಲವಾಹನ, 10 ಕ್ಷಿಪ್ರ ಸ್ಪಂದನ ವಾಹನ ಸೇರಿ ವಿವಿಧ ಸೇವೆಯ 30 ತುರ್ತು ಸೇವಾ ವಾಹನಗಳನ್ನು ಬಳಕೆ ಮಾಡಲಾಯಿತು.

## ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ರಾಜ್ಯಪಾಲ ಗೆಹ್ಲೋಟ್



ಸುತ್ತೂರು ಮಠದಲ್ಲಿ 'ಏಕ್ ಪೌಧಾ ಮಾ ಕೆ ನಾಮ್' ಶೀರ್ಷಿಕೆಯಡಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಗಿಡ ನೆಟ್ಟರು.

ಮೈಸೂರು, ಅ.2(ಎಸ್‌ಪಿಎನ್)– ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಗುರುವಾರ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಮೈಸೂರು ಬನ್ನಿಮಂಟಪದ ಪಂಜಿನ ಕವಾಯಿತು ಕಾರ್ಯಕ್ರಮಕ್ಕೆ ಹೋಗುವ ಮುನ್ನ 'ಏಕ್ ಪೌಧಾ ಮಾ ಕೆ ನಾಮ್' ಶೀರ್ಷಿಕೆಯಡಿ ಭೇಟಿಯ ಸ್ಮರಣಾರ್ಥ ಗಿಡ ನೆಟ್ಟರು. ಬಳಿಕ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದು, ಕೆಲ ನಿಮಿಷಗಳ ಕಾಲ ಶ್ರೀಗಳೊಂದಿಗೆ ಕುಶಲೋಪರಿ ಮಾತುಕತೆ ನಡೆಸಿ, ಬನ್ನಿಮಂಟಪಕ್ಕೆ ತೆರಳಿದರು.

ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ(ಗ್ರೇಡ್–1) ಎಸ್.ಪಿ. ಮಂಜುನಾಥ್, ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಸಿ.ಜಿ.ಬೆಟ್ಸೂರ್ ಮಠ ಸೇರಿದಂತೆ ಸಿಬ್ಬಂದಿಗಳಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಒಂದೆಡೆ ಅಂಬಾರಿ ನೋಡುವ ಕಾತುರ; ಕಾದು ಕುಳಿತ ಕೆಲವರು ಹಸಿವಿನಿಂದ ಕಂಗಾಲು

## ಲಾರಿ ಮೇಲತ್ತಲು 50 ರೂ. ಕೊಡಲೇಬೇಕು




ಲಾರಿಗಳ ಮೇಲೆ ನಿಂತು ದಸರಾ ಕಣ್ತುಂಬಿಕೊಂಡ ಜನರು

ಮೈಸೂರು, ಅ.2(ವಿವಿಹೆಚ್)– ಜಂಬೂಸವಾರಿ ವೀಕ್ಷಣೆಗೆ ರಾಜ್ಯದ ನಾನಾ ಮೂಲೆಗಳಿಂದ ಲಕ್ಷಾಂತರ ಜನರು ಮೈಸೂರಿಗೆ ಆಗಮಿಸಿದ್ದರು. ಕೆಲವರು ತೀವ್ರ ಬಿಸಿಲು, ಹಸಿವಿ ನಿಂದ ಬಳಲಿದ್ದರು. ಇಂತಹವರಿಗೆ ಸಕಾಲದಲ್ಲಿ ಚಿಕಿತ್ಸೆ ಒದಗಿಸಿಕೊಡಲಾಯಿತು.

ಸಯ್ಯಾಜಿ ರಾವ್ ರಸ್ತೆಯ ಗುರು ಸ್ವೀಟ್ಸ್, ಬಾಟಾ ಶೋ ರೂಂ, ಆಯುರ್ವೇದ ಆಸ್ಪತ್ರೆ ವೃತ್ತ, ಕೆ.ಆರ್. ವೃತ್ತ, ಬಂಬೂ ಬಜಾರ್ ಮಾರ್ಗದಿಂದ, ಬನ್ನಿಮಂಟಪದವರೆಗೆ ಲಕ್ಷಾಂತರ ಜನರು ಜಂಬೂಸವಾರಿಯನ್ನು ಕಣ್ತುಂಬಿಕೊಂಡರು. ಸ್ಥಳ ಅಭಾವ ಉಂಟಾಗಬಹುದು ಎಂದು ಅಂದಾಜಿಸಿದ ಕೆಲವರು ಆಯುಧ ಪೂಜೆಯಂದೆ ಜಂಬೂ ಸವಾರಿ ರಸ್ತೆಯ ಬದಿಗಳಲ್ಲಿ ಟಾರ್ಪಾಲಿನ್, ಛಾಪೆಯ ಹಾಸಿ, ಕಲ್ಲಿಟ್ಟು ಹೋಗಿದ್ದರು. ಇಂದು ಇಲ್ಲೇ ಠಿಕಾಣಿ ಹೂಡಿದ್ದರು. ಹಾಗಾಗಿ ಹಲವು ಮಂದಿ ಹಸಿವು, ಬಾಯಾರಿಕೆಯಿಂದ ಬಳಲಿ ಸುಸ್ತಾಗಿದ್ದರು. ಇದನ್ನು ಅರಿತ ಸ್ಥಳೀಯ ಪೊಲೀಸರು, ಅಸ್ವಸ್ಥರನ್ನು ಸಕಾಲದಲ್ಲಿ ಆಂಬ್ಯುಲೆನ್ಸ್ ಸಹಾಯದಿಂದ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಿ ಮಾನವೀಯತೆ ಮೆರೆದರು.



ಆಟೋ ಮೇಲೆ ನಿಂತು ದಸರಾ ವೀಕ್ಷಿಸಿದ ಪುಟ್ಟ ಪೋರಿಯರು.

**ಲಾರಿ ಮೇಲೆ ನಿಲ್ಲಲು 50 ರೂ.:** ಈ ಬಾರಿ ಯಾವುದೇ ಹಳೆಯ ಕಟ್ಟಡಗಳ ಮೇಲೆ ರದಂತೆ ನಿಯಮ ಜಾರಿಗೆ ತಂದಿದ್ದನ್ನು ಬಳಸಿಕೊಂಡ ಸ್ಥಳೀಯರು ಇತ್ತ ದಸರಾ ಜಂಬೂ ಸವಾರಿ ವಿಕ್ಷಣೆಗೆಂದು ಬರುವವರಿಗೆ ಅನುವುಮಾಡಿಕೊಡುವ ಉದ್ದೇಶದಿಂದ ತಮ್ಮ ಲಾರಿಗಳನ್ನು ಜಂಬೂ ಸವಾರಿ ಸಾಗುವ ಮಾರ್ಗದಲ್ಲಿ ನಿಲ್ಲಿಸಿ ಅವುಗಳ ಮೇಲೆ ಜನರ ಹತ್ತಿಸಿ ದಸರಾ ನೋಡಲು ಅನುವು ಮಾಡಿಕೊಟ್ಟು ಹಣ ವಸೂಲಿ ಮಾಡುತ್ತಿದ್ದು ಕಂಡುಬಂದಿತ್ತು ಎಂದು ಕೆಲವರು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ

ನಗರದ ಆರ್‌ಎಂಸಿ ನಿಲ್ದಾಣದ ಬಳಿ ಜನರು ಲಾರಿ ಮಾಲೀಕರಿಗೆ ತಲಾ 50 ರೂ. ನೀಡಿ ಲಾರಿ ಮೇಲೆ ನಿಂತು ದಸರಾ ಮೆರವಣಿಗೆ ವೀಕ್ಷಿಸಿದರು. ಮಾರು ಕಟ್ಟೆಯ ಬಳಿಯಿದ್ದ ಬಹುತೇಕ ಲಾರಿಗಳ ಮೇಲೆ ನಿಂತಿದ್ದ ಪ್ರೇಕ್ಷಕ ಸಮೂಹ ಜಂಬೂ ಸವಾರಿಯನ್ನು ಕಣ್ತುಂಬಿಕೊಂಡಿತು.

**ತಮ್ಮದೇ ವಾಹನಗಳು, ಡಿವೈಡರ್, ಬ್ಯಾರಿಕೇಡ್ ಮೇಲೆ ನಿಂತು ದಸರಾ ಕಣ್ತುಂಬಿಕೊಂಡ ಜನರು:** ಜನರು ಎತ್ತರದ ಕಟ್ಟಡಗಳಲ್ಲಿ ನಿಂತು ಜಂಬೂ ಸವಾರಿ ಕಣ್ತುಂಬಿಕೊಳ್ಳಲು ತಮ್ಮದೇ ವಾಹನಗಳು, ರಸ್ತೆ ಮಧ್ಯದ ಡಿವೈಡರ್‌ಗಳು, ಖಾಕಿ ಪಡೆಯ ಬ್ಯಾರಿಕೇಡ್‌ಗಳ ಆಶ್ರಯಿಸಿದರು. ಇಕ್ಕೆಲಗಳಲ್ಲಿ ಒಟ್ಟೊಟ್ಟಾಗಿ ನಿಂತು ದಸರಾ ನೋಡಿ ಆನಂದಿಸಿದರು.

**ಬೀದಿಬದಿ ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರ:** ಬೆಳಗ್ಗೆಯಿಂದಲೇ ಜಂಬೂ ಸವಾರಿ ಸಾಗುವ ರಸ್ತೆ ಬದಿಯಲ್ಲಿ ಜಾಂಡ ಹೂಡಿದ್ದ ಜನರಿಗೆ ಸಮಯಕ್ಕೆ ಸರಿಯಾಗಿ ಅವರ ಹಸಿವು, ದಾಹ ನೀಗಿಸುವ ಕೆಲಸವನ್ನು ಬೀದಿಬದಿ ವ್ಯಾಪಾರಿಗಳು ಮಾಡಿದರು. ಚುರುಮುರಿ, ಕಡಲೆಕಾಯಿ, ಸೌತೆಕಾಯಿ, ಹೆಚ್ಚಾಗಿ ನೀರಿನ ಬಾಟಲಿಗಳ ವ್ಯಾಪಾರ ಜೋರಾಗಿತ್ತು.

> ಕಳೆದ ಎರಡು ವರ್ಷಗಳಿಂದ ದಸರಾ ನೋಡಲು ಬರುತ್ತಿದ್ದೇನೆ. ಅಭಿಮನ್ಯು ನನ್ನ ನೆಚ್ಚಿನ ಆನೆ. ಗೆಳೆಯರೊಂದಿಗೆ ಬಂದು ದಸರಾ ನೋಡುವುದೇ ಆನಂದ. ಈ ಬಾರಿ ಬಹಳ ವ್ಯವಸ್ಥಿತವಾಗಿ ದಸರಾ ಆಯೋಜನೆಯಾಗಿರುವುದು ಸಂತಸ ತಂದಿದೆ.
> –ವಿನೋದ್ ಕುಮಾರ್.ವಿ, ಚಾಮರಾಜನಗರ



> ಇದು ನಮ್ಮೂರ ಹಬ್ಬ. ನಾಡಿನ ಹೆಸರಾಂತ, ಹೆಮ್ಮೆಯ ಪ್ರತೀಕವಾದ ಈ ಹಬ್ಬದಲ್ಲಿ ಪಾಲ್ಗೊಳ್ಳುವುದೇ ಒಂದು ಪುಣ್ಯದ ಕೆಲಸ. ನಮ್ಮ ಅಭಿಮನ್ಯು ವಿರಾಜಮಾನವಾಗಿ ಜಂಬೂ ಸವಾರಿ ಹೊತ್ತು ಯಶಸ್ವಿಯಾಗಿದ್ದಾನೆ. ಈ ಬಾರಿಯ ದಸರಾದಲ್ಲಿ ಪೊಲೀಸರ ಕಾರ್ಯಕ್ಷಮತೆ ಶ್ಲಾಘನೀಯ.
> –ಶಶಾಂಕ್.ಹೆಚ್.ಎಸ್, ಹೆಬ್ಯಾ ಗ್ರಾಮ, ಮೈಸೂರು.



**ಜಂಬೂಸವಾರಿ ವೀಕ್ಷಣೆಗೆ ಬಂದವರಿಗೆ ಅನ್ನಸಂತರ್ಪಣೆ:** ಇತ್ತ ಜಂಬೂ ಸವಾರಿ ವೀಕ್ಷಣೆಗೆ ಬಂದಿದ್ದ ಜನರಿಗೆ ದೇವರಾಜು ಅರಸು ರಸ್ತೆ, ಧನ್ವಂತರಿ ರಸ್ತೆ, ಚಿಕ್ಕ ಗಡಿಯಾರ ಮುಂಭಾಗ ಸೇರಿದಂತೆ ಹಲವು ಕಡೆಗಳಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಹಸಿವಿನಿಂದ ಬಳಲಿದ್ದ ಜನರು ಬಾತು, ಸಿಹಿ ಪೊಂಗಲ್, ಮೊಸರನ್ನ, ಪುಳಿಯೋಗರೆ ಸವಿದರು.

**ಕಲಾ ತಂಡಗಳ ತಮಟೆ ಸದ್ದಿಗೆ ಫುಲ್ ಸ್ಟೆಪ್ಸ್:** ಇತ್ತ ಗಂಟೆಗಟ್ಟಲೇ ಕಾದು–ಕಾದು ನಿಂತ ಜನರಿಗೆ ಕಲಾ ತಂಡಗಳು ಸಕತ್ ಮನರಂಜನೆ ನೀಡಿದವು. ನಗಾರಿ, ತಮಟೆ, ಡೊಳ್ಳು ಸದ್ದಿಗೆ ಹಸಿವು, ಬಳಲಿಕೆಯಾವುದನ್ನು ಲೆಕ್ಕಿಸದ ವೀಕ್ಷಕರು ಮನಸ್ಸೋಇಚ್ಛೆ ಕುಣಿದು ಕುಪ್ಪಳಿಸಿದರು.

## ಡಿಕೆಶಿಗೆ ಗೋಪಿ ಆಶೀರ್ವಾದ...



ಮೈಸೂರು ಅರಮನೆ ಆವರಣದಲ್ಲಿ ಜಂಬೂ ಸವಾರಿ ವೇಳೆ ನೌಫತ್ ಆನೆ ಗೋಪಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆಶೀರ್ವದಿಸಿದ ಪರಿ...



## PUBLIC NOTICE

Notice is hereby given that M/S NEULITE PRODUCTS PRIVATE LIMITED, is desirousto sell the Schedule Property hereunder written, to my client and any person or persons claiming any interest on the under mentioned Schedule Property or any part thereof, is hereby required to communicate the same to me with documentary evidence at my office, situated at Door No.2765/1A D13/A1, "KEY-ANS", 5th Main Road, V.V. Puram (V.V. Mohalla), Mysore 570 002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

### SCHEDULE PROPERTY

Plot No.315-A formed in Sy.No.376-Part, Sy.No.377-Part, Sy.No.317- Part, situated at Hebbal Industrial Area, Hebbal Village, Kasaba Hobli, Mysore Taluk, Mysore District, site measuring 3990.00 Square Meters with building thereon and bounded on East: KIADB Road, West: Plot No.314, North: Plot No.315-B and South: KIADB Road.

Sd/- Dhirendra Kumar R. Mehta
Advocate
KEY-ANS LAW SOLUTIONS
Date: 30.09.2025, Place: Mysore

## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು–570029, ಶಕ್ತಿನಗರ, ಸಾತಗಳ್ಳಿ ಬಿ ಜೋನ್, ರಿಂಗ್ ರಸ್ತೆ ಹತ್ತಿರ, ಮನೆ ನಂ.2157 ಇಲ್ಲಿ ವಾಸವಾಗಿರುವ ಮೊಹಮ್ಮದ್ ಸಿರಾಜುದ್ದೀನ್ ರವರ ಮಗನಾದ ವಾಸೀಂ ಪಾಷ ಮತ್ತು ಮೈಸೂರು ಸಿಟಿ–570019, ಉದಯಗಿರಿ, ತ್ರಿವೇಣಿ ಸರ್ಕಲ್, ಟೆಂಪಲ್ ರಸ್ತೆ, ಮನೆ ನಂ.454 ರಲ್ಲಿ ವಾಸವಾಗಿರುವ ಲೇಟ್॥ ಪಾರೇಜಾನ್ ರವರ ಮಗನಾದ ಅಲ್ಲಾಬಕಾಷ್ ರವರಿಗೆ ಸೇರಿದ ಸ್ವತ್ತಾದ ಕ್ರಯಪತ್ರ ಸಂಖ್ಯೆ ಎಂಡಿಎ–1–00485–2025–26ರ 4ನೇ ಹಾಳೆ ದಿನಾಂಕ: 26–09–2025ರಂದು ಕಳೆದು ಹೋಗಿರುತ್ತದೆ. ಇದರ ಸಂಬಂಧ ದಿನಾಂಕ 29.09.2025 ರಂದು ಮೈಸೂರಿನ ಪೊಲೀಸ್ ಠಾಣೆಗೆ ದೂರಿನ ಸಂಖ್ಯೆ 1827688/2025 ರಂತೆ ದೂರನ್ನು ದಾಖಲಿಸಿರುತ್ತಾರೆ. ಸದರಿ ಮೇಲ್ಕಂಡ ಕ್ರಯಪತ್ರವು ಯಾರಿಗಾದರೂ ದೊರಕಿದಲ್ಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ತಲುಪಿಸತಕ್ಕದ್ದು. ಒಂದೊಮ್ಮೆ ಯಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಕ್ರಯಪತ್ರವು ದುರುಪಯೋಗಪಡಿಸಿಕೊಂಡಲ್ಲಿ ಸದರಿ ವ್ಯಕ್ತಿಗಳೇ ಹೊಣೆಗಾರರಾಗುತ್ತಾರೆ. ಹಾಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಲೋಹಿತ್ ಎನ್, ವಕೀಲರು
ಶ್ರೀ ಸಾಯಿ ಲಾ–ಅಸೋಸಿಯೇಟ್ ನಂ.2967/2, 14ನೇ ಮೇನ್, 2ನೇ ಕ್ರಾಸ್, ಸರಸ್ವತಿಪುರಂ –570009
ಮೊಬೈಲ್ ನಂ.9611113323
ದಿನಾಂಕ :30/09/2025, ಸ್ಥಳ : ಮೈಸೂರು

ಕರ್ನಾಟಕ ಸರ್ಕಾರ

### ಕಾರ್ಯದರ್ಶಿಗಳ ಕಾರ್ಯಾಲಯ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ

ದೂರವಾಣಿ ಸಂಖ್ಯೆ: 08225–272128 ಫ್ಯಾಕ್ಸ್ ಸಂಖ್ಯೆ: 08225–272123
Email: sec.mmtemple@gmail.com

ನಂ.ಶ್ರೀ ಮ.ಮ.ಕ್ಷೇ.ಅ.ಪ್ರಾ/ಉಗ್ರಾಣ/5/ಪಿಆರ್/64/2025–26 ದಿನಾಂಕ: 23–09–2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

| ಕ್ರಮ ಸಂಖ್ಯೆ | ಟೆಂಡರ್ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ ರೂ.ಗಳಲ್ಲಿ |
|---|---|---|---|
| 1 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ನೀರು ಸರಬರಾಜು ವಿಭಾಗದ ನಿರ್ವಹಣೆಗೆ ಬೇಕಾದ ಬಿಡಿಭಾಗಗಳನ್ನು ಎಲ್ಲಾ ತೆರಿಗೆಗಳು, ಸಾಗಾಣಿಕೆ ವೆಚ್ಚ ಸೇರಿ ಒಂದು ವರ್ಷದ ಅವಧಿಗೆ ಸರಬರಾಜು ಮಾಡುವ ಬಗ್ಗೆ. | 34-00 | 85,000-00 |
| 2 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವಿದ್ಯುತ್ ಸರಬರಾಜು ವಿಭಾಗದ ನಿರ್ವಹಣೆಗೆ ಬೇಕಾದ ಬಿಡಿಭಾಗಗಳನ್ನು ಎಲ್ಲಾ ತೆರಿಗೆಗಳು, ಸಾಗಾಣಿಕೆ ವೆಚ್ಚ ಸೇರಿ ಒಂದು ವರ್ಷದ ಅವಧಿಗೆ ಸರಬರಾಜು ಮಾಡುವ ಬಗ್ಗೆ. | 29-00 | 72,500-00 |
| 3 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ವಿವಿಧ ಮಾದರಿಯ ಲೆಡ್ಜರ್ಸ್ ಪುಸ್ತಕಗಳು, ವಿಭೂತಿ ಕವರ್ಸ್, ಎನ್‌ವಲಪ್ ಕವರ್‌ಗಳನ್ನು ಮುದ್ರಿಸಿ ಎಲ್ಲಾ ತೆರಿಗೆಗಳು, ಸಾಗಾಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ. | 08-00 | 20,000-00 |

ವಿವರಗಳನ್ನು https://kppp.karnataka.gov.in/ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ದಿನಾಂಕ: 04–10–2025ರ ಸಂಜೆ 4.00 ಗಂಟೆಯೊಳಗಾಗಿ ಕಛೇರಿ ವೇಳೆಯಲ್ಲಿ ಮಾಹಿತಿ ವಿಷಯ ನಿರ್ವಾಹಕರಾದ ಶ್ರೀ ಎಂ.ಎನ್. ಶ್ರೀನಿವಾಸ್, ಮೊಬೈಲ್ ಸಂಖ್ಯೆ +91 8277088317 ನ್ನು ಸಂಪರ್ಕಿಸಬಹುದು.

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

| | | | |
|---|---|---|---|
| 1. | ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ | ದಿ: 20–09–2025 | ರ ನಂತರ |
| 2. | ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ | ದಿ: 06–10–2025 | ಸಂಜೆ 4 ಗಂಟೆವರೆಗೆ |
| 3. | ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ | ದಿ: 07–10–2025 | ಸಂಜೆ 5 ಗಂಟೆ ನಂತರ |

ಸಹಿ/– ಕಾರ್ಯದರ್ಶಿ,
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ
ಸಂ:ವಾಸಾಸಂಇ:ಚಾನಗರ:379:2025–26

# ಐತಿಹಾಸಿಕ ಸ್ಥಳ ಮಹಿಮೆ; ಧಾರ್ಮಿಕ ಕೇಂದ್ರಗಳ ಕಲಾನೈಪುಣ್ಯತೆ, ಆಧುನಿಕ ಕಾಲದ ಸಾಧನೆ ಸಾರಿದ 58 ಸ್ತಬ್ಧಚಿತ್ರಗಳು

## ಒಂದಕ್ಕಿಂತ ಒಂದು ಅತ್ಯಮೋಘ; ಅದ್ಭುತ ಮಾಹಿತಿ ಪ್ರಸಾರ

ಮೈಸೂರು, ಅ. 2(ಎಂಟಿವೈ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿ ಮೆರವಣಿಗೆಯಲ್ಲಿ ವಿವಿಧ ಪ್ರವಾಸಿ ತಾಣ ಹಾಗೂ ಸರ್ಕಾರದ ಹಲವು ಯೋಜನೆಗಳ ಮಾಹಿತಿ ಒದಗಿಸುವ 58 ಸ್ತಬ್ಧಚಿತ್ರಗಳು ಪಾಲ್ಗೊಂಡು ಮೆರವಣಿಗೆಗೆ ಮೆರಗು ನೀಡಿದವು.

ಅರಮನೆ ಆವರಣದಲ್ಲಿ ಗುರುವಾರ ಮಧ್ಯಾಹ್ನ 1.25ರಿಂದ ಆರಂಭವಾದ ಜಂಬೂಸವಾರಿ ಮೆರವಣಿಗೆಯಲ್ಲಿ ಕಲಾ ತಂಡಗಳ ನಡುವೆ ಸಾಗಿದ ಸ್ತಬ್ಧಚಿತ್ರಗಳು ಜಂಬೂ ಸವಾರಿ ವೀಕ್ಷಿಸಲು ಕಿಕ್ಕಿರಿದು ತುಂಬಿದ್ದ ಜನಸಾಗರವನ್ನು ಆಕರ್ಷಿಸಿದವು. ಇಂದು ರಾಷ್ಟ್ರಪಿತ ಮಹಾತ್ಮಗಾಂಧಿ ಜಯಂತಿಯೂ ಆಗಿರುವ ಹಿನ್ನೆಲೆಯಲ್ಲಿ ವಿವಿಧ ಜಿಲ್ಲೆಗಳು ನಿರ್ಮಿಸಿದ್ದ ಸ್ತಬ್ಧಚಿತ್ರಗಳಲ್ಲಿ ಗಾಂಧೀಜಿ ಅವರ ಸಂದೇಶ ಸಾರಲಾಗಿತ್ತು.

**ಕೆಎಸ್‌ಆರ್‌ಟಿಸಿ:** ಮೆರವಣಿಗೆಯ ಆರಂಭದಲ್ಲಿ ನಿಶಾನೆ, ಸಾಲಾನೆ, ನಂತರ ಎರಡು ಕಲಾ ತಂಡಗಳು ಸಾಗಿದ ಬಳಿಕ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿರುವ 'ಶಕ್ತಿ ಯೋಜನೆಯ ಯಶೋಗಾಥೆ' ಬಿಂಬಿಸುವ ಸ್ತಬ್ಧಚಿತ್ರ ಸಾಗಿತು. ಇದರಲ್ಲಿ ಶಕ್ತಿ ಯೋಜನೆ ಆರಂಭವಾದ ದಿನದಿಂದ ಉಚಿತ ಟಿಕೆಟ್ ಪಡೆದು ಪ್ರಯಾಣ ಅಲ್ಲದೆ 500 ಕೋಟಿ ಟಿಕೆಟ್ ವಿತರಣೆ ಮಾಡಿರುವ ಸಂದರ್ಭದ ಮಾಹಿತಿ ನೀಡಲಾಗಿತ್ತು. ಅಲ್ಲದೆ, ಸಾರಿಗೆ ಸಂಸ್ಥೆಯ ವಿವಿಧ ಬಸ್‌ಗಳ ಚಿತ್ರಣಗಳನ್ನು ಸ್ತಬ್ಧಚಿತ್ರದಲ್ಲಿ ಪ್ರತಿಬಿಂಬಿಸಲಾಗಿತ್ತು.

**ವಿಜಯದ ರನ್‌ವೇ:** ಹಿಂದೂಸ್ಥಾನ್ ಏರೋನಾಟಿಕ್ಸ್ ಸಂಸ್ಥೆ(ಹೆಚ್‌ಎಎಲ್) 'ವಿಜಯದ ರನ್ ವೇ – ಭಾರತದ ಆಕಾಶಕ್ಕೆ ಹೆಚ್‌ಎಎಲ್‌ನ ಶಕ್ತಿ' ಸ್ತಬ್ಧಚಿತ್ರ ಹೆಚ್‌ಎಎಲ್ ಸಾಧನೆ ಸಾರಿತು. ರಾಕೆಟ್, ಹೆಲಿಕಾಪ್ಟರ್, ಯುದ್ಧ ವಿಮಾನ ತಯಾರಿಸುವ ಪ್ರಾವಿಣ್ಯತೆಯನ್ನು ಸ್ತಬ್ಧಚಿತ್ರದ ಮೂಲಕ ಜನರಿಗೆ ಮನವರಿಕೆ ಮಾಡಿಕೊಟ್ಟಿತು.

**ಆತ್ಮನಿರ್ಭರ ಭಾರತ:** ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್(ಬಿಇಎಂಎಲ್) ನಿರ್ಮಿಸಿದ್ದ ಸ್ತಬ್ಧಚಿತ್ರದಲ್ಲಿ ಆತ್ಮ ನಿರ್ಭರ ಯೋಜನೆಯು ಭಾರತದ ರಕ್ಷಣಾ ವ್ಯವಸ್ಥೆಯಲ್ಲಿ ಸಾಧಿಸಿರುವ ಪ್ರಗತಿ ಕುರಿತು ಸಂದೇಶ ರವಾನಿಸಿತು. ಭಾರತೀಯ ಸೇನೆ ಬಳಸುವ ಟ್ರಕ್, ರಾಕೆಟ್‌ವೊಂದನ್ನು ಸಾಗಿಸುವ ಚಿತ್ರಣವನ್ನು ಸೊಗಸಾಗಿ ಮೂಡಿಸಲಾಗಿತ್ತು.

**ಭಾರತೀಯ ರೈಲ್ವೆ:** ಭಾರತೀಯ ರೈಲ್ವೆ ನಿರ್ಮಿಸಿದ್ದ ಸ್ತಬ್ಧಚಿತ್ರದಲ್ಲಿ 'ಚಿನಾಬ್ ಸೇತು ಮತ್ತು ಪಂಬನ್ ಸೇತು' ಚಿತ್ರಣ ಮೂಡಿತ್ತು. ಈ ಸ್ತಬ್ಧಚಿತ್ರದಲ್ಲಿ ಇಂಜಿನಿಯರ್ಸ್ ಚಾಕಚಕ್ಯತೆಯನ್ನು ಜನರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನವನ್ನು ಭಾರತೀಯ ರೈಲ್ವೆ ಇಲಾಖೆ ಮಾಡಿತ್ತು.

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ:** 1917ರಲ್ಲಿ ಕೆಆರ್‌ಎಸ್ ಜಲಾಶಯದ ನಿರ್ಮಾಣ ಕಾಮಗಾರಿಯಲ್ಲಿ ಭಾಗಿಯಾಗಿದ್ದ ಭೋವಿ ಜನಾಂಗದ ಶ್ರಮ, ಜಲಾಶಯಕ್ಕೆ ಬೇಕಾದ ರೀತಿಯಲ್ಲಿ ಕಲ್ಲು ಒಡೆಯುವ ಚಿತ್ರಣವನ್ನು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಸ್ತಬ್ಧಚಿತ್ರದಲ್ಲಿ ಸುಂದರವಾಗಿ ಮೂಡಿಸಲಾಗಿತ್ತು.

**ಮಂಡ್ಯ ಜಿಲ್ಲೆ:** ಮಹಾತ್ಮಗಾಂಧೀಜಿ ಜಯಂತಿ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ 'ಸ್ವಾತಂತ್ರ್ಯ ಹೋರಾಟದ ದೀಪ–ಶಿವಪುರದ ಧ್ವಜ ಸತ್ಯಾಗ್ರಹ' ಸ್ತಬ್ಧಚಿತ್ರದಲ್ಲಿ ಮಹಾತ್ಮ ಗಾಂಧೀಜಿ ಚರಕದಲ್ಲಿ ನೂಲು ತೆಗೆಯುತ್ತಿರುವ, ಮಹಾತ್ಮ ಗಾಂಧೀಜಿಯವರ ಚಿತಾಭಸ್ಮ ವಿಸರ್ಜನೆ ಮಾಡುವ, ಕೈಮಗ್ಗ ಹಾಗೂ ಇನ್ನಿತರ ಚಿತ್ರಣಗಳನ್ನು ಬಿಂಬಿಸಲಾಗಿತ್ತು.

**ಚಿಕ್ಕಬಳ್ಳಾಪುರ ಜಿಲ್ಲೆ:** 'ಜ್ಞಾನಿ–ವಿಜ್ಞಾನಿಗಳ ನಾಡು' ಶೀರ್ಷಿಕೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ನಿರ್ಮಿಸಿದ್ದ ಸ್ತಬ್ಧಚಿತ್ರದಲ್ಲಿ ಜಿಲ್ಲೆಯ ಧಾರ್ಮಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳ ಬಗ್ಗೆ ಮಾಹಿತಿ ನೀಡಲಾಗಿತ್ತು. ಕೈವಾರ ಯೋಗಿ ನಾರಾಯಣ ಯತೀಂದ್ರರು ಮತ್ತು ಶ್ರೀ ವೀರ ಬ್ರಹ್ಮೇಂದ್ರ ಸ್ವಾಮೀಜಿಯವರ ಪ್ರತಿಮೆಯೊಂದಿಗೆ ಅವರ ಕ್ಷೇತ್ರದ ಚಿತ್ರಣವನ್ನು ಈ ಸ್ತಬ್ಧಚಿತ್ರದಲ್ಲಿ ಬಿಂಬಿಸಲಾಗಿತ್ತು.

**ನಗರಾಭಿವೃದ್ಧಿ ಇಲಾಖೆ:** 'ಸ್ಮಾರ್ಟ್, ಶುದ್ಧ ಕಾಳಜಿಯ ನಗರಗಳು' ಶೀರ್ಷಿಕೆಯಲ್ಲಿ ನಗರಾಭಿವೃದ್ಧಿ ಇಲಾಖೆ ನಿರ್ಮಾಣ ಮಾಡಿದ ಸ್ತಬ್ಧಚಿತ್ರದಲ್ಲಿ ಇಂದಿರಾ ಕ್ಯಾಂಟೀನ್, ಸ್ಮಾರ್ಟ್ ಸಿಟಿ ಯೋಜನೆಯ ಸೌಲಭ್ಯ, ದಾವಣಗೆರೆಯ ರೈಲು ನಿಲ್ದಾಣ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ವಸತಿ ಸಮುಚ್ಚಯಗಳ ಚಿತ್ರಣವನ್ನು ನಿರ್ಮಿಸಲಾಗಿತ್ತು.

**ಮೈಸೂರು ಮಹಾನಗರ ಪಾಲಿಕೆ:** ಸ್ವಾಸ್ಥ್ಯ ಮತ್ತು ಸುಸ್ಥಿರ ಮೈಸೂರು ಹೆಸರಿನಲ್ಲಿ ಮೈಸೂರು ಮಹಾನಗರ ಪಾಲಿಕೆ, ಮೈಸೂರಿನ ಸುಂದರ ಚಿತ್ರಣ, ಮಹಾತ್ಮ ಗಾಂಧೀಜಿಯವರ ಪುತ್ಥಳಿ, ಕಸ ವಿಂಗಡಣೆ, ಪ್ಲಾಸ್ಟಿಕ್‌ನಿಂದಾಗುವ ತೊಂದರೆಗಳ ಬಗ್ಗೆ ಸ್ತಬ್ಧಚಿತ್ರದಲ್ಲಿ ಜನರಲ್ಲಿ ಜಾಗೃತಿ ಮೂಡಿಸುವ ಸಂದೇಶ ಸಾರಲಾಗಿತ್ತು.

**ಪಂಚ ಗ್ಯಾರಂಟಿ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕರ್ನಾಟಕದ ನವ ನಿರ್ಮಾಣಕ್ಕೆ ಗ್ಯಾರಂಟಿ ಸರ್ಕಾರ ಹೆಸರಿನಲ್ಲಿ ನಿರ್ಮಿಸಿದ್ದ ಸ್ತಬ್ಧಚಿತ್ರದಲ್ಲಿ ಕರ್ನಾಟಕ ಸರ್ಕಾರದ ಅನ್ನಭಾಗ್ಯ, ಗೃಹ ಜ್ಯೋತಿ, ಗೃಹ ಲಕ್ಷ್ಮಿ, ಯುವ ನಿಧಿ, ಶಕ್ತಿ ಯೋಜನೆಯ ಮಾಹಿತಿಯನ್ನು ರವಾನಿಸಲಾಗಿತ್ತು

ಮತ್ತಷ್ಟು ವರದಿ 7, 8ನೇ ಪುಟಕ್ಕೆ



ಮೈಸೂರಿನ ಕಾವೇರಿ ನೀರಾವರಿ ನಿಗಮದ ಕರುನಾಡಿನ ಜೀವನಾಡಿ ನದಿಗಳಿಂದ ಸಮೃದ್ಧವಾದ ಕರುನಾಡು ಸ್ತಬ್ಧಚಿತ್ರ


ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ 'ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ'


ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳ ಸ್ತಬ್ಧಚಿತ್ರ


ಭೋವಿ ಅಭಿವೃದ್ಧಿ ನಿಗಮದ 'ಭೋವಿ ಸಮುದಾಯದವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳು'



ಮಂಡ್ಯ ಜಿಲ್ಲೆಯಿಂದ 'ಸ್ವಾತಂತ್ರ್ಯ ಹೋರಾಟದ ದೀಪ–ಶಿವಪುರದ ಧ್ವಜ ಸತ್ಯಾಗ್ರಹ'



ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಯಕ್ರಮಗಳ ಸ್ತಬ್ಧಚಿತ್ರ



ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮದಿಂದ 'ಕರ್ನಾಟಕದ ಹೆಮ್ಮೆಯ ಸಂಕೇತ ಮೈಸೂರು ರೇಷ್ಮೆ'


ಗದಗ ಜಿಲ್ಲೆಯ 'ಜೋಡು ಕಳಸದ ಗುಡಿ'



ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ 'ಭವ್ಯ ಭವಿಷ್ಯ ನಿರ್ಮಿಸುವ ಕಾರ್ಯಪರಿಸರ'



ಹಿಂದುಸ್ಥಾನ್ ಏರೊನಾಟಿಕ್ಸ್ ಲಿಮಿಟೆಡ್‌ನ 'ವಿಜಯದ ರನ್ ವೇ ಭಾರತದ ಆಕಾಶಕ್ಕೆ ಎಚ್‌ಎಎಲ್‌ನ ಶಕ್ತಿ' ಸ್ತಬ್ಧಚಿತ್ರ



ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ 'ಜ್ಞಾನವೇ ಶಕ್ತಿ ಶಿಕ್ಷಣವೇ ಆಸ್ತಿ ಎಂಬುದೇ ಸಂಸ್ಥೆಯ ಪರಮ ಧ್ಯೇಯ'



ಭಾರತೀಯ ರೈಲ್ವೆ ಇಲಾಖೆಯ 'ಚಿನಾಬ್ ಸೇತು ಹಾಗೂ ಪಂಬನ್ ಸೇತು'



ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ "ಕಲಿಕಾ ನ್ಯೂನತೆ" ಸ್ತಬ್ಧಚಿತ್ರ



ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆಯ 'ಉದ್ಯೋಗವಕಾಶ ಮತ್ತು ಸ್ವಾವಲಂಬನೆ'



ಚಾಮರಾಜನಗರ ಜಿಲ್ಲೆಯ 'ಪ್ರಕೃತಿಯ ಸೌಹಾರ್ದತೆಯೊಂದಿಗೆ ಪ್ರಗತಿಯತ್ತ'



ಕರ್ನಾಟಕ ಹಾಲು ಮಹಾಮಂಡಳಿ (ಕೆ.ಎಂ.ಎಫ್)ಯ 'ನಂದಿನಿ ಹಾಲಿನ ಶುಭ್ರತೆ ನೀಡಿದೆ ರೈತ ಪರಿವಾರಕ್ಕೆ ಭದ್ರತೆ ಮತ್ತು ಹೈನೋದ್ಯಮದ ಮೂಲಕ ಮಹಿಳಾ ಸಬಲೀಕರಣ' ಸ್ತಬ್ಧಚಿತ್ರ

ಮೈಸೂರು ಮಿತ್ರ
ಶುಕ್ರವಾರ 3 ಅಕ್ಟೋಬರ್ 2025




ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದಿಂದ ಇಲಾಖಾ ಕಾರ್ಯಕ್ರಮಗಳು

# ಆಧುನಿಕ ಕಾಲದ ಸಾಧನೆ ಸಾರಿದ 58 ಸ್ತಬ್ಧಚಿತ್ರಗಳು

6ನೇ ಪುಟದಿಂದ

**ಗಮನ ಸೆಳೆದ ವಿವಿಧ ಜಿಲ್ಲೆಗಳ ಸ್ತಬ್ಧಚಿತ್ರಗಳು:** ಧಾರವಾಡ ಜಿಲ್ಲೆ: 'ರಾಷ್ಟ್ರಧ್ವಜ ತಯಾರಿಕಾ ಕೇಂದ್ರ ಗದಗ, ಕಲಘಟಕಿ ಬಣ್ಣದ ತೊಟ್ಟಿಲು ಮತ್ತು ನವಲ ಗುಂದ ಜಮಖಾನ್' ಸ್ತಬ್ಧಚಿತ್ರ, ಉತ್ತರ ಕನ್ನಡ ಜಿಲ್ಲೆಯ ರಾಣಿ ಚೆನ್ನಭೈರದೇವಿ–ಮಸಾಲೆ ರಾಣಿ ಸ್ತಬ್ಧಚಿತ್ರ, ಬಾಗಲಕೋಟೆ ಜಿಲ್ಲೆಯ ಬಸವಣ್ಣನವರ ಸಂದೇಶ ಸಾರುವ ಕೂಡಲ ಸಂಗಮ ಮತ್ತು ಶಿಲ್ಪ ಕಲೆಗಳ ನಾಡು ಸ್ತಬ್ಧಚಿತ್ರ ನೋಡುಗರ ಕಣ್ಮನ ಸೆಳೆಯಿತು.

ಕೊಪ್ಪಳ ಜಿಲ್ಲೆಯ ಕಿನ್ನಾಳ ಕಲೆ, ಶಿವಮೊಗ್ಗ ಜಿಲ್ಲೆಯ ಕೇದಾರೇಶ್ವರ ದೇವಸ್ಥಾನ, ಬಳ್ಳಾರಿ ಜಿಲ್ಲೆಯ 'ಸೆಪ್ಟೆಂಬರ್‌ನಲ್ಲಿ ಸಂಡೂರು ನೋಡು' ಸ್ತಬ್ಧಚಿತ್ರ, ವಿಜಯಪುರ ಜಿಲ್ಲೆಯ ಶಿವನ ಪ್ರತಿಮೆ, ಶಿವಗಿರಿ ಸ್ತಬ್ಧಚಿತ್ರ, ದಕ್ಷಿಣ ಕನ್ನಡ ಜಿಲ್ಲೆಯ ದೈವಾರಾಧನೆ ಮತ್ತು ಸಾಂಪ್ರದಾಯಿಕ ಕ್ರೀಡೆ ಸ್ತಬ್ಧಚಿತ್ರ, ಕಲ್ಬುರ್ಗಿ ಜಿಲ್ಲೆಯ ಶರಣ ಬಸವೇಶ್ವರ ಸಂಸ್ಥಾನ, ಮಹಾದಾಸೋಹಿ ಪೀಠ, ಬಹುಮನಿ ಸುಲ್ತಾನ ಸಾಮ್ರಾಜ್ಯ ಸ್ತಬ್ಧಚಿತ್ರ, ತುಮಕೂರು ಜಿಲ್ಲೆಯ ನವ್ಯ ಮತ್ತು ಪ್ರಾಚೀನ ಶಿಲ್ಪಕಲಾ ಸಂಕೀರ್ಣ, ಉಡುಪಿ ಜಿಲ್ಲೆಯ ಸ್ವಚ್ಛ ಉಡುಪಿ ಸ್ತಬ್ಧಚಿತ್ರ, ಕೊಡಗು ಜಿಲ್ಲೆಯ ಕೊಡಗಿನ ಚಾರಣ ಪಥಗಳು, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಅಭೂತಪೂರ್ವ ಸಾಧನೆ, ಹಾವೇರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಮೈಲಾರ ಮಹದೇವ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಘಾಟಿ ಸುಬ್ರಹ್ಮಣ್ಯ ದೇವಾಲಯ, ದೇವನಹಳ್ಳಿಯ ಮತ್ತು ಕೆಂಪೇಗೌಡರ ವಿಗ್ರಹ ಸ್ತಬ್ಧಚಿತ್ರ ಗಮನ ಸೆಳೆಯಿತು.

ಚಿಕ್ಕಮಗಳೂರು ಜಿಲ್ಲೆಯ ಭದ್ರ ಬಾಲ್ಯ ಯೋಜನೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸ್ತಬ್ಧಚಿತ್ರ ಡ್ರಗ್ಸ್ ಮುಕ್ತ ಕ್ಯಾಂಪಸ್ ಅಭಿಯಾನದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿತು. ಗದಗ್ ಜಿಲ್ಲೆಯ ಜೋಡು ಕಳಸದ ಗುಡಿ, ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರದ ಬೊಂಬೆಗಳ ನಾಡು, ಮೈಸೂರು ಜಿಲ್ಲೆಯ ಬದನವಾಳು ನೂಲುವ ಪ್ರಾಂತ್ಯ, ಬೆಂಗಳೂರು ನಗರ ಜಿಲ್ಲೆಯ ಬ್ರಾಂಡ್ ಬೆಂಗಳೂರಿನತ್ತ ಇಟ್ಟ ಹೆಜ್ಜೆ, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಶುದ್ಧ ಇಂಧನ ಮತ್ತು ಸಂಪನ್ಮೂಲ ಸಂರಕ್ಷಣೆ ಮೂಲಕ ಭಾರತದ ಗ್ರಾಮೀಣ ಸಶಕ್ತೀಕರಣ ಸ್ತಬ್ಧಚಿತ್ರ ಕಣ್ಮನ ಸೆಳೆದವು.

ಚಾಮರಾಜನಗರ ಜಿಲ್ಲೆಯ ಪ್ರಕೃತಿಯ ಸೌಹಾರ್ದತೆಯೊಂದಿಗೆ ಪ್ರಗತಿಯತ್ತ ಸಾಗೋಣ ಸ್ತಬ್ಧಚಿತ್ರದಲ್ಲಿ ಹುಲಿ ಸಂರಕ್ಷಿತ ಪ್ರದೇಶ ಮತ್ತು ಪರಿಸರದ ಸಂರಕ್ಷಣೆಯ ಬಗ್ಗೆ ಸಂದೇಶ ಸಾರಲಾಗಿತ್ತು. ಬೆಳಗಾವಿ ಜಿಲ್ಲೆಯ ಮಹಾಕಾಳಿ ಮಾಯಕ್ಕಾ ದೇವಾಲಯ, ವಿಜಯನಗರ ಜಿಲ್ಲೆಯ ವಿಶಿಷ್ಟ ವಿಜಯನಗರ ಸ್ತಬ್ಧಚಿತ್ರ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಜ್ಞಾನವೇ ದಿವ್ಯ ಜ್ಯೋತಿ ಸ್ತಬ್ಧಚಿತ್ರ, ಹಾಸನ ಜಿಲ್ಲೆಯ ಗೊಮ್ಮಟೇಶ್ವರ ಮತ್ತು ಕಾಫಿ ನಾಡು, ಬೀದರ್ ಜಿಲ್ಲೆಯ ಬೀದರ ಕೋಟೆ, ದಾವಣಗೆರೆ ಜಿಲ್ಲೆಯ ಮನೆ–ಮನೆಗೆ ಗಂಗೆ, ಚಿತ್ರದುರ್ಗ ಜಿಲ್ಲೆಯ ರಾಜವೀರ ಮದಕರಿ ನಾಯಕ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಭವ್ಯ ಭವಿಷ್ಯ ನಿರ್ಮಿಸುವ ಕಾರ್ಯ ಪರಿಸರ, ರಾಯಚೂರು ಜಿಲ್ಲೆಯ ಸರ್ವ ಧರ್ಮ ಸಾಮರಸ್ಯದ ನೆಲೆವೀಡು, ಕೋಲಾರ ಜಿಲ್ಲೆಯ ರೇಷ್ಮೆ, ಹೈನುಗಾರಿಕೆ ಮತ್ತು ಮಾವು, ಯಾದಗಿರಿ ಜಿಲ್ಲೆಯ ಟೇಲರ್ ಮಂಜಿಲ್, ಕೌಶಲಾಭಿವೃದ್ಧಿ, ಕಾರ್ಮಿಕ ಇಲಾಖೆ, ಲಿಡ್ಕರ್, ಕಾವೇರಿ ನೀರಾವರಿ ನಿಗಮ, ರೇಷ್ಮೆ ಇಲಾಖೆ, ಆದಿ ಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಹಾಲು ಮಹಾ ಮಂಡಳಿ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ತಮ್ಮ ಇಲಾಖೆಯ ಸಾಧನೆಗಳನ್ನು ಪ್ರತಿಬಿಂಬಿಸುವ ಚಿತ್ರ ನಿರ್ಮಿಸಿ ಜಂಬೂ ಸವಾರಿ ಮೆರವಣಿಗೆಯಲ್ಲಿ ಕೊಂಡೊಯ್ದುವು.




ಪೊಲೀಸ್ ಇಲಾಖೆಯ ಮನೆ ಮನೆಗೆ ಪೊಲೀಸ್




ಬೆಳಗಾವಿ ಜಿಲ್ಲೆಯ 'ಶ್ರೀ ಮಹಾಕಾಳಿ ಮಾಯಕ್ಕಾ ದೇವಿ ದೇವಸ್ಥಾನ ಚಿಂಚಲಿ'




ಸಮಾಜ ಕಲ್ಯಾಣ ಇಲಾಖೆಯ ಸ್ತಬ್ಧಚಿತ್ರ




ಲಿಡ್ಕರ್‌ನ 'ನಮ್ಮ ಲಿಡ್ಕರ್ ನಮ್ಮ ಹೆಮ್ಮೆ'




ಕೆಎಸ್ಆರ್‌ಟಿಸಿಯ ಶಕ್ತಿ ಯೋಜನೆಯ ಯಶೋಗಾಥೆ



ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಸ್ತಬ್ಧಚಿತ್ರ




ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 'ಜ್ಞಾನವೇ ದಿವ್ಯಜ್ಯೋತಿ (ಸಮಾಜ ಕಲ್ಯಾಣ ಇಲಾಖೆ)




ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್‌ನ 'ಆತ್ಮನಿರ್ಭರ ಭಾರತವನ್ನು ಮುನ್ನಡೆಸುತ್ತಿದೆ ರಕ್ಷಣಾ ಚಲನಶೀಲತೆ'




ಉಡುಪಿ ಜಿಲ್ಲೆಯ ಸ್ವಚ್ಛ ಉಡುಪಿ'




ಹಾಸನ ಜಿಲ್ಲೆಯ ಗೊಮ್ಮಟೇಶ್ವರ, ಸಮೃದ್ಧ ಕಾಫಿ ಬೆಳೆ



ಮೈಸೂರು ಜಿಲ್ಲೆಯ 'ಬದನವಾಳು ನೂಲುವ ಪ್ರಾಂತ್ಯ'




ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ 'ಅಭೂತಪೂರ್ವ ಸಾಧನೆ'




ಚಿಕ್ಕಬಳ್ಳಾಪುರ ಜಿಲ್ಲೆಯ 'ಜ್ಞಾನಿ –ವಿಜ್ಞಾನಿಗಳ ನಾಡು'




ಧಾರವಾಡ ಜಿಲ್ಲೆಯ 'ರಾಷ್ಟ್ರ ಧ್ವಜ ತಯಾರಿಕಾ ಕೇಂದ್ರ, ಗರಗ'




ಬೆಂಗಳೂರು ಗ್ರಾಮಾಂತರ ಜಿಲ್ಲೆಯ 'ಘಾಟಿ ಸುಬ್ರಮಣ್ಯ ದೇವಸ್ಥಾನ, ದೇವನಹಳ್ಳಿ ಕೋಟೆ ಮತ್ತು ಕೆಂಪೇಗೌಡರ ವಿಗ್ರಹ'




ನಗರಾಭಿವೃದ್ಧಿ ಇಲಾಖೆಯ 'ಸ್ಮಾರ್ಟ್, ಶುದ್ಧ ಕಾಳಜಿಯ ನಗರಗಳು'



ಕಲಬುರಗಿ ಜಿಲ್ಲೆಯ 'ಶರಣಬಸವೇಶ್ವರ ಸಂಸ್ಥಾನ. ಮಹಾದಾಸೋಹಿ ಪೀಠ ಮತ್ತು ಬಹುಮನಿ ಸುಲ್ತಾನ ಸಾಮ್ರಾಜ್ಯ'



ದಾವಣಗೆರೆ ಜಿಲ್ಲೆಯ 'ಮನೆ ಮನೆಗೆ ಗಂಗೆ'

# ಜಂಬೂ ಸವಾರಿಯಲ್ಲಿ ಆಧುನಿಕ ಕಾಲದ ಸಾಧನೆ ಸಾರಿದ 58 ಸ್ತಬ್ಧಚಿತ್ರಗಳು




ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ 'ಶುದ್ಧ ಇಂಧನ ಮತ್ತು ಸಂಪನ್ಮೂಲ ಸಂರಕ್ಷಣೆಯ ಮೂಲಕ ಗ್ರಾಮೀಣ ಭಾರತದ ಸಶಕ್ತೀಕರಣ'




ಚಿಕ್ಕಮಗಳೂರು ಜಿಲ್ಲೆಯ 'ಭದ್ರಬಾಲ್ಯ ಯೋಜನೆ ಚಿಕ್ಕಮಗಳೂರು ಜಿಲ್ಲೆ'



ತುಮಕೂರು ಜಿಲ್ಲೆಯ 'ನವ್ಯ ಮತ್ತು ಪ್ರಾಚೀನ ಶಿಲ್ಪ ಕಲಾ ಸಂಕೀರ್ಣ ನಮ್ಮ ತುಮಕೂರು ಜಿಲ್ಲೆ'




ಹಾವೇರಿ ಜಿಲ್ಲೆಯ 'ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಮೈಲಾರ ಮಹದೇವ'

## ಈ ಬಾರಿ ಹೆಚ್ಚಿನ ಜನರು ಪಾಲ್ಗೊಂಡಿರುವುದು ನನಗೆ ಸಂತೋಷ ತಂದಿದೆ: ಸಿಎಂ ಹರ್ಷಚಿತ್ತ

ಮೈಸೂರು, ಅ.2(ಎಂಟಿವೈ)– ಈ ಸಾಲಿನ ದಸರಾ ಮಹೋತ್ಸವದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಜನ ಪಾಲ್ಗೊಂಡಿರುವುದು ನನಗೆ ಸಂತೋಷ ತಂದಿದೆ ಎಂದು ಮುಖ್ಯಮುಖ್ಯಮಂತ್ರಿ ಸಿದ್ದರಾಮಯ್ಯ ಹರ್ಷ ವ್ಯಕ್ತಪಡಿಸಿದ್ದಾರೆ.



ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ನಂಧಿ ಧ್ವಜಕ್ಕೆ ಪೂಜೆ ಸಲ್ಲಿಸಿ, ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ದಸರಾ ಜನರ ಹಬ್ಬ, ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿದಾಗ ಮಾತ್ರ ದಸರಾ ಆಯೋ ಜನೆ ಯಶಸ್ವಿಯಾಗುತ್ತದೆ. ಈ ಸಲದ ಮೈಸೂರು ದಸರಾಕ್ಕೆ ಪ್ರವಾಸಿಗರನ್ನು ಸ್ವಾಗತಿಸುತ್ತೇನೆ. ಈ ಬಾರಿ ದಸರಾ ಹಬ್ಬವು ಹನ್ನೊಂದು ದಿನಗಳ ಕಾಲ ನಡೆದಿದ್ದು, ನಾಡಿನ ಜನತೆಗೆ ದಸರಾ ಮಹೋತ್ಸವದ ಶುಭಾಶಯಗಳನ್ನು ಕೋರುತ್ತೇನೆ. ಮೈಸೂರು ದಸರಾ ವಿಶ್ವವಿಖ್ಯಾತವಾಗಿದ್ದು, ಹೆಚ್ಚಿನ ಪ್ರವಾಸಿಗರನ್ನು ಸ್ವಾಗತಿಸುವುದಾಗಿ ತಿಳಿಸಿದರು. ನಾನು ಎರಡು ಬಾರಿ ಮುಖ್ಯ ಮಂತ್ರಿಯಾಗಿ, ಎಲ್ಲ ದಸರಾ ಉತ್ಸವ ಗಳಲ್ಲಿ ಭಾಗಿಯಾಗಿದ್ದೇನೆ ಎಂದರು.

ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿ ಸಿದಾಗ ಮಾತ್ರ ದಸರಾ ಆಯೋಜನೆ ಯಶಸ್ವಿಯಾಗುತ್ತದೆ. ದಸರಾ ಉತ್ಸವವನ್ನು ಉದ್ಘಾಟಿಸಿದ ಸಾಹಿತಿ ಬಾನು ಮುಷ್ತಾಕ್ ಅವರಿಗೆ ಇದೇ ವೇಳೆ ಅಭಿನಂದಿಸಿದ ಮುಖ್ಯಮಂತ್ರಿಗಳು, ದಸರಾ ಉತ್ಸವ ಯಾವುದೇ ಅಡಚಣೆಗಳಿಲ್ಲದೇ ಯಶಸ್ವಿಯಾಗಿ ನಡೆದಿರುವುದು ಸಂತಸ ತಂದಿದೆ. ಇದಕ್ಕಾಗಿ ಶ್ರಮಿಸಿದ ಸಚಿವರು, ಶಾಸಕರು ಹಾಗೂ ಅಧಿಕಾರಿಗಳನ್ನು ಅಭಿನಂದಿ ಸುತ್ತೇನೆ ಎಂದು ತಿಳಿಸಿದರು.

### ದಾಖಲೆ ನೋಡಲು ಹೋಗಿಲ್ಲ

ದಸರಾ ಮಹೋತ್ಸವ ಜಂಬೂಸವಾರಿಯನ್ನು 8ನೇ ಬಾರಿ ಉದ್ಘಾಟಿಸಿದ ದಾಖಲೆ ಕುರಿತಂತೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜನರ ಆಶೀರ್ವಾದದಿಂದ ಮುಖ್ಯಮಂತ್ರಿಯಾಗಿ 8 ಬಾರಿ ದಸರಾದಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತಿದ್ದು ಅತ್ಯಂತ ಸಂತೋಷವನ್ನು ತುದಿದೆ. 8 ಬಾರಿ ಉದ್ಘಾಟಿಸಿದ್ದು ದಾಖಲೆ ಆಗಿರುವುದು ನನಗೆ ಗೊತ್ತಿಲ್ಲ. ನಾನು ಯಾವುದೇ ದಾಖಲೆ ನೋಡಿಲ್ಲ ಎಂದರು.

**ಜಂಟಿ ಸಮೀಕ್ಷೆ ನಂತರ ಬೆಳೆ ಪರಿಹಾರ:** ಈ ವರ್ಷ ರಾಜ್ಯದೆಲ್ಲೆಡೆ ಉತ್ತಮ ಮಳೆಯಾಗಿದ್ದು, ಎಲ್ಲಾ ಜಲಾಶಯಗಳು ತುಂಬಿವೆ. ಅಲ್ಲದೆ, ಉತ್ತಮ ಬೆಳೆಯೂ ಆಗುತ್ತಿದೆ. ಆದರೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ರಾಜ್ಯದಲ್ಲಿ ಸುಮಾರು 10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿ ಸಂಭವಿಸಿದೆ. ರೈತರಿಗೆ ಸಮೀಕ್ಷೆ ನಡೆಸಿ ಬೆಳೆ ಪರಿಹಾರ ನೀಡುವುದಾಗಿ ಕಲ್ಬುರ್ಗಿಯ ಭೇಟಿ ಸಂದರ್ಭದಲ್ಲಿ ತಿಳಿಸಿದ್ದೇನೆ. ಸರ್ಕಾರ ಮತ್ತು ಎನ್‌ಡಿಆರ್‌ಎಫ್ ಸೇರಿದಂತೆ ಖುಷ್ಕಿ ಜಮೀನಿನ ತಲಾ ಹೆಕ್ಟೇರ್‌ಗೆ 17,000 ರೂ ನೀರಾವರಿ ಜಮೀನಿಗೆ 17,500 ರೂ. ಮತ್ತು ಬಹುಬೆಳೆ ಬೆಳೆಯುವ ಜಮೀನಿಗೆ 31 ಸಾವಿರ ರೂ.ಗಳ ಪರಿಹಾರ ನೀಡು ವುದಾಗಿ ತಿಳಿಸಲಾಗಿದೆ. ಆದರೆ ಹೆಚ್ಚಿನ ಮಳೆ ಇರುವುದರಿಂದ ಬೆಳೆ ಹಾನಿಯ ಜಂಟಿ ಸಮೀಕ್ಷೆ ಕೈಗೊಳ್ಳಲು ಸಾಧ್ಯವಾ ಗುತ್ತಿಲ್ಲ. ಸಮೀಕ್ಷೆಯ ನಂತರ ಬೆಳೆ ಹಾನಿ ಯಾದ ಎಲ್ಲ 10 ಲಕ್ಷ ಹೆಕ್ಟೇರ್‌ಗೂ ಪರಿಹಾರ ನೀಡಲಾಗುವುದು ಎಂದರು.




ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 'ಕರ್ನಾಟಕದಿಂದ ಡ್ರಗ್ಸ್ ಮುಕ್ತ ಕ್ಯಾಂಪಸ್ ಅಭಿಯಾನ'




ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ 'ಕರ್ನಾಟಕದ ನವ ನಿರ್ಮಾಣಕ್ಕೆ ಗ್ಯಾರಂಟಿ ಸರ್ಕಾರ'



ಬೆಂಗಳೂರು ದಕ್ಷಿಣ ಜಿಲ್ಲೆ (ರಾಮನಗರ)ಯ .ಚನ್ನಪಟ್ಟಣ ಗೊಂಬೆ, ಹೈನುಗಾರಿಕೆ ರೇಷ್ಮೆ'




ಯಾದಗಿರಿ ಜಿಲ್ಲೆಯಿಂದ 'ಟೇಲರ್ ಮಂಜಿಲ್ 1844 ಸುರಪುರ'



ಮೈಸೂರು ಮಹಾನಗರ ಪಾಲಿಕೆಯ 'ಸ್ವಾಸ್ಥ್ಯ ಮತ್ತು ಸುಸ್ಥಿರ ಮೈಸೂರು'




ಕೊಡಗು ಜಿಲ್ಲೆಯ 'ಕೊಡಗಿನ ಚಾರಣ ಪಥಗಳು'

## ಗಾಂಧಿ ಜಯಂತಿ ದಿನ ಜಂಬೂ ಸವಾರಿ ವಿಶೇಷ

ರಾಷ್ಟ್ರಪಿತ ಮಹಾತ್ಮ ಗಾಂಧಿ ಜಯಂತಿ ದಿನವಾದ ಇಂದು ಜಂಬೂ ಸವಾರಿ ಮೆರವಣಿಗೆ ನಡೆದಿರುವುದು ಮತ್ತೊಂದು ವಿಶೇಷವಾಗಿದೆ. ಮಹಾತ್ಮ ಗಾಂಧಿ ಅವರ ಪರಿಕಲ್ಪನೆಯ ಹಲವು ಸ್ತಬ್ಧಚಿತ್ರಗಳು ಇಂದು ಸಾಗುವ ಮೂಲಕ ಜನರ ಗಮನ ಸೆಳೆದವು.

ಮಹಾತ್ಮ ಗಾಂಧಿ ಅವರ ಪರಿಕಲ್ಪನೆಯ ಸ್ವಚ್ಛ ಭಾರತ ನಿರ್ಮಾಣದ ಕನಸು ಸಾಧ್ಯವಾಗುತ್ತದೆ ಎಂಬ ಸ್ತಬ್ಧಚಿತ್ರ, ವಾರ್ತಾ ಮತ್ತು ಪ್ರಚಾರ ಇಲಾಖೆಯ ಬೆಳಗುತ್ತಿದೆ ಭರವಸೆಯ ಬೆಳಕು ಸ್ತಬ್ಧಚಿತ್ರ, ಧಾರವಾಡದ ರಾಷ್ಟ್ರಧ್ವಜ ತಯಾರಿಕಾ ಕೇಂದ್ರದ ಸ್ತಬ್ಧಚಿತ್ರ ಸೇರಿದಂತೆ ಹಲವು ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಸಾಗುವ ಮೂಲಕ ಗಾಂಧೀಜಿ ಅವರ ಸಂದೇಶ ಸಾರಲಾಯಿತು.

## ಮೈಸೂರು ಸುತ್ತೂರು ಮಠದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಲವು ಗಣ್ಯರಿಗೆ ಉಪಹಾರ




ಮೈಸೂರು, ಅ.2(ಬಿಎಲ್‌ಯು)– ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆ ಉದ್ಘಾಟಿಸಲು ಇಂದು ಮೈಸೂರಿಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುತ್ತೂರು ಮಠಕ್ಕೆ ಭೇಟಿ ನೀಡಿದರು. ಈ ವೇಳೆ ಸಿದ್ದರಾಮಯ್ಯ ಸೇರಿದಂತೆ ಇತರೆ ಗಣ್ಯರು ಅಲ್ಲಿಯೇ ಉಪಹಾರ ಸೇವಿಸಿದರು.

ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಸಿದ್ದರಾಮಯ್ಯ ಅವರು ಗಾಂಧಿ ಟೋಪಿ ಧರಿಸಿ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ತೆರಳಿದರು.

ಈ ವೇಳೆ ಸಿದ್ದರಾಮಯ್ಯ ಅವರು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಸೌಜನ್ಯ ಭೇಟಿ ಮಾಡಿದ್ದರು. ಈ ಸಂದರ್ಭದಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಸೇರಿದಂತೆ ಇತರೆ ಗಣ್ಯರು ಹಾಜರಿದ್ದರು.

ಈ ವೇಳೆ ಸಿದ್ದರಾಮಯ್ಯ ಸೇರಿದಂತೆ ಇತರೆ ಗಣ್ಯರು ಉಪಹಾರ ಸೇವಿಸಿದರು. ಇಡ್ಲಿ, ವಡೆ, ಪೊಂಗಲ್, ಉಪ್ಪಿಟ್ಟು, ದೋಸೆ, ಕ್ಯಾರೆಟ್ ಹಲ್ವಾ ಸವಿದರು.




ವಿಜಯನಗರ ಜಿಲ್ಲೆಯ 'ವಿಶಿಷ್ಟ ವಿಜಯನಗರ–ವಿಜಯನಗರ ಜಿಲ್ಲೆಯ ವೈಶಿಷ್ಟ್ಯತೆಗಳು'



ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಧ್ಯೇಯೋದ್ದೇಶಗಳು

## ಅಂದು ರಾಜರ ದಸರಾ, ಇಂದು ರಾಜ್ಯದ ದಸರಾ

ಜಂಬೂ ಸವಾರಿ ಮೆರವಣಿಗೆಯಲ್ಲಿ ರಾಜರ ಕಾಲದ ಗತ ವೈಭವ ಬಿಂಬಿಸುವ ಸ್ತಬ್ಧಚಿತ್ರಗಳು ಸಾಗಿ ಬಂದವು. ಮೈಸೂರು ರಾಜರು ನೀಡಿದ ಕೊಡುಗೆಯನ್ನು ಸ್ತಬ್ಧಚಿತ್ರದ ಮೂಲಕ ಸಾರಿ ಹೇಳಲಾಗಿತ್ತು.

ಹಾಗೆಯೇ ಪ್ರಜಾಪ್ರಭುತ್ವದಲ್ಲಿ ರಾಜ್ಯದ ಪ್ರಗತಿ ಸಾರುವ ಸ್ತಬ್ಧಚಿತ್ರಗಳನ್ನು ಅನಾವರಣ ಮಾಡಲಾಯಿತು. ಸರ್ಕಾರದ ಪಂಚ ಗ್ಯಾರಂಟಿ ಯೋಜನೆ, ವಿವಿಧ ಅಭಿವೃದ್ಧಿ ನಿಗಮಗಳಿಂದ ಮಹಿಳಾ ಸಬಲೀಕರಣ, ಕ್ಷೀರ ಕ್ರಾಂತಿ ಸೇರಿದಂತೆ ಹಲವು ಸ್ತಬ್ಧಚಿತ್ರಗಳು ಅಭಿವೃದ್ಧಿಯನ್ನು ಸಾದರ ಪಡಿಸಿದವು.

## ಎರಡೂವರೆ ವರ್ಷ ನಾನೇ ಸಿಎಂ; ಐ ಹೋಪ್ ಮುಂದಿನ ವರ್ಷವೂ ನಾನೇ ಪುಷ್ಪಾರ್ಚನೆ ಮಾಡುತ್ತೇನೆ!

### ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ ವಿಶ್ವಾಸ

ಮೈಸೂರು, ಅ.2(ಬಿಎಲ್‌ಯು)– ಮುಖ್ಯಮಂತ್ರಿಯಾಗಿ ಇನ್ನೂ ಎರಡೂ ವರೆ ವರ್ಷ ನಾನೇ ಇರುತ್ತೇನೆ. ಮುಂದಿನ ವರ್ಷವೂ ನಾನೇ ಏಕೆ ಪುಷ್ಪಾರ್ಚನೆ ಮಾಡಬಾರದು. ಹೀಗೆಂದು ಪ್ರಶ್ನಿಸಿದ ವರು ಮುಖ್ಯಮಂತ್ರಿ ಸಿದ್ದರಾಮಯ್ಯ.

ಮೈಸೂರು ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಷ್ಟು ವರ್ಷ ನಾನೇ ಪುಷ್ಪಾ ರ್ಚನೆ ಮಾಡಿಕೊಂಡು ಬಂದಿದ್ದೇನೆ. ಐ ಹೋಪ್ ಮುಂದಿನ ವರ್ಷವೂ ನಾನೇ ಪುಷ್ಪಾರ್ಚನೆ ಮಾಡುತ್ತೇನೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಎರಡನೇ ಬಾರಿ ಸಿಎಂ ಆಗಲ್ಲ ಅಂದರು, ಆಗಲಿಲ್ಲವೇ ಎಂದು ಮರು ಪ್ರಶ್ನಿಸಿದ ಸಿದ್ದರಾಮಯ್ಯ, ಸರ್ಕಾರಕ್ಕೆ ಎರಡು ವರ್ಷ ತುಂಬುತ್ತಿರುವ ಕಾರಣ ಈ ರೀತಿ ಮಾತಾಡುತ್ತಾರೆ. ಅದೇನೆ ಇರಲಿ, ಅಂತಿಮ ವಾಗಿ ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು ಎಂದು ಹೇಳಿದರು.

ಬಿಜೆಪಿ ನಾಯಕರಿಗೆ ವಸ್ತು ಸ್ಥಿತಿ ತಿಳಿದಿಲ್ಲ. ಅವರು ಹೇಳಿದಂತೆ ಎಲ್ಲವೂ ನಡೆಯಲ್ಲ. ಅವರೇನು ಭವಿಷ್ಯಕಾರರಲ್ಲ. ಈ ತನಕ ಬಿಜೆಪಿಯವರು ಭವಿಷ್ಯ ನುಡಿದಿದ್ದೆಲ್ಲಾ ಸುಳ್ಳಾಗಿದೆ ಎಂದು ಸಿದ್ದರಾಮಯ್ಯ ಕೇಸರಿ ನಾಯಕರಿಗೆ ತಿರುಗೇಟು ನೀಡಿದರು.

ಇದೇ ವಿಚಾರವಾಗಿ ಸ್ಪಷ್ಟನೆ ನೀಡಿದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್. ಸಿ.ಮಹದೇವಪ್ಪ, ಸಿದ್ದರಾಮಯ್ಯ ಅವರು ಪೂರ್ಣಾವಧಿಗೆ ಸಿಎಂ ಆಗಿರುತ್ತಾರೆ. ಇದನ್ನು ಸಿದ್ದರಾಮಯ್ಯ ಅವರೇ ಸ್ಪಷ್ಟಪಡಿಸಿರುವಾಗ ಚರ್ಚೆ ಅನಗತ್ಯ. ಯಾರದೊ ಹೇಳಿಕೆಗೆ ಮಹತ್ವ ಕೊಡಬೇಡಿ ಎಂದು ಸಲಹೆ ನೀಡಿದರು.

## ತೆರೆದ ಜೀಪಿನಲ್ಲಿ ಸಾಗಿ ಜನರಿಗೆ ಶುಭಾಶಯ ತಿಳಿಸಿದ ಸಿಎಂ



ಮುಂದಿನ ಬಾರಿಯ ಜಂಬೂ ಸವಾರಿ ಮೆರವಣಿಗೆಯನ್ನು ನಾನೇ ಉದ್ಘಾಟನೆ ಮಾಡುತ್ತೇನೆ ಎಂದು ಘೋಷಣೆ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನಂದಿ ಧ್ವಜ ಪೂಜೆ ನೆರವೇರಿಸಿದ ನಂತರ ತೆರೆದ ಜೀಪಿನಲ್ಲಿ ಅರಮನೆಯಲ್ಲಿ ಒಂದು ಸುತ್ತು ಹಾಕಿದರು. ಈ ವೇಳೆ ಜನರತ್ತ ಕೈಬೀಸಿ ದಸರಾ ಶುಭಾಶಯ ಕೋರಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಸಿಎಂಗೆ ಸಾಥ್ ನೀಡಿದರು.

ಮೈಸೂರು ಮಿತ್ರ

ಶುಕ್ರವಾರ 3 ಅಕ್ಟೋಬರ್ 2025





## ಜಂಬೂಸವಾರಿಯಲ್ಲಿ ವಿದೇಶಿಗರ ಸಂಖ್ಯೆ ಇಳಿಮುಖ

ಮೈಸೂರು,ಅ.2(ಜಿಎ)–ವಿಶ್ವವಿಖ್ಯಾತ ಜಂಬೂಸವಾರಿ ವೀಕ್ಷಣೆಗೆ ಈ ಬಾರಿ ವಿದೇಶಿ ಪ್ರವಾಸಿಗರ ಸಂಖ್ಯೆ ಇಳಿಮುಖಗೊಂಡಿದ್ದು, ಬೆರಳೆಣಿಕೆಯಷ್ಟು ಮಂದಿ ಪ್ರವಾಸಿಗರು ಮಾತ್ರ ಮಂದಿ ಕಾಣಿಸಿಕೊಂಡರು.

ದಸರಾ ಮಹೋತ್ಸವ ಆರಂಭಗೊಳ್ಳುತ್ತಿದ್ದಂತೆ ಮೈಸೂರು ಸೇರಿದಂತೆ ಅಕ್ಕಪಕ್ಕದ ಜಿಲ್ಲೆಗಳ ಪ್ರವಾಸಿ ತಾಣಗಳಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆ ಸಾಮಾನ್ಯವಾಗಿ ಅಧಿಕವಾಗಿರುತ್ತಿತ್ತು ಆದರೆ, ಈ ಬಾರಿ ವಿದೇಶಿಗರನ್ನು ಹುಡುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಸೂಕ್ತ ಕಾರಣವೇ ತಿಳಿದಿಲ್ಲ.

ಅರಮನೆ ಆವರಣದಲ್ಲಿ ಕುಳಿತುಕೊಂಡು ಜಂಬೂಸವಾರಿಯನ್ನು ಕುತೂಹಲದಿಂದ ವೀಕ್ಷಿಸಿ, ಫೋಟೋಗಳನ್ನು ಕ್ಲಿಕ್ಕಿಸಿಕೊಂಡು ಸ್ಥಳೀಯರೊಟ್ಟಿಗೆ ಬೆರೆತು ಇಲ್ಲಿಂಯ ಪರಂಪರೆ, ಸಂಸ್ಕೃತಿ, ಆಚಾರ–ವಿಚಾರಗಳನ್ನು ತಿಳಿದುಕೊಳ್ಳುತ್ತಾರೆ. ಈ ಬಾರಿ ಅರಮನೆ ಆವರಣದಲ್ಲಿ ಬೆರಳೆಣಿಕೆಯಷ್ಟು ಮಂದಿ ವಿದೇಶಿ ಪ್ರವಾಸಿಗರು ಕಾಣಿಸಿಕೊಂಡರು.

ಪ್ರತಿ ವರ್ಷದ ಆಯುರ್ವೇದ ವೃತ್ತದ ಆಯುರ್ವೇದ ಕಾಲೇಜಿನ ಮುಂಭಾಗ ವಿದೇಶಿಗರಿಗಾಗಿ ಪ್ರತ್ಯೇಕ ಸ್ಥಳ ನಿಯೋಜಿಸಲಾಗುತಿತ್ತು. ಆದರೆ, ಈ ಬಾರಿ ಅಲ್ಲಿ ಯಾವುದೇ ಸ್ಥಳ ನಿಯೋಜನೆ ಮಾಡಿರಲಿಲ್ಲ. ವಾಡಿಕೆಯಂತೆ ಯಾವುದೇ ವಿದೇಶಿಗರು ಕಾಣಿಸಿಕೊಳ್ಳಲಿಲ್ಲ.

# ಮೈಸೂರು ಅರಮನೆಯಲ್ಲಿ ಆಯುಧ ಪೂಜೆ ಸಂಭ್ರಮ

### ರಾಜರ ಕಾಲದ ಕತ್ತಿ, ಗುರಾಣಿ ಸೇರಿ ಹಲವು ಆಯುಧಗಳಿಗೆ ಪೂಜೆ ಸಲ್ಲಿಸಿದ ಯದುವೀರ್



ಅಂಬಾವಿಲಾಸ ಅರಮನೆಯ ಕಲ್ಯಾಣ ಮಂಟಪದಲ್ಲಿ ಬುಧವಾರ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಆಯುಧ ಪೂಜೆ ನೆರವೇರಿಸಿದರು.

ಮೈಸೂರು, ಅ.2 (ಬಿಎಲ್‌ಯು)– ಅಂಬಾವಿಲಾಸ ಅರಮನೆಯಲ್ಲಿ ಬುಧವಾರ ಆಯುಧ ಪೂಜೆಯನ್ನು ಧಾರ್ಮಿಕ ವಿಧಿ ವಿಧಾನದಂತೆ ನೆರವೇರಿಸಲಾಯಿತು. ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರಾಜರ ಕಾಲದ ಕತ್ತಿ, ಗುರಾಣಿ ಸೇರಿದಂತೆ ಇತರೆ ಶಸ್ತ್ರಗಳಿಗೆ ಭಕ್ತಿ–ಭಾವದಿಂದ ಪೂಜೆ ಸಲ್ಲಿಸಿದರು.

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಸಾಂಪ್ರದಾಯಿಕ ಹಾಗೂ ಧಾರ್ಮಿಕತೆಯ ಸಂಕೇತವಾದ ಆಯುಧ ಪೂಜೆಯ ಸಂಭ್ರಮ ಅರಮನೆಯಲ್ಲಿ ಮನೆ ಮಾಡಿತ್ತು. ಬೆಳಿಗ್ಗೆ 7.30ರಿಂದ 7.42 ಗಂಟೆಯಲ್ಲಿ ಸಲ್ಲುವ ಶುಭ ಘಳಿಗೆಯಲ್ಲಿ ಬೆಳ್ಳಿ ಪಲ್ಲಕ್ಕಿಯಲ್ಲಿದ್ದ ಆಯುಧಗಳಿಗೆ ಸೋಮೇಶ್ವರ ದೇವಸ್ಥಾನಕ್ಕೆ ತಂದು ಪೂಜೆ ಸಲ್ಲಿಸಲಾಯಿತು. ತರುವಾಯ ಅರಮನೆಯ ಕಲ್ಯಾಣ ಮಂಟಪದಲ್ಲಿ ಯದುವೀರ್ ಅವರು ಆಯುಧಗಳಿಗೆ ಪೂಜೆ ನೆರವೇರಿಸಿದರು. ನಂತರ ಸವಾರಿ ತೊಟ್ಟಿಗೆ ಆಗಮಿಸಿದ ಯದುವೀರ್ ಅವರು ರಾಜ ಪುರೋಹಿತರ ಮಂತ್ರ ಘೋಷದೊಂದಿಗೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು, ಬೆಳ್ಳಿ ಪಲ್ಲಕ್ಕಿ ಹಾಗೂ ಮೋಟಾರು ವಾಹನಗಳಿಗೆ ಪೂಜೆ ಸಲ್ಲಿಸಿದರು.

ಇದಕ್ಕೂ ಮೊದಲು ಯದುವೀರ್ ಅವರು ಅರಮನೆಯಲ್ಲಿ ಚಂಡಿ ಹೋಮ ಸೇರಿದಂತೆ ಇತರೆ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿದರು. ಇದೇ ವೇಳೆ ಕುಶಾಲ ತೋಪು ಸಿಡಿಸುವ ಅರಮನೆಯ 11 ಫಿರಂಗಿ ಗಾಡಿಗಳಿಗೆ ಪೊಲೀಸರು ಹಾಗೂ ಅರಮನೆ ಆಡಳಿತ ಮಂಡಳಿಯವರು ಪೂಜೆ ಸಲ್ಲಿಸಿದರು.

## ದಿಕ್ಕಾಪಾಲಾಗಿ ಓಡಿ ಆತಂಕ ಸೃಷ್ಟಿಸಿದ್ದ ಜೋಡೆತ್ತುಗಳು

ಅರಮನೆಯಲ್ಲಿ ಆಯುಧ ಪೂಜೆ ನೆರವೇರಿಸುವ ವೇಳೆ ಫಿರಂಗಿ ಗಾಡಿ ಹೊತ್ತಿದ್ದ ಜೋಡೆತ್ತುಗಳು ದಿಕ್ಕಾಪಾಲಾಗಿ ಓಡಿ ಆತಂಕ ಸೃಷ್ಟಿಸಿದ್ದ ಘಟನೆಯೂ ಬುಧವಾರ ನಡೆಯಿತು. ಫಿರಂಗಿ ಗಾಡಿಯ ಕಬ್ಬಿಣದ ಚಕ್ರದ ಶಬ್ದಕ್ಕೆ ಎತ್ತುಗಳು ಹೆದರಿದವು. ಈ ವೇಳೆ ಗಾಬರಿಗೊಂಡ ಜೋಡೆತ್ತುಗಳು ದಿಕ್ಕಾ ಪಾಲಾಗಿ ಓಡಿದವು. ಫಿರಂಗಿ ಗಾಡಿ ಓಡಿಸುತ್ತಿದ್ದವನು ಮೂಗುದಾರಕ್ಕೆ ಹಾಕಿದ್ದ ಹಗ್ಗ ಎಳೆದರೂ ಎತ್ತುಗಳು ನಿಯಂತ್ರಣಕ್ಕೆ ಬರಲಿಲ್ಲ. ಈ ವೇಳೆ ಅಲ್ಲೇ ನಿಂತಿದ್ದ ಖಾಸಗಿ ಸುದ್ದಿವಾಹಿನಿಯ ಕಾರು ಜಖಂಗೊಂಡಿತು. ಇದರಿಂದ ಅರಮನೆ ಆವರಣದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು ಎತ್ತುಗಳು ಓಡುವಾಗ ಅದೃಷ್ಟವಶಾತ್ ಯಾರೂ ಮಧ್ಯ ಬರಲಿಲ್ಲ. ಇಲ್ಲದಿದ್ದರೆ ಅನಾಹುತವೇ ನಡೆದು ಹೋಗುತ್ತಿತ್ತು. ದಿಕ್ಕಾಪಾಲಾಗಿ ಓಡಿದ ಎತ್ತುಗಳು ಕೊನೆಗೆ ವರಾಹ ದೇಗುಲದ ಬಳಿ ನಿಯಂತ್ರಣಕ್ಕೆ ಬಂದವು. ನಂತರ ಎತ್ತುಗಳ ಬದಲು ಕ್ರೇನ್‌ಗಳ ಮೂಲಕ ಫಿರಂಗಿ ಗಾಡಿಯನ್ನು ಅರಮನೆಗೆ ತರಲಾಯಿತು.

# ಅಂತೂ ಶಿಥಿಲಗೊಂಡ ಕಟ್ಟಡಗಳಿಂದ ದೂರ ಸರಿದ ಸಾರ್ವಜನಿಕರು

### ಪೊಲೀಸರ ಎಚ್ಚರಿಕೆ ಪಾಲಿಸಿದ ಜನರು, ಸಬ್ ವೇ ಬಂದ್



ಜಂಬೂಸವಾರಿಯಲ್ಲಿ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮೇಲೆ ಒಬ್ಬರೂ ಏರಲು ಸಾಧ್ಯವಾಗಲಿಲ್ಲ.

ಮೈಸೂರು,ಅ.2(ಜಿಎ)–ಜಂಬೂಸವಾರಿ ವೇಳೆ ಶಿಥಿಲಗೊಂಡ ಕಟ್ಟಡಗಳ ಮೇಲೆ ಕುಳಿತುಕೊಳ್ಳದಂತೆ ಕಟ್ಟುನಿಟ್ಟಿನ ಕ್ರಮ ವಹಿಸಿದ ಹಿನ್ನೆಲೆಯಲ್ಲಿ ಈ ಬಾರಿ ಯಾವುದೇ ಶಿಥಿಲಗೊಂಡ ಕಟ್ಟಡದ ಮೇಲೆ ಕುಳಿತು ದಸರಾ ವೀಕ್ಷಿಸುವ ಸಾಹಸ ಯಾರೂ ಮಾಡಿದಂತಿಲ್ಲ.

ಮೈಸೂರಿನ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಕೆಆರ್ ವೃತ್ತದ ವಾಣಿಜ್ಯ ಮಳಿಗೆಗಳು, ದೇವರಾಜ ಮಾರುಕಟ್ಟೆ ಸೇರಿದಂತೆ ಶಿಥಿಲಗೊಂಡ ಕಟ್ಟಡಗಳ ಮೇಲೆ ಯಾರು ಕುಳಿತು ಜಂಬೂಸವಾರಿ ವೀಕ್ಷಿಸಲು ಪ್ರಯತ್ನಿಸಿದಂತೆ ಕಾಣಲಿಲ್ಲ. ಬದಲಾಗಿ ಕುರ್ಚಿಗಳ ಮೇಲೆ ಕುಳಿತು ಜಂಬೂಸವಾರಿ ವೀಕ್ಷಿಸಿದರು.

ಕಳೆದ ಬಾರಿ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಕೆ.ಆರ್.ವೃತ್ತದ ವಾಣಿಜ್ಯ ಮಳಿಗೆಗಳು, ದೇವರಾಜ ಮಾರುಕಟ್ಟೆ ಸೇರಿದಂತೆ ಶಿಥಿಲಗೊಂಡ ಕಟ್ಟಡಗಳ ಮೇಲೆ ನೂರಾರು ಮಂದಿ ಏರಿ ಕುಳಿತುಕೊಂಡು ದಸರಾ ವೀಕ್ಷಣೆ ಮಾಡಿದ್ದ ವಿಚಾರ ಮಾಧ್ಯಮ ಗಳಲ್ಲಿ ವರದಿಯಾದ ನಂತರ ಪೊಲೀಸ್ ಇಲಾಖೆ ಮುಂದಿನ ಬಾರಿ ಈ ರೀತಿ ಆಗದಂತೆ ಕ್ರಮ ವಹಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿತ್ತು.

ದೇಶ, ವಿದೇಶಗಳಿಂದ ಲಕ್ಷಾಂತರ ಮಂದಿ ಜಂಬೂಸವಾರಿ ವೀಕ್ಷಣೆಗೆ ಆಗಮಿಸುತ್ತಾರೆ. ಈ ಸಂದರ್ಭದಲ್ಲಿ ಅನುಕೂಲವಂತರು ಪಾಸ್‌ಗಳನ್ನು ಖರೀದಿ ಮಾಡಿಕೊಂಡು ಅರಮನೆ ಆವರಣದಲ್ಲಿ ಸಿದ್ಧಪಡಿಸಿರುವ ಕುರ್ಚಿಗಳಲ್ಲಿ ಕುಳಿತುಕೊಂಡು ಜಂಬೂಸವಾರಿ ವೀಕ್ಷಿಸುತ್ತಾರೆ. ಕೆಲವರು ಜಂಬೂಸವಾರಿ ಸಾಗುವ ಮಾರ್ಗದಲ್ಲಿ ರಾತ್ರಿಯೇ ಚಾಪೆ, ಟಾರ್ಪಲ್‌ಗಳನ್ನು ಹಾಸಿಕೊಂಡು ಸ್ಥಳ ನಿಗದಿ ಪಡಿಸಿಕೊಳ್ಳುತ್ತಾರೆ. ಈ ಎರಡು ಸ್ಥಳದಲ್ಲಿ ಅವಕಾಶ ಸಿಗದವರು ಅಂತಿಮವಾಗಿ ಮಾರ್ಗದುದ್ದಕ್ಕೂ ಇರುವ ಕಟ್ಟಡಗಳ ಮೇಲೆ ಕುಳಿತು ದಸರಾ ವೀಕ್ಷಿಸುತ್ತಾರೆ. ಆದರೆ, ಕೆಲವರು ಕಟ್ಟಡ ಶಿಥಿಲಗೊಂಡಿರುವುದನ್ನು ಲೆಕ್ಕಿಸದೇ ಕಟ್ಟಡ ಏರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಬಾರಿ ಇದಕ್ಕೆ ಕಡಿವಾಣ ಹಾಕಲು ಪೊಲೀಸರು ಹದ್ದಿನ ಕಣ್ಣಿಟ್ಟಿದ್ದರು.

ಪೊಲೀಸರ ಕ್ರಮದಿಂದ ಈ ಬಾರಿ ಒಂದು ನರಪಿಳ್ಳೆಯೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ಕೆಆರ್ ವೃತ್ತದ ವಾಣಿಜ್ಯ ಮಳಿಗೆಗಳು, ದೇವರಾಜ ಮಾರುಕಟ್ಟೆ ಸೇರಿದಂತೆ ಶಿಥಿಲಗೊಂಡ ಕಟ್ಟಡಗಳ ಮೇಲೆ ಏರಲಿಲ್ಲ. ಮುಂಜಾಗ್ರತ ಕ್ರಮವಾಗಿ ಎಲ್ಲಾ ಕಟ್ಟಡಗಳ ಮೇಲೆ ಪೊಲೀಸರನ್ನು ನಿಯೋಜಿಸಿದ್ದರೂ. ಕಟ್ಟಡದ ಮೇಲೆ ಏರಲು ಪ್ರಯತ್ನಿಸಿದವರಿಗೆ ತಕ್ಷಣವೇ ಎಚ್ಚರಿಸಿದ ಪರಿಣಾಮ ಒಬ್ಬರು ಕಟ್ಟಡಗಳನ್ನು ಏರಲು ಸಾಧ್ಯವಾಗಲಿಲ್ಲ.

**ಸಬ್ ವೇ ಬಂದ್ :** ಕೇವಲ ಶಿಥಿಲಗೊಂಡ ಕಟ್ಟಡಗಳು ಮಾತ್ರವಲ್ಲದೇ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಸಬ್‌ವೇ ಮೇಲೆಯೂ ಕುಳಿತು ದಸರಾ ವೀಕ್ಷಿಸುತ್ತಿದ್ದರು. ಇದನ್ನು ಮನಗಂಡ ಪೊಲೀಸ್ ಇಲಾಖೆ ಇಲ್ಲಿಯೂ ಯಾರು ಕುಳಿತುಕೊಳ್ಳದಂತೆ ಸಬ್ ವೇ ಸುತ್ತಲೂ ಸ್ಟೀಲ್ ಶೀಟ್‌ಗಳನ್ನು ಅಳವಡಿಸಿ, ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು.

# ಒಂದೇ ನಿಮಿಷಕ್ಕೆ ಅಂತ್ಯಗೊಂಡ ಜಗಜಟ್ಟಿಗಳ ಸಾಂಪ್ರದಾಯಿಕ ಕಾಳಗ



### ತಲೆಯಲ್ಲಿ ರಕ್ತ ಚಿಮ್ಮುತ್ತಿದ್ದಂತೆ ಸೆಣಸಾಟಕ್ಕೆ ತೆರೆ



ಮೈಸೂರು, ಅ.2(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರು ಅರಮನೆಯ ಸವಾರಿ ತೊಟ್ಟಿಯಲ್ಲಿ ಗುರುವಾರ ಬೆಳಗ್ಗೆ ನಡೆದ ಮೈನವಿರೇಳಿಸುವ ವಜ್ರಮುಷ್ಟಿ ಕಾಳಗ ಆರಂಭವಾದ ಒಂದೇ ನಿಮಿಷದೊಳಗೆ ಜಟ್ಟಿಯೊಬ್ಬರ ತಲೆಯಿಂದ ರಕ್ತ ಚಿಮ್ಮುವ ಮೂಲಕ ಸಾಂಪ್ರದಾಯಿಕ ಸೆಣಸಾಟ ಸಮಾಪ್ತಿಯಾಯಿತು.

ನವರಾತ್ರಿ ಹಿನ್ನೆಲೆಯಲ್ಲಿ ಅರಮನೆಯ ಸವಾರಿ ತೊಟ್ಟಿಯಲ್ಲಿ ಜಟ್ಟಿ ಕಾಳಗ ನಡೆಯುವ ಸಂಪ್ರದಾಯವಿದ್ದು, ಅದಕ್ಕಾಗಿ ಎರಡು ಜೋಡಿ ಜಟ್ಟಿಗಳು ಇಂದು ಬೆಳಗ್ಗೆ ಕಾಳಗ ನಡೆಸಲು ಸಜ್ಜಾಗಿದ್ದರು. ಮದಗಜಗಳಂತೆ ತೊಡೆತಟ್ಟಿ ಸೆಣಸಾಡುವ ಜಟ್ಟಿ ಕಾಳಗ ನೋಡಲು ಜನ ನೆರೆದಿದ್ದರು. ಕಾಳಗಕ್ಕೆ ಅಖಾಡದಲ್ಲಿ ಸಿದ್ದವಾಗಿ ನಿಂತಿದ್ದ ಮೈಸೂರಿನ ಸೋಮಶೇಖರ ಜಟ್ಟಿ ಅವರ ಪುತ್ರ ಮಂಜುನಾಥ ಜಟ್ಟಿ ಮತ್ತು ಬೆಂಗಳೂರಿನ ನಾರಾಯಣ ಜಟ್ಟಿ ಅವರ ಪುತ್ರ ಪ್ರದ್ಯುಮ್ನ ಜಟ್ಟಿ ಜೋಡಿ, ಹಾಗೂ ಎರಡನೇ ಜೋಡಿಯಲ್ಲಿ ಚನ್ನಪಟ್ಟಣದ ಜಗ್ಗ ಜಟ್ಟಿ ಪುತ್ರ ರಾಘವೇಂದ್ರ ಜಟ್ಟಿ ಮತ್ತು ಚಾಮರಾಜನಗರದ ನಾರಾಯಣ ಜಟ್ಟಿ ಪುತ್ರ ಮಹೇಶ್ ಜಟ್ಟಿ ಕಾಳಗ ನಡೆಸಲು ಸಜ್ಜಾಗಿದ್ದರು.

ಅರಮನೆಯಲ್ಲಿ ನವರಾತ್ರಿ ಪೂಜಾ ಕಾರ್ಯದಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪಾಲ್ಗೊಂಡಿದ್ದರಿಂದ ಜಟ್ಟಿಗಳ ಕಾಳಗಕ್ಕೆ ಗ್ರೀನ್ ಸಿಗ್ನಲ್ ಸಿಕ್ಕಿರಲಿಲ್ಲ. ಪೂಜಾ ಕಾರ್ಯ ಮುಗಿಸಿ, ಯದುವೀರ್ ಅವರು ಬರುತ್ತಿದ್ದಂತೆಯೇ ಕಾಳಗ ಆರಂಭಕ್ಕೆ ಸೂಚನೆ ನೀಡಿದರು. ಈ ವೇಳೆ ಇಬ್ಬರೂ ಜಟ್ಟಿಗಳು ಕಾಳಗಕ್ಕೆ ಮುಂದಾದರು.

ಆರಂಭದಿಂದಲೇ ಅಬ್ಬರಿಸಿದ ಜಟ್ಟಿಗಳು ಬಲಗೈ ಬೆರಳುಗಳಿಗೆ ಧರಿಸಿದ್ದ ವಜ್ರಮುಷ್ಟಿಯಿಂದ ಪರಸ್ಪರ ಮುಗಿ ಬಿದ್ದರು. ಮೈಸೂರಿನ ಮಂಜುನಾಥ ಜೆಟ್ಟಿ ಮತ್ತು ಪ್ರದ್ಯುಮ್ನ ಜೆಟ್ಟಿ ಪರಸ್ಪರ ವೀರಾವೇಶದಿಂದ ಹೋರಾಟ ನಡೆಸಿದರು. ಚಾಮರಾಜನಗರ ಮಹೇಶ್ ನಾರಾಯಣ್ ಜೆಟ್ಟಿ ಮತ್ತು ಚನ್ನಪಟ್ಟಣ ರಾಘವೇಂದ್ರ ಜೆಟ್ಟಿಯೂ ಪರಸ್ಪರ ಮದಗಜಗಳಂತೆ ಕಾದಾಡಿದರು. ಈ ಸಂದರ್ಭದಲ್ಲಿ ಇಬ್ಬರೂ ಜಟ್ಟಿಗಳು ಕಾಳಗದಲ್ಲಿ ಕೈಗೆ ಧರಿಸಿದ್ದ ವಜ್ರ ನಖ (ಆನೆ ದಂತದಿಂದ ತಯಾರಿಸಿದ ಆಯುಧ) ತಲೆಗೆ ತಾಕಿಸುವ ಮೂಲಕ ರಕ್ತ ಚಿಮ್ಮಿತು. ಒಂದೇ ನಿಮಿಷಕ್ಕೆ ಕಾಳಗಕ್ಕೆ ತೆರೆ ಬಿತ್ತು.

ನಾಲ್ವರು ಉಸ್ತಾದ್‌ಗಳು, ಇಬ್ಬರು ರೆಫ್ರಿಗಳು ಕಾಳಗವನ್ನು ನಡೆಸಿಕೊಟ್ಟರು. ಜಟ್ಟಿಗಳ ತಲೆಯಿಂದ ರಕ್ತ ಚಿಮ್ಮುತ್ತಿದ್ದಂತೆ ಈ ಹಿರಿಯ ಕುಸ್ತಿ ಪಟುಗಳು ಕಾಳಗವನ್ನು ನಿಲ್ಲಿಸಿದರು. ರಕ್ತ ಬರುವಂತೆ ಮುಷ್ಟಿಕಾಳಗ ನಡೆಸಿದ ಬೆಂಗಳೂರಿನ ಜಟ್ಟಿ, ಕುಸ್ತಿಯ ನಂತರ ಕನ್ನಡಿ ತೊಟ್ಟಿಗೆ ಅಭಿಮುಖವಾಗಿ ಕೈಮುಗಿದು ನಿಂತರು. ನಂತರ ಕಲ್ಯಾಣಮಂಟಪದಿಂದ ಸವಾರಿ ತೊಟ್ಟಿಯ ಬಾಗಿಲಿಗೆ ಬಂದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಎದುರಾಳಿಯ ತಲೆಯಿಂದ ರಕ್ತ ಸೋರುತ್ತಿರುವುದನ್ನು ತೋರಿಸಿದರು. ಇದೇ ವೇಳೆ ಕಾಳಗಕ್ಕೆ ಅಖಾಡಕ್ಕಿಳಿದಿದ್ದ ನಾಲ್ವರು ಜಟ್ಟಿಗಳಿಗೂ ಯದುವೀರ್ ಶುಭಕೋರಿದರು.

**ನಿಂಬುಜಾಂಬ ದೇವಿ ದರ್ಶನ:** ಕಾಳಗಕ್ಕೂ ಮುನ್ನ ನಾಲ್ಕು ಮಂದಿ ಜಟ್ಟಿಗಳು ಇಟ್ಟಿಗೆಗೂಡಿನಲ್ಲಿರುವ ನಿಂಬುಜಾಂಬ ದೇವಿಯ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.


ಮೂರನೇ ಪುಟದಿಂದ




# ಫಲಕಗಳ ಬೆಳಕಿನ ಚಮತ್ಕಾರ

### ತಂತ್ರಜ್ಞಾನದ ಮೊರೆ!

ಐತಿಹಾಸಿಕ, ಪಾರಂಪರಿಕ ದಸರಾ ಮಹೋತ್ಸವದ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಆಧುನಿಕ ಭರಾಟೆ ಹೊಕ್ಕಿದೆ. ಈ ಹಿಂದೆ ಪಂಜಿನ ಕವಾಯತು ಕಾರ್ಯಕ್ರಮದ ಪ್ರಮುಖ ಭಾಗವಾಗಿದ್ದ ಮಿಲಿಟರಿ ಪೊಲೀಸರ ಮೈನವಿರೇಳಿಸುವ ಬೈಕ್ ಸಾಹಸಕ್ಕೆ ಈ ಬಾರಿ ಬ್ರೇಕ್ ಹಾಕಲಾಗಿದೆ. ಬೈಕ್ ಸ್ಟಂಟ್ ಜೊತೆಗೆ ಡ್ರೋನ್ ಪ್ರದರ್ಶನಕ್ಕೂ ಅನುವು ಮಾಡಿಕೊಡಲಾಗುತ್ತಿತ್ತು. ಆದರೆ ಈಗ ಬೈಕ್ ಸಾಹಸ ಪ್ರದರ್ಶನಕ್ಕೇ ಅವಕಾಶವಿಲ್ಲದಂತಾಗಿದೆ. ಸಾಂಪ್ರದಾಯಿಕ ದಸರಾದಲ್ಲಿ ಆಧುನಿಕತೆ ಮೇಳೈಸುತ್ತಿದೆ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.





ದೇಶದ ನಾನಾ ಭಾಗಗಳಿಂದ ಬಂದಿದ್ದ 400ಕ್ಕೂ ಹೆಚ್ಚು ಕಲಾವಿದರು ಡ್ರಮ್, ಡೊಳ್ಳು, ಚಂಡೆ, ನಗಾರಿ, ಪಿಟೀಲು, ವಯೋಲಿನ್ ಮೂಲಕ ಸಂಗೀತ ಲೋಕ ಸೃಷ್ಟಿಸಿದರೆ, ನೃತ್ಯ ಕಲಾವಿದರು ಆಕರ್ಷಕ ಹೆಜ್ಜೆಗಳಿಂದ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ನೀಡಿದರು.

**ರೋಚಕ ಟೆಂಟ್ ಪೆಗ್ಗಿಂಗ್:** ಮೈಸೂರಿನ ಅಶ್ವಾರೋಹಿ ಪಡೆಯ ಟೆಂಟ್ ಪೆಗ್ಗಿಂಗ್ ರೋಚಕವಾಗಿತ್ತು. ಸಿಬ್ಬಂದಿಗಳಾದ ಶಣಪ್ಪ ಡಿ.ಸಾಸನೂರ, ಹೆಚ್.ಕೆ.ಸೋಮಣ್ಣ, ಚಂದ್ರ, ರುದ್ರಪ್ಪ, ಮಹೇಶ್, ಸುರೇಶ್ ಮಳಲಿ, ಸಂದೇಶ್, ಜಯಪ್ರಕಾಶ್ ಅವರು ತಮ್ಮ ಅಶ್ವಗಳನ್ನೇರಿ ಎರಡು ತಂಡಗಳಲ್ಲಿ ಸಾಹಸ ಮೆರೆದರು. ನೆಲದಲ್ಲಿ ನೆಟ್ಟಿದ್ದ ಉರಿ ಗೂಟಗಳನ್ನು ಈಟಿಯಲ್ಲಿ ಚುಚ್ಚಿ ಮೇಲೆತ್ತುವ ಮೂಲಕ ಮೈನವಿರೇಳಿಸಿದರು. ಇದೇ ವೇಳೆ ಬಿಕ್ಸ್ ವಾಕ್, ಬಿಕ್ಸ್ ವಾಕ್ ಸ್ಲೋ ಜಂಪಿಂಗ್, ಕ್ರಾಸ್ ಜಂಪಿಂಗ್, ಇಂಡಿಯನ್ ಫೈಲ್ ಮಾದರಿಯ ಪ್ರದರ್ಶನ ವೈಯಕ್ತಿಕ ಪ್ರದರ್ಶನದಲ್ಲೂ ನೈಪುಣ್ಯತೆ ಮೆರೆದರು. ಅಶ್ವಾರೋಹಿ ದಳದ ಸಾಹಸ ಪ್ರದರ್ಶನವನ್ನು ಪ್ರೇಕ್ಷಕರು ಶಿಳ್ಳೆ ಚಪ್ಪಾಳೆ ಮೂಲಕ ಪ್ರಶಂಸಿಸಿದರು.

**ಆಗಸದಲ್ಲಿ ಡ್ರೋನ್ ಕೌತುಕ:** ಒಂದು ಮೂಲೆಯಿಂದ ಮಿನುಗುವ ನಕ್ಷತ್ರಗಳಂತೆ ಬಾನಂಗಳಕ್ಕೆ ಹಾರಿದ ಸುಮಾರು ಮೂರು ಸಾವಿರ ಡ್ರೋನ್‌ಗಳು ಕೌತುಕವನ್ನೇ ಸೃಷ್ಟಿಸಿದವು. ಆರಂಭದಲ್ಲಿ ವರ್ಣರಂಜಿತ ಚಿತ್ತಾರದೊಂದಿಗೆ ಪ್ರೇಕ್ಷಕರ ಗಮನ ಸೆಳೆದು, ಅತ್ಯಾಕರ್ಷಕ ಆಕೃತಿಗಳ ಮೂಲಕ ಬೆರಗುಗೊಳಿಸಿದವು. ಸೌರಮಂಡಲ, ವಿಶ್ವಭೂಪಟ, ರಣಾಂಗಣದಲ್ಲಿರುವ ಯೋಧ, ರಾಷ್ಟ್ರೀಯ ಪಕ್ಷಿ ನವಿಲು, ರಾಷ್ಟ್ರೀಯ ಪ್ರಾಣಿ ಹುಲಿ, ಡಾಲ್ಫಿನ್, ಗರುಡ(ಈಗಲ್), ಕಾಳಿಂಗ ಮರ್ಧನ ಮಾಡುವ ಶ್ರೀಕೃಷ್ಣ, ಕಾವೇರಿ ಮಾತೆ, ಅಂಬಾರಿ ಹೊತ್ತು ಸಾಗುವ ಆನೆ, ತಾಯಿ ಚಾಮುಂಡೇಶ್ವರಿ ಆಕೃತಿಗಳು ಆಗಸದಲ್ಲಿ ಪಡಿಮೂಡುವಾಗ ನೆರೆದಿದ್ದವರೆಲ್ಲಾ ಎದ್ದು ನಿಂತು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದು ಸಂಭ್ರಮಿಸಿದರು.

**ಪಂಜುಗಳ ಫಲಕ:** ಧಾರವಾಡ ಪೊಲೀಸ್ ತರಬೇತಿ ಶಾಲೆಯಲ್ಲಿ ಬುನಾದಿ ತರಬೇತಿ ಪಡೆಯುತ್ತಿರುವ ಸುಮಾರು 300 ಮಂದಿ ಯುವ ಸಿಬ್ಬಂದಿ, ಬೆಳಗುವ ಪಂಜುಗಳಿಂದ ವಿವಿಧ ಫಲಕಗಳನ್ನು ಮೂಡಿಸಿ, ಹನ್ನೊಂದು ದಿನಗಳ ದಸರಾ ವೈಭವಕ್ಕೆ ಅಂತಿಮ ರಂಗು ನೀಡಿದರು. ಸಿಎಆರ್ ಡಿಸಿಪಿ ಸಿದ್ದನಗೌಡ ವೈಪಾಟೀಲ್ ಮಾರ್ಗದರ್ಶನ ಹಾಗೂ ಆರ್‌ಪಿಐ ಕೆ.ಎಂ.ಮೂರ್ತಿ ಉಸ್ತುವಾರಿಯಲ್ಲಿ ಪೊಲೀಸ್ ಬ್ಯಾಂಡ್‌ನ ಹಿಮ್ಮೇಳಕ್ಕೆ ಆಕರ್ಷಕ ಹೆಜ್ಜೆ ಹಾಕುವುದರೊಂದಿಗೆ 'ಸುಸ್ವಾಗತ', 'ಜೈ ಚಾಮುಂಡಿ(ಇಂಗ್ಲೀಷ್), ಗಾಂಧಿ ಜಯಂತಿ ಶುಭಾಶಯ, 'ನುಡಿ ಕನ್ನಡ ನಡೆ ಕನ್ನಡ' 'ಜೀವ ನದಿ ಕಾವೇರಿ', 'ನೇಗಿಲ ಯೋಗಿಗೆ ನಮನ', ಕರ್ನಾಟಕ ಪೊಲೀಸ್(ಇಂ)', 'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಹಾಗೂ 'ಜೈ ಹಿಂದ್(ಇಂ)' ಅಕ್ಷರಾಕೃತಿಗಳನ್ನು ಸೃಷ್ಟಿಸಿದರು. ಅಂತಿಮವಾಗಿ ಬಣ್ಣ ಬಣ್ಣದ ಬಾಣ ಬಿರುಸುಗಳನ್ನು ಸಿಡಿಸುವುದರೊಂದಿಗೆ 2025ರ ವೈಭವದ ದಸರಾಗೆ ವರ್ಣ ರಂಜಿತ ತೆರೆಬಿದ್ದಿತು.

**ಗಿನ್ನಿಸ್ ದಾಖಲೆ:** ಇದೇ ವೇಳೆ ವೇದಿಕೆಯಲ್ಲಿ ಡ್ರೋನ್ ಪ್ರದರ್ಶನದಲ್ಲಿನ ರಾಷ್ಟ್ರೀಯ ಪ್ರಾಣಿ ಹುಲಿ ಆಕೃತಿ ನಿರ್ಮಾಣ ಗಿನ್ನಿಸ್ ದಾಖಲೆ ಸೇರಿದ್ದರ ಹಿನ್ನೆಲೆಯಲ್ಲಿ ಅದರ ಪ್ರಮಾಣ ಪತ್ರವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಮುನಿಗೋಪಾಲ ರಾಜು ಅವರಿಗೆ ನೀಡಿ, ಅಭಿನಂದಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ತನ್ವೀರ್ ಸೇಠ್ ಮತ್ತಿತರರಿದ್ದರು.

# ಅದ್ಧೂರಿ ಜಂಬೂಸವಾರಿ



ಮೈಸೂರು ಅರಮನೆ ಆವರಣದಲ್ಲಿ ಗುರುವಾರ ಗಜಪಡೆಯ ಕ್ಯಾಪ್ಟನ್ ಅಭಿಮನ್ಯು, ತಾಯಿ ಚಾಮುಂಡೇಶ್ವರಿ ಮೂರ್ತಿಯನ್ನು ಚಿನ್ನದ ಅಂಬಾರಿಯಲ್ಲಿ ಹೊತ್ತು ತಂದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇತರರು ಪುಷ್ಪಾರ್ಚನೆ ಮಾಡುವ ಮೂಲಕ ಜಂಬೂ ಸವಾರಿ ಮೆರವಣಿಗೆಗೆ ವಿದ್ಯುಕ್ತ ಚಾಲನೆ ನೀಡಿದರು.

ಮೆರವಣಿಗೆ ವೀಕ್ಷಿಸಿದರು. ಗತ ಕಾಲದ ವೈಭವಕ್ಕೆ ಸಂಪ್ರದಾಯದ ಲೇಪನ, ಭಾವೈಕ್ಯತೆಯ ಸಂಕೇತ, ಜಾತಿ, ಧರ್ಮವನ್ನು ಮೀರಿದ ಸಮಾನತೆ ಸಾರುವ ಸ್ತಬ್ಧಚಿತ್ರಗಳು, ಜಾನಪದ ಕಲಾತಂಡಗಳು ಇತಿಹಾಸದ ವೈಭವ ಸಾರುತ್ತಾ ಮರೆವಣಿಗೆಯಲ್ಲಿ ಸಾಗಿದವು.

ಮಧ್ಯಾಹ್ನ 1.40 ಗಂಟೆಗೆ ಸರಿಯಾಗಿ ಜಂಬೂಸವಾರಿ ಮೆರವಣಿಗೆ ಆರಂಭವಾಯಿತು. ನಿಶಾನೆ ಆನೆ ಧನಂಜಯ ಹಾಗೂ ನೌಪತ್ ಆನೆ ಗೋಪಿ ಮಾರ್ಗ ತೋರಿಸುತ್ತಾ ಮಂಚೂಣಿಯಲ್ಲಿ ಸಾಗಿದವು. ಇದರ ಜೊತೆಗೆ ಮಹೇಂದ್ರ, ಲಕ್ಷ್ಮಿ, ಶ್ರೀಕಂಠ, ಪ್ರಶಾಂತ, ಹೇಮಾವತಿ, ಸುಗ್ರೀವ, ಏಕಲವ್ಯ, ಕಂಜನ್, ಭೀಮ ಶಾಂತಚಿತ್ತದಿಂದ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದವು.


ತರುವಾಯ ವೈಶಿಷ್ಟತೆ ಸಾರುವ 58 ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಸಾಗಿದವು. ಭಾರತದ ಇಂಜಿನಿಯರಿಂಗ್ ಚಮತ್ಕಾರ ಪ್ರದರ್ಶಿಸುವ ಭಾರತೀಯ ರೈಲ್ವೆಯ ಸ್ತಬ್ಧಚಿತ್ರ ಅತ್ಯಾಕರ್ಷಕವಾಗಿತ್ತು. ಸಮುದ್ರದಿಂದ 359 ಮೀಟರ್ ಎತ್ತರದಲ್ಲಿ ನಿರ್ಮಾಣ ಮಾಡಿರುವ ಚಿನಾಬ್ ಸೇತು ಹಾಗೂ 72 ಮೀಟರ್ ಉದ್ದದ ಪಂಜನ್ ಸೇತುವೆಯ ಸ್ತಬ್ಧಚಿತ್ರ ಭಾರತದ ಪ್ರಗತಿಯನ್ನು ಸಾರಿ ಹೇಳಿತು. ಶಿಲ್ಪ ಕಲೆಗಳ ನಾಡು ಕೂಡಲ ಸಂಗಮದ ಸ್ತಬ್ಧಚಿತ್ರ, ಮೈಸೂರು ನಗರ ಪಾಲಿಕೆಯ ಸ್ವಾಸ್ಥ್ಯ ಮತ್ತು ಸುಸ್ಥಿರ ಪರಿಕಲ್ಪನೆಯ ಸ್ತಬ್ಧ ಚಿತ್ರ, ಡಿಆರ್‌ಡಿಒ ತಯಾರಿಸಿರುವ ಆಕಾಶ್ ರಾಕೆಟ್, ಬಿಇಎಂಎಲ್‌ನ ಹೆವಿ ಮೊಬಿಲಿಟಿ ವೆಹಿಕಲ್, ಕೊಪ್ಪಳದ ಕಿನ್ನಾಳ ಕಲೆ ಸ್ತುಬ್ಧಚಿತ್ರ ಐತಿಹಾಸಿಕ ಹಿನ್ನೆಲೆಯ ಪಾರಂಪರಿಕ ಶೈಲಿಯ ಶಿವಮೊಗ್ಗದ ಕೇದಾರೇಶ್ವರ ದೇವಸ್ಥಾನ, 25 ಮೀಟರ್ ಎತ್ತರದ ವಿಜಯಪುರದ ಶಿವಗಿರಿಯ ಶಿವನ ಪ್ರತಿಮೆ, ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿಬಿಂಬಿಸುವ ದೈವಾರಾಧನೆಯ ಸ್ತಬ್ಧ ಚಿತ್ರ ಸೇರಿದಂತೆ 58 ವಿವಿಧ ಬಗೆಯ ವೈಶಿಷ್ಟತೆಯ ಸ್ತುಬ್ಧಚಿತ್ರಗಳು ನೋಡುಗರ ಕಣ್ಮನ ಸೆಳೆದವು.


ಇದಲ್ಲದೆ ಜಾನಪದ ಸೊಗಡನ್ನು ಬಿತ್ತರಿಸುವ 90 ವಿವಿಧ ಜಾನಪದ ಕಲಾ ತಂಡಗಳು ಮೆರವಣಿಗೆಯಲ್ಲಿ ಸಾಗುವ ಮೂಲಕ ಇತಿಹಾಸದ ವೈಭವವನ್ನು ಅನಾವರಣ ಗೊಳಿಸಿದವು. ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ 6 ಬಾರಿ ಚಿನ್ನದ ಅಂಬಾರಿ ಹೊತ್ತು ಯಶಸ್ವಿಯಾಗಿರುವ ಗಜನಾಯಕ ಅಭಿಮನ್ಯು ಎಲ್ಲರ ಪ್ರಶಂಸೆಗೆ ಪಾತ್ರನಾಗಿದ್ದಾನೆ. ಈ ಮೂಲಕ ಕಳೆದ 10 ದಿನಗಳಿಂದ ನಡೆದ ಮೈಸೂರು ದಸರಾಗೆ ಅದ್ಧೂರಿ ತೆರೆಬಿತ್ತು.

ಮೈಸೂರು ಮಿತ್ರ ಶುಕ್ರವಾರ 3 ಅಕ್ಟೋಬರ್ 2025

# ದೇವಲೋಕವನ್ನೇ ಧರೆಗಿಳಿಸಿದ ಮಡಿಕೇರಿ ದಸರಾ

## 'ದುಷ್ಟ ಸಂಹಾರ ಶಿಷ್ಟ ಪರಿಪಾಲನೆಯ'ಯ ಸಂದೇಶ, ಹರಿದು ಬಂದ ಜನಸಾಗರ




ಶೋಭಾಯಾತ್ರೆಯಲ್ಲಿ ಕಂಗೊಳಿಸಿದ ದೇಚೂರು ಶ್ರೀರಾಮ ಮಂದಿರ, ಪಿಪೇಟೆ ಶ್ರೀರಾಮ ಮಂದಿರ ಮತ್ತು ಪೇಟೆ ಶ್ರೀರಾಮ ಮಂದಿರದ ದಶ ಮಂಟಪಗಳು.

ಮಡಿಕೇರಿ, ಅ.2– ಕೊಡಗನ್ನಾಳಿದ ಹಾಲೇರಿ ರಾಜವಂಶಸ್ಥರ ಅವಧಿಯಲ್ಲಿ ಆರಂಭವಾಗಿ ಎರಡು ಶತಮಾನಗಳ ಐತಿಹಾಸಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾ ಉತ್ಸವದ ದಶಮಂಟಪಗಳ ಶೋಭಾಯಾತ್ರೆ ವಿಜೃಂಭಣೆಯಿಂದ ನಡೆಯಿತು.

ಕಾಲಿಡಲು ಸ್ಥಳವಿಲ್ಲದಂತೆ ಕಿಕ್ಕಿರಿದು ನೆರೆದಿದ್ದ ಸಹಸ್ರಾರು ಪ್ರೇಕ್ಷಕರ ಸಮ್ಮುಖದಲ್ಲಿ ದಶ ಮಂಟಪಗಳು ದೇವ ಲೋಕವನ್ನೇ ಧರೆಗಿಳಿಸುವ ಮೂಲಕ 'ದುಷ್ಟ ಸಂಹಾರ ಶಿಷ್ಟ ಪರಿಪಾಲನೆಯ' ಸಂದೇಶ ಸಾರಿದವು. ಆ ಮೂಲಕ ದಸರಾ ವೀಕ್ಷಣೆಗೆ ಆಗಮಿಸಿದ್ದ ಮಂದಿ ಮಡಿಕೇರಿ ದಸರಾ ವೈಭವವನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು.

**ವೈಭವದ ಶೋಭಾಯಾತ್ರೆ:** ಸಂಪ್ರದಾಯದಂತೆ ನಗರದ ಪೇಟೆ ಶ್ರೀರಾಮಮಂದಿರದ ಆಕರ್ಷಕ ಮಂಟಪಕ್ಕೆ ರಾತ್ರಿ ಚಾಲನೆ ನೀಡುವ ಮೂಲಕ ದಶ ಮಂಟಪಗಳ ಶೋಭಾಯಾತ್ರೆ ಆರಂಭಗೊಂಡಿತು. ಒಂದೂವರೆ ಶತಮಾನದ ಭವ್ಯ ಇತಿಹಾಸ ಹೊಂದಿರುವ ಪೇಟೆ ಶ್ರೀ ರಾಮಮಂದಿರ 'ಶ್ರೀಕೃಷ್ಣನಿಂದ ಗೀತೋಪದೇಶ' ಕಥಾ ಸಾರಾಂಶ ಅಳವಡಿಸಿದ್ದ ಮಂಟಪಕ್ಕೆ ದೇವಾಲಯದ ಮುಂಭಾಗ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ವಿಜಯಿ ಘೋಷಣೆಯೊಂದಿಗೆ ದಶ ಮಂಟಪಗಳ ಶೋಭಾಯಾತ್ರೆ ಆಹ್ವಾನ ನೀಡಲಾಯಿತು. ಸುವರ್ಣ ಮಹೋತ್ಸವದ ಸಂಭ್ರಮದ ಶ್ರೀ ಕೋಟೆ ಮಾರಿಯಮ್ಮ ದೇವಾಲಯದ ಮಂಟಪದಲ್ಲಿ ಈ ಬಾರಿ 'ದೇವ ದೇವತೆಗಳ ಕಾಳಗ, ಶರಬಾವತಾರ ಹಾಗೂ ಪ್ರತ್ಯುಂಗ ದೇವಿಯಿಂದ ನರಸಿಂಹನ ಉಗ್ರ ಶಮನ' ಎಂಬ ಕಥಾ ಸಾರಾಂಶ ಅಳವಡಿಸಿ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿತು.

**ಧರೆಗಿಳಿದ ದೈವೀ ಲೋಕ:** ದಸರಾ ಸಂಭ್ರಮದಲ್ಲಿ ದಶ ಮಂಟಪಗಳು ದೈವೀ ಲೋಕವನ್ನೇ ಧರೆಗಿಳಿಸಿದ ಅನುಭವವನ್ನು ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಜನರು ಕಣ್ತುಂಬಿಕೊಂಡರು. ಶ್ರೀ ಚೌಡೇಶ್ವರಿ ದೇವಾಲಯ 'ಮಹಾ ಸಾಧ್ವಿ ಸೀತೆಯ ಚಂಡಿಕಾವತಾರ' ಕಥಾ ಸಾರಾಂಶದೊಂದಿಗೆ ಶೋಭಾಯಾತ್ರೆಯಲ್ಲಿ ತೆರಳಿದರೆ, ದೇಚೂರು ಶ್ರೀರಾಮ ಮಂದಿರ ದೇವಾಲಯ ಮಂಟಪದಲ್ಲಿ 'ಶ್ರೀ ರಾಮಾಂಜನೇಯ ವೈಭವ', ಕುಂದುರು ಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ದೇವಾಲಯ 'ಪರಶಿವನಿಂದ ಜಲಾಂಧರನ ವಧೆ', ಶ್ರೀ ಕೋಟೆ ಮಹಾಗಣಪತಿ ದೇವಾಲಯ 'ಶ್ರೀ ವಿಘ್ನ ರಾಜನಿಂದ ಮಮತಾಸುರನ ಸಂಹಾರ', ಶ್ರೀ ಕರವಲೆ ಭಗವತಿ ಮಹಿಷ ಮರ್ದಿನಿ ದೇವಾಲಯ 'ಸಂಜೀವಿನಿ ಸಸ್ಯಕ್ಕಾಗಿ ದ್ರೋಣ ಗಿರಿಯನ್ನು ಹೊತ್ತು ತರುವ ಆಂಜನೇಯ', ಶ್ರೀ ಕಂಚಿ ಕಾಮಾಕ್ಷಿ ದೇವಾಲಯ 'ಪರಶುರಾಮನಿಂದ ಕಾರ್ತಿಕೆ ವೀರನ ಸಂಹಾರ' ಪೇಟೆ ಶ್ರೀ ರಾಮಮಂದಿರ 'ಶ್ರೀ ಕೃಷ್ಣನಿಂದ ಗೀತೋಪದೇಶ' ಹಾಗೂ ಶ್ರೀ ದಂಡಿನ ಮಾರಿಯಮ್ಮ ದೇವಾಲಯದ ಮಂಟಪದಲ್ಲಿ 'ಶಿವನಿಂದ ಅಂಧಾಸುರನ ವಧೆ' ಶ್ರೀ ಕೋದಂಡ ರಾಮ ಮಂಟಪದಲ್ಲಿ 'ಆದಿ ಚುಂಚನಗಿರಿ ಕಾಲ ಭೈರವ ಮಹಿಮೆ' ಎಂಬ ಕಥಾ ಸಾರಾಂಶದ ಚಲನವಲನ ಅಳವಡಿಕೆ ಮಾಡಲಾಗಿತ್ತು. ಪೌರಾಣಿಕ ಕಥಾಭಾಗವನ್ನು ಹೊಂದಿದ್ದ ದಶ ಮಂಟಪಗಳು ಜನಮನವನ್ನು ಸೂರೆಗೊಂಡವು.

ಎಲ್ಲಾ 10 ಮಂಟಪಗಳಲ್ಲೂ ಪೌರಾಣಿಕ ಕಥಾ ಹಂದರಕ್ಕೆ ತಕ್ಕಂತೆ ಕಲಾಕೃತಿಗಳನ್ನು ಅಳವಡಿಸಲಾಗಿತ್ತು. ಆಕರ್ಷಕ ದಿಂಡಿಗಲ್ ಲೈಟ್ ಬೋರ್ಡ್, ಕಥಾ ಸಾರಾಂಶದ ಕಲಾಕೃತಿಗಳ ಚಲನವಲನ ಆಧರಿಸಿ ಸ್ಪಾಟ್ ಲೈಟ್‌ಗಳು, ದೇವಾನುದೇವತೆಗಳು ಹಾಗೂ ದುಷ್ಟ ಶಕ್ತಿಗಳ ನಡುವಿನ ಸಂಹಾರ ಯುದ್ಧದ ಸನ್ನಿವೇಶಗಳಲ್ಲಿ ಸಂಭಾಷಣೆಗೆ ಹೊಂದಿಕೆಯಾಗುವ ಡಿ.ಜೆ. ಸೌಂಡ್‌ಗಳನ್ನು ಅಳವಡಿಸಲಾಗಿತ್ತು. ದಶ ಮಂಟಪಗಳು ದುಷ್ಟ ಸಂಹಾರದ ಪ್ರದರ್ಶನ ನೀಡಿದ ಬಳಿಕ ಎಲ್ಲೆಡೆ ಶಾಂತಿ ಮಂತ್ರ ಘೋಷ ಮೊಳಗಿದವು. ಡಿ.ಜೆ ಸೌಂಡ್ ಹಾಗೂ ಪೂಕೋಡು ಬ್ಯಾಂಡ್ ಸೆಟ್‌ಗೆ ಯುವ ಸಮೂಹ ಹೆಜ್ಜೆ ಹಾಕಿ ಸಂಭ್ರಮಿಸಿದರು. ವಿಜಯದಶಮಿಯ ಮಧ್ಯಾಹ್ನದವರೆಗೆ ತುಂತುರು ಮಳೆ ಸುರಿದು ಬಳಿಕ ಮರೆಯಾಗಿ ಮೋಡ ಕವಿದ ವಾತಾವರಣ ನಿರ್ಮಾಣವಾಗಿತ್ತು. ಹೀಗಿದ್ದರೂ ನಿರೀಕ್ಷೆಯಂತೆ ಸಂಜೆ ಬಳಿಕ ಜಿಲ್ಲೆ ಹಾಗೂ ಹೊರ ಜಿಲ್ಲೆಗಳ ಸಹಸ್ರಾರು ಮಂದಿ ಐತಿಹಾಸಿಕ ನಗರಿ ಮಡಿಕೇರಿಗೆ ಆಗಮಿಸುವುದರೊಂದಿಗೆ ಮಂಜಿನ ನಗರಿಯ ದಸರಾ ಸಂಭ್ರಮದಲ್ಲಿ ತೇಲಿದರು.

**ಹರಸಿದ ಶಕ್ತಿ ಕರಗಗಳು:** ಮಡಿಕೇರಿ ದಸರಾದ ಮೂಲ ಕೇಂದ್ರ ಬಿಂದುವಾದ 4 ಶಕ್ತಿ ದೇವತೆಗಳ ಕರಗಗಳು ಬಣ್ಣಬಣ್ಣದ ಪುಷ್ಪಗಳಿಂದ ಅಲಂಕೃತಗೊಂಡು ತಮ್ಮ ಮೂಲ ಸ್ಥಾನದಲ್ಲಿ ಪೂಜೆ ಸಲ್ಲಿಸಿ ನಗರ ಪ್ರದಕ್ಷಿಣೆಗೆ ತೆರಳಿದವು. ಶೋಭಾಯಾತ್ರೆಯಲ್ಲಿ ಸಾಗುತ್ತಿದ್ದ ದಶ ಮಂಟಪದಿಂದ ಪೂಜೆ ಪಡೆದು ಮಂಟಪಗಳ ಮುಂದೆ ದೈವೀ ಸ್ವರೂಪಿಣಿ ಕರಗಗಳು ನರ್ತಿಸಿ ಶೋಭಾಯಾತ್ರೆ ಸುಗಮವಾಗಿ ಸಾಗಲಿ, ನಾಡಿಗೆ ಒಳತಾಗಲಿ ಎಂದು ಹರಸಿದವು. ಕರಗಗಳು ಸಾಗಿದ ಮಾರ್ಗದುದ್ದಕ್ಕೂ ಕಿಕ್ಕಿರಿದು ನೆರೆದಿದ್ದ ಜನ ಕರಗಗಳಿಗೆ ಭಕ್ತಿ ಸಮರ್ಪಿಸಿದರು.

### ವ್ಯಾಪಕ ಬಂದೋಬಸ್ತ್

ಮಡಿಕೇರಿ ದಸರಾಕ್ಕೆ ಜನ ಪ್ರವಾಹವೇ ಹರಿದು ಬರುವ ನಿರೀಕ್ಷೆ ಇದ್ದ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಮಾಡಿತ್ತು. ನಗರ ಪ್ರವೇಶಿಸುವ ಎಲ್ಲಾ ರಸ್ತೆಗಳಲ್ಲೂ ಚೆಕ್ ಪೋಸ್ಟ್, ಸಿ.ಸಿ. ಕ್ಯಾಮರಾ ಅಳ ವಡಿಕೆ ಮಾಡಲಾಗಿತ್ತು. ಮಂಟಪಗಳು ಹಾಗೂ ಜನದಟ್ಟಣೆ ಉಂಟಾಗುವ ಸ್ಥಳ ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು.

ಮಧ್ಯಾಹ್ನದ ಬಳಿಕ ವಾಹನಗಳು ನಗರ ಪ್ರವೇಶವನ್ನು ತಡೆ ಹಿಡಿಯಲಾಗಿತ್ತು. ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ, ಆರ್‌ಎಂಸಿ ಮೈದಾನ, ಸಂತ ಜೋಸೆಫರ ಶಾಲಾ ಮೈದಾನ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮೈದಾನಗಳಲ್ಲಿ ಪ್ರವಾಸಿಗರ ವಾಹನಗಳನ್ನು ಪಾರ್ಕಿಂಗ್ ಮಾಡಲು ಅವಕಾಶ ನೀಡ ಲಾಗಿತ್ತು. ನಗರದ 7 ಕಡೆಗಳಲ್ಲಿ ಪೊಲೀಸ್ ಸಹಾಯವಾಣಿ ಸಹಿತ ವೈದ್ಯಕೀಯ ಸೆಂಟರ್‌ಗಳನ್ನು ತೆರೆಯಲಾಗಿತ್ತು.

# ವಿಜಯದಶಮಿಗೆ ಮಂಡ್ಯದ ಸಾಂಪ್ರದಾಯಿಕ ದಸರಾ ರಂಗು

**● ಕಲಾಪ್ರಾಕಾರಗಳಲ್ಲಿ ಕಾಂತಾರ ಪಂಜುರ್ಲಿ ದೈವ ಆಕರ್ಷಣೆ ● ಬೆಳ್ಳಿರಥದಲ್ಲಿ ಮೈಸೂರು ಮಹಾರಾಜ**



**ಮಂಡ್ಯ:** ಆಕರ್ಷಿಸಿದ ಕಾಂತಾರ ಚಿತ್ರದ ಪಂಜುರ್ಲಿ ದೈವ, ವರ್ಣರಂಜಿತ ವಿಶೇಷ ರಥದಲ್ಲಿ ರಾರಾಜಿಸಿದ ನಾಡದೇವತೆ, ಬೆಳ್ಳಿ ರಥದಲ್ಲಿ ಮಹಾರಾಜರ ದರ್ಬಾರ್, ಅಪರೂಪವಾಗಿ ಕಂಡುಬಂದ ನಾಗರಹೊಳೆ ಕಾಡು ಜನರು. ಜೊತೆಗೆ ವಿಭಿನ್ನ, ವೈಶಿಷ್ಟ್ಯಪೂರ್ಣ ಜಾನಪದ ಕಲಾತಂಡಗಳೊಂದಿಗೆ ನಡೆದ ಮಂಡ್ಯ ದಸರಾ ಮೆರವಣಿಗೆ ವಿಜಯದಶಮಿಗೆ ಮೆರುಗು ನೀಡಿತ್ತು.

ಕಳೆದ ಏಳು ವರ್ಷಗಳಿಂದ ಮಂಡ್ಯ ಯೂತ್ ಗ್ರೂಪ್ ಹಾಗೂ ಅನಿಲ್ ಆನಂದ್ ಡ್ರೀಮ್ ವರ್ಕ್ ಸಹಯೋಗದೊಂದಿಗೆ ಸಾಂಪ್ರದಾಯಿಕ ಮಂಡ್ಯ ದಸರಾ ಮುನ್ನಡೆದುಕೊಂಡು ಬಂದಿದೆ. ಅದೇ ರೀತಿ ಈ ಬಾರಿಯೂ ನಗರದ ಶ್ರೀ ಕಾಳಿಕಾಂಬ ದೇವಾಲಯದ ಆವರಣದಲ್ಲಿರುವ ಗಜೇಂದ್ರ ಮೋಕ್ಷ ಕೊಳದ ಬಳಿ ಮಧ್ಯಾಹ್ನ 3.50ಕ್ಕೆ ಸಲ್ಲುವ ಕುಂಭ ಲಗ್ನದಲ್ಲಿ ಮಂಡ್ಯ ಯೂತ್ ಗ್ರೂಪ್ ಅಧ್ಯಕ್ಷ ಡಾ.ಅನಿಲ್ ಆನಂದ್ ಬನ್ನಿಮರಕ್ಕೆ ಪೂಜೆ ನೆರವೇರಿಸಿದರು.

ಪ್ರತಿ ವರ್ಷವೂ ಉತ್ತಮ ಮಳೆಯಾಗಿ ಕೃಷ್ಣರಾಜಸಾಗರ ಜಲಾಶಯ ಭರ್ತಿಯಾಗಿ ರೈತರ ಬಾಳು ಹಸನಾಗಲಿ. ಜಿಲ್ಲೆ ಸದಾಕಾಲ ಹಸಿರಿನಿಂದ ಕಂಗೊಳಿಸುತ್ತಾ, ನೆಮ್ಮದಿಯ ಬದುಕು ಜನರಿಗೆ ಸಿಗಲಿ. ಅಭಿವೃದ್ಧಿ ಪಥದಲ್ಲಿ ಮುನ್ನಡೆಯಲಿ ಎಂದು ಡಾ.ಅನಿಲ್ ಆನಂದ್ ದೇವರಲ್ಲಿ ಪ್ರಾರ್ಥಿಸಿದರು.

ಬಳಿಕ ವಿಶೇಷ ರಥದಲ್ಲಿ ಪ್ರತಿಷ್ಠಾಪನೆಗೊಂಡಿದ್ದ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ನೆರವೇರಿಸಿ ಜಾನಪದ ಕಲಾತಂಡಗಳ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆಗೂ ಮುನ್ನ ವರುಣನ ಆಗಮನ ಮಂಡ್ಯ ದಸರಾಗೆ ಶುಭ ಕೋರುವಂತಿತ್ತು. ಮಂಡ್ಯ ದಸರಾ ಮೆರವಣಿಗೆಯ ಆಕರ್ಷಣೆಯೇ ಜಾನಪದ ಕಲಾತಂಡಗಳು. ವೈವಿಧ್ಯಮಯ, ವೈಶಿಷ್ಟ್ಯಪೂರ್ಣ ಕಲಾತಂಡಗಳು ಮೆರವಣಿಗೆ ವೇಳೆ ಜನರ ಗಮನಸೆಳೆದವು. ಕಾಂತಾರಾ ಚಿತ್ರದ ಮೂಲಕ ಜನಪ್ರಿಯಗೊಂಡಿರುವ ಪಂಜುರ್ಲಿ ದೈವದ ಕಲಾ ಪ್ರಾಕಾರ ವಿಶೇಷವಾಗಿ ಕಂಡುಬಂದಿತು.

ಬೆಳ್ಳಿ ರಥದಲ್ಲಿ ಮಹಾರಾಜನ ಪೋಷಾಕಿನಲ್ಲಿ ಕುಳಿತಿದ್ದ ಸಾತನೂರು ಪ್ರಕಾಶ್ ಜನರತ್ತ ಕೈಬೀಸುತ್ತಾ ಸಾಗಿದರು. ಇನ್ನುಳಿದಂತೆ ಪೂಜಾ ಕುಣಿತ, ಚಿಲಿಪಿಲಿ ಬೊಂಬೆ, ಪಟ ಕುಣಿತ, ಸೋಮನ ಕುಣಿತ, ಮಹಿಳೆಯರ ಕೋಲಾಟ ಮೆರವಣಿಗೆಗೆ ಸಾಥ್ ನೀಡಿದ್ದವು. ನಗರದ ಶ್ರೀ ಕಾಳಿಕಾಂಬ ದೇವಾಲಯದಿಂದ ಆರಂಭವಾದ ಮೆರವಣಿಗೆ ಬೆಂಗಳೂರು–ಮೈಸೂರು ಹೆದ್ದಾರಿ ಮೂಲಕ ವಾಣಿವಿಲಾಸ ರಸ್ತೆ, ಹೊಸಹಳ್ಳಿ ವೃತ್ತ, ನೂರಡಿ ರಸ್ತೆ, ಬನ್ನೂರು ರಸ್ತೆ ಮಾರ್ಗವಾಗಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಬಳಿ ಮೆರವಣಿಗೆ ಅಂತ್ಯಗೊಂಡಿತು.

ಮೆರವಣಿಗೆ ಸಾಗುವ ದಾರಿಯುದ್ದಕ್ಕೂ ಜನರು ನಿಂತು ಮಂಡ್ಯ ದಸರಾ ವೀಕ್ಷಿಸಿದರು. ಜಾನಪದ ಕಲಾತಂಡಗಳ ಪ್ರದರ್ಶನವನ್ನು ಕಣ್ತುಂಬಿಕೊಂಡರು.

# ಕೆ.ಆರ್.ಪೇಟೆ ತೋಟಗಾರಿಕೆ ಅಧಿಕಾರಿ ಅನುಮಾನಾಸ್ಪದ ಸಾವು



ಕೆ.ಆರ್.ಪೇಟೆ, ಅ.2– ತಾಲೂಕು ತೋಟಗಾರಿಕೆ ಅಧಿಕಾರಿಯೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು, ಮೃತ ದೇಹ ಕೆರೆಯಲ್ಲಿ ಪತ್ತೆಯಾಗಿದೆ.

ಪಟ್ಟಣದ ಮೈಸೂರು ರಸ್ತೆಯ ನಿವಾಸಿ ಡಾ.ಆರ್.ಜಯರಾಂ(51) ಎಂಬುವರೇ ಸಂಶಯಸ್ಪದ ರೀತಿ ಸಾವನ್ನಪ್ಪಿದವರಾಗಿದ್ದಾರೆ. ಡಾ.ಆರ್.ಜಯರಾಂ ಕಳೆದ 20 ವರ್ಷಗಳಿಂದ ಕೆ.ಆರ್.ಪೇಟೆ ತಾಲೂಕು ತೋಟಗಾರಿಕಾ ಇಲಾಖೆಯಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿಯಾಗಿ ಸೇವೆ ಸಲ್ಲಿಸುವ ಮೂಲಕ ರೈತರು ಮತ್ತು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದರು. ಸ್ನೇಹಿತರು ಮತ್ತು ಸಹಪಾಠಿಗಳೊಂದಿಗೆ ಉತ್ತಮ ಬಾಂದವ್ಯ ಹೊಂದಿದ್ದರು. ಪ್ರತಿಯೊಬ್ಬರನ್ನೂ ಸಾರ್ ಎಂದೇ ಸಂಬೋಧಿಸಿ ಕರೆಯುವ ಮೂಲಕ ಎಲ್ಲರಿಂದಲೂ ಉತ್ತಮ ಅಧಿಕಾರಿ ಎಂದೇ ಗೌರವ ಪಡೆದಿದ್ದರು.

ಸೋಮವಾರ ರಾತ್ರಿ ಸುಮಾರು 9 ಗಂಟೆಗೆ ಮನೆಯಿಂದ ಹೊರ ಹೋಗಿದ್ದ ಜಯರಾಂ ಅವರು ಕೆ.ಆರ್.ಪೇಟೆ ಪಟ್ಟಣದ ದೇವೀರಮ್ಮಣ್ಣಿ ಕೆರೆಯ ಬಸವಣ್ಣನ ದೇವಾಲಯದ ಬಳಿ, ಕೆರೆ ದಡದಲ್ಲಿ ತಮ್ಮ ಬೈಕ್ ನಿಲ್ಲಿಸಿ ನಾಪತ್ತೆಯಾಗಿದ್ದರು.

ಪೊಲೀಸರು ಮತ್ತು ಅಗ್ನಿಶಾಮಕ ದಳ ಮಂಗಳವಾರ ದಿನವಿಡೀ ಈಜು ಮತ್ತು ಮುಳುಗು ತಜ್ಞರೊಂದಿಗೆ ಜಲ ಕ್ಯಾಮರಾ ಬಳಸಿ ಶವಕ್ಕಾಗಿ ಹುಡುಕಾಟ ನಡೆಸಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ.

ಬುಧವಾರ ಬೆಳಗ್ಗೆ ಬೈಕ್ ನಿಲ್ಲಿಸಿದ್ದ ಅನತಿ ದೂರದಲ್ಲಿ ಕೆರೆಯಲ್ಲಿ ಜಯರಾಂ ಅವರ ಶವವು ಪತ್ತೆಯಾಗಿದೆ. ವಿಷಯ ತಿಳಿದ ಕೆ.ಆರ್.ಪೇಟೆ ಪಟ್ಟಣ ಪೊಲೀಸರು ಅಗ್ನಿಶಾಮಕ ದಳದ ಅಧಿಕಾರಿಗಳ ಸಹಕಾರದಿಂದ ಶವವನ್ನು ನೀರಿನಿಂದ ಮೇಲೆತ್ತಿ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಮಾಡಿಸಿ ವಾರಸುದಾರರಿಗೆ ಹಸ್ತಾಂತರ ಮಾಡಿದ್ದಾರೆ. ಮೃತರ ಅಂತಿಮ ದರ್ಶನಕ್ಕೆ ಮನೆಯ ಬಳಿ ಅವಕಾಶ ಕಲ್ಪಿಸಲಾಗಿತ್ತು. ಕುಟುಂಬದವರ ಆಕ್ರಂದನ ನಡುವೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

## ಮಹಿಳೆಯ ಮಾಂಗಲ್ಯ ಸರ ಕದ್ದು ಪರಾರಿ

ಭಾರತೀನಗರ, ಅ.2– ಭಾರತೀನಗರದಲ್ಲಿ ರಾಜ್ಯ ಸಾರಿಗೆ ಬಸ್ ಹತ್ತುವಾಗ ಮಹಿಳೆಯ ಕುತ್ತಿಗೆಯಲ್ಲಿದ್ದ 65 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರವನ್ನು ಅವರ ಅರಿವಿಗೆ ಬಾರದಂತೆ ಕದ್ದು ಪರಾರಿಯಾಗಿದ್ದು ಕೆ.ಎಂ ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾಗ್ಯಮ್ಮ ನಂದ ರಾಜು ಎಂಬುವರೇ ಚಿನ್ನದ ಮಾಂಗಲ್ಯ ಸರ ಕಳೆದುಕೊಂಡವರು. ಭಾರತೀನಗರದ ಬಸ್ ನಿಲ್ದಾಣದಿಂದ ಮಳವಳ್ಳಿಗೆ ತೆರಳಲು ಭಾಗ್ಯಮ್ಮ ಬಸ್ ಹತ್ತಿದ್ದಾರೆ. ಈ ಸಂದರ್ಭದಲ್ಲಿ ನೂಕುನುಗ್ಗಲಿನಲ್ಲಿ ಮೂವರು ಮಹಿಳೆಯರು ಭಾಗ್ಯಮ್ಮ ಅವರ ಕಾಲಿಗೆ ಕೆಂಪು ಬಣ್ಣ ಹಾಕಿದ್ದಾರೆ. ಜೊತೆಗೆ ಅವರ ಬೆನ್ನನ್ನು ಹಲವಾರು ಬಾರಿ ಸ್ಪರ್ಶಿಸಿದ್ದಾರೆ. ಇದರಿಂದ ಭಾಗ್ಯಮ್ಮ ಮಂಕಾದರು, ಈ ವೇಳೆ ಅವರ ಗಮನಕ್ಕೆ ಬಾರದಂತೆ ಅವರ ಕತ್ತಿನಲ್ಲಿದ್ದ ಮಾಂಗಲ್ಯ ಸರವನ್ನು ಕಸಿದು ಪರಾರಿಯಾಗಿದ್ದಾರೆ. ಭಾಗ್ಯಮ್ಮ ಮಳವಳ್ಳಿ ತೆರಳಿದಾಗ ಸರ ಕಳ್ಳತನವಾಗಿರುವುದು ತಿಳಿಯಿತು.

## ಒಂದೇ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ವಿಷ ಸೇವಿಸಿ ಆತ್ಮಹತ್ಯೆ

**ನಾಪೋಕ್ಲು:** ಇಲ್ಲಿಗೆ ಸಮೀಪದ ನೆಲಜಿ ಮತ್ತು ಬಲಮಾವಟಿ ಗ್ರಾಮದಲ್ಲಿ ಒಂದೇ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜರುಗಿದೆ.

ಬಲಮಾವಟಿ ಗ್ರಾಮ ಪಂಚಾಯಿತಿಗೆ ಒಳಪಟ್ಟ ನೆಲಜಿ ಗ್ರಾಮದ ನಿವಾಸಿ ಚಟ್ಟಿಯಾರಂಡ ತನು ತಮ್ಮಯ್ಯ ಎಂಬುವರ ಪುತ್ರಿ ಹರ್ಷಿಣಿ (17) ಹಾಗೂ ಬಲಮಾವಟ್ಟಿ ಗ್ರಾಮದ ನಿವಾಸಿ ಮಲೆಯಂಡ ಪ್ರಶಾಂತ್ ಎಂಬುವರ ಪುತ್ರ ಪ್ರತೀಕ್ ಪೊನ್ನಣ್ಣ (17) ಆತ್ಮಹತ್ಯೆಗೆ ಶರಣಾದವರು.

ಇವರು ಮೂರ್ನಾಡು ಕಾಲೇಜಿನಲ್ಲಿ ಪಿಯುಸಿ ವ್ಯಾಸಂಗ ಮಾಡುತ್ತಿದ್ದರು. ಕಳೆದ ಮಂಗಳವಾರ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಚಿಂತಾಜನಕ ಸ್ಥಿತಿಯಲ್ಲಿದ್ದ ಇವರನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಇಬ್ಬರು ಮೃತರಾಗಿದ್ದು, ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆತ್ಮಹತ್ಯೆಗೆ ನಿಖರವಾದ ಕಾರಣಗಳು ತಿಳಿದು ಬಂದಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ಚಾ.ನಗರದಲ್ಲಿ ಗಾಂಧಿ ಜಯಂತಿಯ ಅರ್ಥಪೂರ್ಣ ಆಚರಣೆ


ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಪುಷ್ಪಾರ್ಚನೆ ಮೂಲಕ ಗಾಂಧಿ ಜಯಂತಿ ಉದ್ಘಾಟಿಸಿದರು.

ಚಾಮರಾಜನಗರ, ಅ.2– ಜಿಲ್ಲಾಡಳಿತ, ಜಿಪಂ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಗುರುವಾರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 156ನೇ ಜಯಂತಿ ಕಾರ್ಯಕ್ರಮವನ್ನು ಅರ್ಥ ಪೂರ್ಣವಾಗಿ ಆಚರಿಸಲಾಯಿತು.

ನಗರದ ಹೊರವಲಯದ ಯಡಬೆಟ್ಟದ ಬಳಿಯ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆ ಪಕ್ಕದಲ್ಲಿರುವ ಗಾಂಧೀ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಾಂಧಿಜೀಯವರ ಪುತ್ಥಳಿಗೆ ಮಾಲಾರ್ಪಣೆ, ಗಾಂಧಿಜೀಯವರಿಗೆ ಪ್ರಿಯವಾದ ಭಜನೆ, ಮಕ್ಕಳಿಂದ ಗಾಂಧೀ ವೇಷಭೂಷಣ ಪ್ರದರ್ಶನ, ಬಾಪೂಜೀ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಸೇರಿದಂತೆ ಇತರೆ ಕಾರ್ಯಕ್ರಮಗಳ ಮೂಲಕ ಗಾಂಧಿ ಜಯಂತಿಯನ್ನು ಸ್ಮರಣೀಯಗೊಳಿಸಲಾಯಿತು.

ಜಯಂತಿ ಅಂಗವಾಗಿ ಮೊದಲಿಗೆ ರಾಷ್ಟ್ರಪಿತ ಮಹಾತ್ಮ ಗಾಂಧೀಜೀ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ 121ನೇ ಜನ್ಮದಿನ ಪ್ರಯುಕ್ತ ಗಣ್ಯರ ಭಾವ ಚಿತ್ರಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಇತರೆ ಗಣ್ಯರು ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಬಳಿಕ ಗಣ್ಯರು ಕಾರ್ಯಕ್ರಮದ ಜ್ಯೋತಿ ಬೆಳಗಿಸಿದರು. ಗಾಂಧಿಜೀಯವರಿಗೆ ಪ್ರಿಯವಾದ ಭಜನಾ ಕಾರ್ಯಕ್ರಮವನ್ನು ಕಲಾವಿದರಾದ ಮಾಂಬಳ್ಳಿ ಅರುಣ್ ಕುಮಾರ್ ಮತ್ತು ತಂಡದವರು ನಡೆಸಿಕೊಟ್ಟರು. ಗಾಂಧಿ ಜಯಂತಿ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಜಿಲ್ಲೆಯ ಎಲ್ಲಾ ಪ್ರೌಢಶಾಲಾ, ಪದವಿ ಪೂರ್ವ ಮತ್ತು ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜು ವಿದ್ಯಾರ್ಥಿ ಗಳಿಗೆ ಏರ್ಪಡಿಸಲಾಗಿದ್ದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಿಗೆ ಪ್ರಮಾಣಪತ್ರ ಹಾಗೂ ನಗದು ಬಹುಮಾನ ವಿತರಿಸಲಾಯಿತು.

ಇದೇ ವೇಳೆ ಕಾರ್ಯಕ್ರಮವನ್ನು ಉದ್ದೇಶಿಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ತಹಸೀಲ್ದಾರ್ ಗಿರಿಜಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಎ.ರಮೇಶ್, ವಾರ್ತಾ ಸಹಾಯಕರಾದ ಸುರೇಶ್‌ಕುಮಾರ್, ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಮನೆ ಬೀಗ ಒಡೆದು ಲಕ್ಷಾಂತರ ಮೌಲ್ಯದ ಚಿನ್ನಾಭರಣ ಕಳವು



ತಿ.ನರಸೀಪುರ, ಅ.2– ಮನೆ ಬೀಗ ಒಡೆದು ಒಳ ನುಗ್ಗಿರುವ ಕಳ್ಳರು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಪಟ್ಟಣದ ನಂಜನಗೂಡು ರಸ್ತೆಯ ಮನೆಯೊಂದರಲ್ಲಿ ನಡೆದಿದೆ.

ಪಟ್ಟಣದ ಮೈಸೂರು ರಸ್ತೆಯಲ್ಲಿ ಸಿಮೆಂಟ್, ಹಾರ್ಡ್‌ವೇರ್ ಅಂಗಡಿ ನಡೆಸುತ್ತಿರುವ ದ್ವಾರಕ ಎಂಬುವರ ಮನೆಯಲ್ಲೇ ಕಳ್ಳತನ ನಡೆದಿದ್ದು, ದುಷ್ಕರ್ಮಿಗಳು 555 ಗ್ರಾಂ ತೂಕದ ಚಿನ್ನಾಭರಣಗಳನ್ನು ದೋಚಿ ಪರಾರಿಯಾಗಿದ್ದಾರೆ.

ಜಿ.ವಿ.ದ್ವಾರಕ ಅವರು ಕುಟುಂಬ ಸಮೇತರಾಗಿ ರಾಜಸ್ಥಾನ ಪ್ರವಾಸ ಕೈಗೊಂಡಿದ್ದರು. ಈ ವೇಳೆ ಮನೆಗೆ ನುಗ್ಗಿರುವ ಕಳ್ಳರು ಮನೆಯಲ್ಲಿದ್ದ ಗಾಡ್ರೇಜ್ ಬೀರುವಿನಲ್ಲಿದ್ದ ಚಿನ್ನಾಭರಣ ಕಳ್ಳತನ ಮಾಡಿದ್ದಾರೆ. ಮನೆಯಲ್ಲಿ ಕಳ್ಳತನ ನಡೆದಿರುವ ಬಗ್ಗೆ ಪೊಲೀಸರು ಫೋನ್ ಮೂಲಕ ದ್ವಾರಕ ಅವರಿಗೆ ವಿಷಯ ಮುಟ್ಟಿಸಿದ್ದು, ಮನೆಯಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾವನ್ನು ತಮ್ಮ ಮಗನ ಫೋನ್‌ನಲ್ಲಿ ಪರಿಶೀಲಿಸಿದಾಗ ಇಬ್ಬರು ಕಳ್ಳರು ಮನೆ ಮುಂದೆ ಬಂದಿರುವುದು ಖಚಿತವಾದ ಹಿನ್ನಲೆಯಲ್ಲಿ ಅರ್ಧಕ್ಕೆ ಪ್ರವಾಸ ಮೊಟಕುಗೊಳಿಸಿದ ದ್ವಾರಕ ಅವರು ಪಟ್ಟಣಕ್ಕೆ ಆಗಮಿಸಿ ಪೊಲೀಸರ ಸಮಕ್ಷಮದಲ್ಲಿ ಮನೆ ಪ್ರವೇಶಿಸಿದಾಗ ಕಳ್ಳತನ ಬೆಳಕಿಗೆ ಬಂದಿದೆ.

ಈ ಸಂಬಂಧ ಮನೆ ಮಾಲೀಕ ಜಿ.ವಿ.ದ್ವಾರಕ ಪಟ್ಟಣ ಪೊಲೀಸರಿಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ದೊಡ್ಡಮ್ಮತಾಯಿ ದೇವಾಲಯದಲ್ಲಿ ಕಳ್ಳತನ



ಚುಂಚನಕಟ್ಟೆ, ಅ.2– ದೇವಾಲಯದ ಬೀಗ ಒಡೆದು ಒಳ ನುಗ್ಗಿರುವ ಕಳ್ಳರು ದೇವರ ಮೂರ್ತಿ ಮೇಲಿದ್ದ ಚಿನ್ನಾಭರಣ ಕಳವು ಮಾಡಿರುವ ಘಟನೆ ಇಲ್ಲಿಗೆ ಸಮೀಪದ ದಿಡ್ಡಹಳ್ಳಿ ಗ್ರಾಮದ ಗ್ರಾಮದೇವತೆ ದೊಡ್ಡಮ್ಮತಾಯಿ ದೇವಾಲಯದಲ್ಲಿ ನಡೆದಿದೆ.

ದೇವರ ಮೇಲಿದ್ದ 2 ಮಾಂಗಲ್ಯ, ಕಿವಿ ಓಲೆ ಸೇರಿದಂತೆ ಲಕ್ಷ ರೂ. ಮೌಲ್ಯದ ಆಭರಣ ಮತ್ತು ನಗದನ್ನು ದೋಚಿ ಪರಾರಿಯಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಚುಂಚನಕಟ್ಟೆ ಉಪಠಾಣೆ ಸಿಬ್ಬಂದಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

**ವಿಜಯದಶಮಿ ಅಂಗವಾಗಿ ಪೊಲೀಸ್ ಪೂಜೆ ಹೆಸರಲ್ಲಿ**

# ಅದ್ದೂರಿ ಕೋಟೆ ದಸರಾ ಮಹೋತ್ಸವ

**ಎಸ್‌ಐ ಸುರೇಶ್ ನಾಯಕ್ ನೇತೃತ್ವದಲ್ಲಿ ಶ್ರೀವರದರಾಜಸ್ವಾಮಿಗೆ ಪೊಲೀಸರಿಂದ ಗೌರವ**


ಕೋಟೆ ದಸರಾ ಮಹೋತ್ಸವ ಅದ್ದೂರಿಯಾಗಿ ನಡೆಯಿತು.

ಹೆಚ್.ಡಿ.ಕೋಟೆ, ಅ.2– ವಿಜಯದಶಮಿ ಅಂಗವಾಗಿ ಪೊಲೀಸ್ ಪೂಜೆ ಹೆಸರಲ್ಲಿ ಗುರುವಾರ ನಡೆದ ಐತಿಹಾಸಿಕ ಕೋಟೆ ದಸರಾ ಮಹೋತ್ಸವ ಪಟ್ಟಣದ ಪೊಲೀಸರು ಗೌರವ ಸಲ್ಲಿಸುವ ಮೂಲಕ ಅದ್ದೂರಿಯಾಗಿ ನೆರವೇರಿತು.

ಪಟ್ಟಣದ ಪೊಲೀಸ್ ಠಾಣೆ ಎಸ್‌ಐ ಸುರೇಶ್ ನಾಯಕ್ ನೇತೃತ್ವದಲ್ಲಿ ಸಿಬ್ಬಂದಿ ದೇವತೆಗಳ ರಾಜ ಶ್ರೀವರದರಾಜಸ್ವಾಮಿಗೆ ಗೌರವ ರಕ್ಷೆ ಸಲ್ಲಿಸಿದ ನಂತರ ಇನ್ಸ್‌ಪೆಕ್ಟರ್ ಗಂಗಾಧರ್, ದೇವಾಲಯದ ಧರ್ಮದರ್ಶಿ ಬಿ.ಎಸ್.ರಂಗಯ್ಯಂಗಾರ್ ಅವರ ಪುತ್ರ ಪ್ರಸಾದ್ ಅಯ್ಯಂಗಾರ್, ಪ್ರಧಾನ ಅರ್ಚಕರಾದ ಶ್ರೀಧರ್ ಮೂರ್ತಿ, ರಾಮಪ್ರಿಯ, ಸುಧಾಕರ್ ಅಯ್ಯಂಗಾರ್, ಶ್ರೀನಿಧಿ, ಪೂರ್ಣೇಶ್, ಚಾಮುಂಡೇಶ್ವರಿ ದೇವಾಲಯದ ಅರ್ಚಕ ಸತೀಶ್ ಸೇರಿದಂತೆ ಪಟ್ಟಣದ ಎಲ್ಲಾ ಸಮಾಜದ ಪ್ರಮುಖರು ಶ್ರೀವರದರಾಜಸ್ವಾಮಿ, ಅಶ್ವ ವಾಹನಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ವಿಜಯ ದಶಮಿ ಮಹೋತ್ಸವದ ಬನ್ನಿ ಪೂಜೆಗೆ ಚಾಲನೆ ನೀಡಿದರು.

ಈ ವೇಳೆ ಶ್ರೀವರದರಾಜಸ್ವಾಮಿ ಪಂಚಲೋಹದ ಉತ್ಸವ ಮೂರ್ತಿಯನ್ನು ಅಶ್ವ ವಾಹನದಲ್ಲಿ ಹಾಗೂ ಪೆರುಂದೇವಿ ಅಮ್ಮನವರ ಸಹಿತ ಶ್ರೀದೇವಿ, ಭೂದೇವಿಯರ ಪಂಚಲೋಹದ ವಿಗ್ರಹಗಳನ್ನು, ಶೇಷ ವಾಹನದಲ್ಲಿ ಹಾಗೂ ಶ್ರೀಚಾಮುಂಡೇಶ್ವರಿ ಅಮ್ಮನವರ ವಿಗ್ರಹವನ್ನು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ, ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಕೊಂಡೊಯ್ದು ಶ್ರೀಚಾಮುಂಡೇಶ್ವರಿ ದೇವಸ್ಥಾನದ ಹಿಂಭಾಗದ ಬನ್ನಿ ಮರಕ್ಕೆ ಪೊಲೀಸ್ ಗೌರವ ರಕ್ಷೆ ನೀಡಲು ತಂದಿದ್ದ ಬಂದೂಕುಗಳನ್ನು ಇಟ್ಟು ಪೂಜೆ ಸಲ್ಲಿಸಲಾಯಿತು.

ಸಿಪಿಐ ಗಂಗಾಧರ್ ಮಾತನಾಡಿ, ದಸರಾ ವೇಳೆ ಮೈಸೂರಲ್ಲಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ಬಳಿಕ ಕೋಟೆಯಲ್ಲಿ ವರದರಾಜಸ್ವಾಮಿಗೆ ಪೊಲೀಸ್ ವಂದನೆ ಸಲ್ಲಿಸಲಾಗುತ್ತಿದೆ. ನಮ್ಮ ತಾಲೂಕಿನಲ್ಲೂ ದಸರಾ ನಡೆಯುತ್ತಿರುವುದು ಸಂತಸದ ವಿಚಾರ. ನಮ್ಮ ಸಿಬ್ಬಂದಿ ಈ ಪೂಜಾ ಕಾರ್ಯದಲ್ಲಿ ಉತ್ಸುಕತೆಯಿಂದ ಭಾಗವಹಿಸಿ ಕೋಟೆ ದಸರಾ ಯಶಸ್ವಿಗೊಳಿಸಿದ್ದಾರೆ ಎಂದರು.

ವರದರಾಜಸ್ವಾಮಿ ದೇವಾಲಯದ ಪ್ರಧಾನ ಅರ್ಚಕ ತಿರುಮಲಾಚಾರ್ ಮಾತನಾಡಿದರು. ಮೆರವಣಿಗೆಯಲ್ಲಿ ಪಟ್ಟಣದ ಮಹಿಳೆಯರು, ಮಕ್ಕಳು ಹಾಗೂ ಅಕ್ಕಪಕ್ಕದ ಗ್ರಾಮಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಐತಿಹಾಸಿಕ ಕೋಟೆ ದಸರಾಗೆ ಕಳೆ ತಂದರು. ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು ಪಾಲ್ಗೊಂಡಿದ್ದವು. ಈ ವೇಳೆ ಪಟ್ಟಣದ ಜನರು ದಾರಿಯುದ್ದಕ್ಕೂ ದೇವರಿಗೆ ಪೂಜೆ ಸಲ್ಲಿಸಿದರು. ಕೆಲ ಭಕ್ತರು ಈಡುಗಾಯಿ ಹೊಡೆದು ಭಕ್ತಿ ಪರಾಕಾಷ್ಠೆ ಮೆರೆದರೆ, ಯುವಕರು ಪಟಾಕಿ ಸಿಡಿಸಿ ಕುಣಿದು ಕುಪ್ಪಳಿಸಿದರು.

ಪುರಸಭಾಧ್ಯಕ್ಷೆ ಶಿವಮ್ಮ, ಮುಖಂಡರಾದ ಎಂ.ಸಿ.ದೊಡ್ಡನಾಯಕ, ನಾಗರಾಜು, ಪ್ರಸಾದ್, ಮಹೇಶ್, ಶ್ರೀಕಾಂತ್, ಜಯಂತ್, ದೇವರಾಜು, ಸ್ವಾಮಿ ನಾಯಕ, ದೇವನಾಯಕ, ವಾಲ್ಮೀಕಿ ಸಂಘದ ಅಧ್ಯಕ್ಷ ಗಣೇಶ್ ನಾಯಕ, ಚಿಕ್ಕ ನಾಯಕ, ಕೆಂಡಗಣ್ಣಸ್ವಾಮಿ, ರಾಜೇಂದ್ರ, ಪೂರ್ಣೇಶ್, ನಟರಾಜು, ನಿಜಗುಣ, ಪಳನಿ ಸ್ವಾಮಿ, ದೇವರಾಜು, ಸೋಮ ಶೇಖರ್, ವೆಂಕಟೇಶ್, ಎಸ್‌ಐ ಸುರೇಶ್ ನಾಯಕ, ಚಿಕ್ಕನಾಯಕ, ಎಎಸ್‌ಐ ಶಿವಕುಮಾರ್, ಲೀಲಾವತಿ, ಸಿಬ್ಬಂದಿ ವರ್ಗ, ಎಲ್ಲಾ ಸಮಾಜದ ಮುಖಂಡರು ಇದ್ದರು.

## ನಿವೃತ್ತ ಯೋಧನಿಗೆ ಸನ್ಮಾನ


ಕೆ.ಆರ್.ನಗರ ತಾಲೂಕಿನ ಹಂಪಾಪುರ ಗ್ರಾಪಂನಲ್ಲಿ ಗಾಂಧಿಜಯಂತಿ ಅಂಗವಾಗಿ ನಿವೃತ್ತ ಯೋಧ ರಘು ಅವರನ್ನು ಸನ್ಮಾನಿಸಲಾಯಿತು. ಅಧ್ಯಕ್ಷೆ ವಿದ್ಯಾ, ಉಪಾಧ್ಯಕ್ಷ ರೇವಣ್ಣ, ಸದಸ್ಯರಾದ ನಾಗರಾಜ್, ಸೌಮ್ಯ, ಪಿಡಿಓ ಅಶ್ವಿನಿ, ಕಾರ್ಯದರ್ಶಿ ಭಾರತಿ, ಲೆಕ್ಕ ಸಹಾಯಕಿ ಗಾಯತ್ರಿ, ಸಿಬ್ಬಂದಿಗಳಾದ ಮುಕುಂದ, ರತ್ನಮ್ಮ, ಶರತ್ ಕುಮಾರ್ ಇತರರಿದ್ದರು.

## ಮೈಸೂರಿನ ಹಿರಿಯ ವಕೀಲ ಅಶ್ವಿನ್ ಕುಮಾರ್ ಜೋಷಿ ನಿಧನ



ಮೈಸೂರು, ಅ.2– ಮೈಸೂರಿನ ಹಿರಿಯ ವಕೀಲ ಅಶ್ವಿನ್ ಕುಮಾರ್ ಜೋಷಿ (ಎ.ಕೆ.ಜೋಷಿ) ಇಂದು ಮೈಸೂರಿನ ಟಿ.ಕೆ.ಬಡಾವಣೆಯ ತಮ್ಮ ನಿವಾಸದಲ್ಲಿ ನಿಧನರಾದರು. ಇವರಿಗೆ 77 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಡಾ.ಲಕ್ಷ್ಮಿ ಜೋಷಿ, ಪುತ್ರ–ವಕೀಲ ಕಲ್ಯಾಣ್ ಕುಮಾರ್ ಜೋಷಿ, ಪುತ್ರಿ ತ್ರಿವೇಣಿ ಜೋಷಿ ಸೇರಿದಂತೆ ಅಪರ ಬಂಧು ಮಿತ್ರರನ್ನು ಅಗಲಿದ್ದಾರೆ. ಮುನ್ಸಿಫ್ ಕೋರ್ಟ್ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದ ಇವರು ಆ ಹುದ್ದೆಗೆ ರಾಜೀನಾಮೆ ನೀಡಿ ಮೈಸೂರಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ಕಾಡುಗಳ್ಳ ವೀರಪ್ಪನ್ ಪ್ರಕರಣದಲ್ಲಿ ಸರ್ಕಾರಿ ವಕೀಲರಾಗಿ ಕಾರ್ಯ ನಿರ್ವಹಿಸಿದ್ದರು. ಇವರ ಬಹುತೇಕ ಶಿಷ್ಯಂದಿರು ಈಗ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಪುಟ್ಟೇಗೌಡ



ಭಾರತೀನಗರ, ಅ.2– ಇಲ್ಲಿಗೆ ಸಮೀಪದ ಆಲಭುಜನಹಳ್ಳಿ ಗ್ರಾಮದ ಹಿರಿಯ ಮುಖಂಡರು ಹಾಗೂ ಆಲಭುಜನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಎ.ಬಿ ಪುಟ್ಟೇಗೌಡ(95) ನಿಧನರಾಗಿದ್ದಾರೆ. ಮೃತರು ಎ.ಪಿ.ರಾಜಣ್ಣ, ಪ್ರಸನ್ನ ಮತ್ತು ನಾಲ್ವರು ಪುತ್ರಿಯರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ಆಲಭುಜನಹಳ್ಳಿಯಲ್ಲಿ ನೆರವೇರಿತು.

ಜಂಬೂ ಸವಾರಿ ಮೆರವಣಿಗೆಯ ವಿಶೇಷತೆಗಳು...

# ಮೆರವಣಿಗೆಯಲ್ಲಿ ಶಿಸ್ತು; 6 ನೇ ಬಾರಿ ಅಂಬಾರಿ ಹೊತ್ತು ಸೈ ಎನಿಸಿಕೊಂಡ ಅಭಿಮನ್ಯು; ಹೆಜ್ಜೆ ಹೆಜ್ಜೆಗೂ ಪೊಲೀಸ್ ಕಣ್ಗಾವಲು



ಮೈಸೂರು, ಅ.2(ಬಿಎಲ್ ಯು)– ಕಳೆದ ವರ್ಷಗಳಿಗೆ ಹೋಲಿಸಿದರೆ ಈ ಬಾರಿಯ ಜಂಬೂ ಸವಾರಿ ಮೆರವಣಿಗೆ ಅತ್ಯಂತ ಅಚ್ಚುಕಟ್ಟು ಹಾಗೂ ಶಿಸ್ತು ಬದ್ಧವಾಗಿ ನೆರವೇರಿತು.

ಈ ಮೊದಲು ಜಂಬೂ ಸವಾರಿ ಮೆರವಣಿಗೆ ಸಾಗುವಾಗ ಅಧಿಕಾರೇತರ ಉಪ ಸಮಿತಿಯ ಸದಸ್ಯರು ಸ್ತಬ್ಧಚಿತ್ರ ಹಾಗೂ ಜಾನಪದ ಕಲಾ ತಂಡಗಳೊಂದಿಗೆ ಸಾಗುತ್ತಿದ್ದರು. ಅರಮನೆಯಲ್ಲೆ ನೂರಾರು ಸಂಖ್ಯೆಯ ಸದಸ್ಯರು ಮೆರವಣಿಗೆಯೊಂದಿಗೆ ಸಾಗುತ್ತಿದ್ದರು. ಇದರಿಂದ ಮೆರವಣಿಗೆಯಲ್ಲಿ ಗದ್ದಲ, ಗೊಂದಲ ಏರ್ಪಡುತ್ತಿತ್ತು.

ಅಲ್ಲದೆ ನೂರಾರು ಸಂಖ್ಯೆಯಲ್ಲಿ ಫೋಟೋಗ್ರಾಫರ್‌ಗಳೂ ಮೆರವಣಿಗೆಗೆ ಅಡ್ಡಲಾಗಿ ನಿಂತು ಫೋಟೋ ತೆಗೆಯುತ್ತಿದ್ದರು. ಇದರಿಂದ ಮೆರವಣಿಗೆ ಸರಿಯಾಗಿ ಕಾಣಿಸುತ್ತಿರಲಿಲ್ಲ.

ಈ ಬಾರಿ 2300 ಕ್ಕೂ ಹೆಚ್ಚು ಸದಸ್ಯರನ್ನು ಉಪ ಸಮಿತಿಗೆ ನೇಮಕ ಮಾಡಲಾಗಿದೆ. ಆದರೆ ಮೆರವಣಿಗೆ ಉಪ ಸಮಿತಿ, ಸ್ತಬ್ಧಚಿತ್ರ ಉಪ ಸಮಿತಿ ಸೇರಿದಂತೆ ಸಮಿತಿ ಸದಸ್ಯರು ಮೆರವಣಿಗೆಯಲ್ಲಿ ಸಾಗಲು ನಿರ್ಬಂಧ ಹೇರಲಾಗಿತ್ತು. ಅಷ್ಟರ ಮಟ್ಟಿಗೆ ಬಿಗಿ ಪೊಲೀಸ್ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ಯಾವುದೇ ಅಡ್ಡಿ ಇಲ್ಲದೆ ಜನರು ಮೆರವಣಿಗೆಯನ್ನು ಕಣ್ತುಂಬಿಕೊಂಡರು.

**6 ನೇ ಬಾರಿ ಚಿನ್ನದ ಅಂಬಾರಿ ಹೊತ್ತು ಸೈ ಎನಿಸಿಕೊಂಡ ಅಭಿಮನ್ಯು:** ಜಪಡೆಯ ಕ್ಯಾಪ್ಟನ್ ಅಭಿಮನ್ಯು 6 ನೇ ಬಾರಿ ಚಿನ್ನದ ಅಂಬಾರಿ ಹೊತ್ತು ಸೈ ಎನಿಸಿಕೊಂಡಿದ್ದಾನೆ. ಅಂಬಾವಿಲಾಸ ಅರಮನೆಯ ಸ್ಟ್ರಾಂಗ್ ರೂಮ್‌ನ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪನೆಗೊಂಡಿದ್ದ ನಾಡದೇವತೆ, ತಾಯಿ ಚಾಮುಂಡೇಶ್ವರಿ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಕ್ರೇನ್ ಮೂಲಕ ಅಂಬಾರಿಯನ್ನು ಹೊರಗೆ ತರಲಾಯಿತು.

ರಾಜವಂಶಸ್ಥರ ಖಾಸಗಿ ನಿವಾಸ ಪ್ರವೇಶ ದ್ವಾರದ ಬಳಿ ಚಿನ್ನದ ಅಂಬಾರಿ ತರಲಾಯಿತು. ಅಲ್ಲಿ ಅಭಿಮನ್ಯುವನ್ನು ಅಂಬಾರಿ ಸಮ ತಟ್ಟಾಗಿರುವಂತೆ ಗಾದಿ ಕಟ್ಟಲಾಯಿತು. ತರುವಾಯ ಅದರ ಮೇಲೆ 750 ಕೆ.ಜಿ.ತೂಕದ ಚಿನ್ನದ ಅಂಬಾರಿ ಕಟ್ಟಿ ಬಿಗಿಗೊಳಿಸಲಾಯಿತು.

ಪುಷ್ಪಾರ್ಚನೆ ನಂತರ ಅಭಿಮನ್ಯು ಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಾ ಬನ್ನಿಮಂಟಪದತ್ತ ಸಾಗಿದನು. ಚಾಮರಾಜ ಒಡೆಯರ್ ವೃತ್ತ ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಬಂಬೂ ಬಜಾರ್, ಹೈವೆ ವೃತ್ತದ ಮೂಲಕ 5.5 ಕಿಲೋ ಮೀಟರ್ ಅಂತರವಿರುವ ಬನ್ನಿಮಂಟಪ ತಲುಪಿದನು.

ಅಭಿಮನ್ಯು ಮಾತ್ರವಲ್ಲದೆ ಎಲ್ಲಾ ಆನೆಗಳಿಗೆ ಕಳೆದ ಎರಡೂವರೆ ತಿಂಗಳಿಂದ ತಾಲೀಮು ನೀಡಿದ್ದರ ಫಲವಾಗಿ ಗಜಪಡೆ ಸಾಂಗವಾಗಿ ಸಾಗಿದವು.

## ಪುಷ್ಪಾರ್ಚನೆಯ ವೇದಿಕೆಯಲ್ಲೂ ಶಿಸ್ತು

ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪನೆಗೊಂಡಿದ್ದ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡುವ ವೇಳೆ ಗೊಂದಲ ಆಗದಂತೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿತ್ತು.

ವೇದಿಕೆಯ ಮುಂಭಾಗ ಸಿದ್ದರಾಮಯ್ಯ ಸೇರಿದಂತೆ ಇತರರು ಶಿಸ್ತು ಬದ್ಧರಾಗಿ ನಿಲ್ಲಲು ಜಾಗ ಸೂಚಿಸಲಾಗಿತ್ತು. ಜೊತೆಗೆ ಹೂವುಗಳಿದ್ದ ಪ್ಲಾಸ್ಟಿಕ್ ಬಾಸ್ಕೆಟ್ ಇಟ್ಟು ಅದರಲ್ಲಿ ಗಣ್ಯರ ಹೆಸರು ಬರೆಯಲಾಗಿತ್ತು. ಆಯಾ ಬಾಸ್ಕೆಟ್ ಮುಂದೆ ನಿಂತು ಗಣ್ಯರು ಪುಷ್ಪಾರ್ಚನೆ ಮಾಡಿದರು.

## ಅರಮನೆ ಸೇರಿ ರಾಜಬೀದಿಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್



ದಸರಾ ಜಂಬೂ ಸವಾರಿ ಮೆರವಣಿಗೆ ವೀಕ್ಷಣೆಗೆ ಲಕ್ಷಾಂತರ ಜನರು ಆಗಮಿಸಿದ್ದ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗೆ ಅವಕಾಶವಾಗದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಅರಮನೆಯ ಸುತ್ತ ಹೆಜ್ಜೆ ಹೆಜ್ಜೆಗೂ ಪೊಲೀಸರನ್ನು ನಿಯೋಜಿಸಲಾಗಿತ್ತು. ಮೆರವಣಿಗೆ ವೀಕ್ಷಣೆಗೆ ಅರಮನೆಗೆ ಹೋಗಲು ಪಾಸ್ ಮತ್ತು ಟಿಕೆಟ್‌ಗಳಲ್ಲಿ ಪ್ರವೇಶದ ದ್ವಾರದ ಸಂಖ್ಯೆ ನಮೂದು ಮಾಡಲಾಗಿತ್ತು.

ಈ ಬಗ್ಗೆ ಮಾಹಿತಿ ನೀಡಲು ಪ್ರವೇಶ ದ್ವಾರದ ಬಳಿ ಮ್ಯಾಪ್‌ಗಳನ್ನು ಅಳವಡಿಸಲಾಗಿತ್ತು. ತಮ್ಮ ಪಾಸ್ ಮತ್ತು ಟಿಕೆಟ್‌ನಲ್ಲಿ ನಮೂದಿಸಿರುವ ಪ್ರವೇಶ ದ್ವಾರದಲ್ಲಿ ಒಳ ಪ್ರವೇಶಿಸಬೇಕಿತ್ತು. ಪಾಸ್ ಮತ್ತು ಟಿಕೆಟ್‌ಗಳ ಕ್ಯೂ ಆರ್ ಕೋಡ್ ಪರಿಶೀಲನೆ ಮಾಡಿ ನಂತರ ಒಳಗೆ ಬಿಡಲಾಗುತ್ತಿತ್ತು.

ಪ್ರತಿಯೊಂದು ಪ್ರವೇಶ ದ್ವಾರದಲ್ಲಿ ಮೆಟಲ್ ಡಿಟೆಕ್ಟರ್‌ನಿಂದ ಪ್ರವೇಶ ನೀಡಲಾಗುತ್ತಿತ್ತು ಅಲ್ಲದೆ ಜನರು ತಂದಿದ್ದ ಬ್ಯಾಗ್‌ಗಳನ್ನು ಕೂಡ ಪರಿಶೀಲಿಸುತ್ತಿದ್ದರು.

ಅರಮನೆ ಸುತ್ತ ಅಳವಡಿಸಿರುವ ಮೈಕ್‌ನಿಂದ ಜನರು ಯಾವ ಪ್ರವೇಶ ದ್ವಾರಕ್ಕೆ ಹೋಗಬೇಕು, ವಾಹನಗಳನ್ನು ಎಲ್ಲಿ ಪಾರ್ಕಿಂಗ್ ಮಾಡಬೇಕು ಎಂಬುದು ಸೇರಿದಂತೆ ಹಲವು ವಿಚಾರಗಳನ್ನು ತಿಳಿಸಲಾಗುತ್ತಿತ್ತು.

ಜಂಬೂ ಸವಾರಿ ಮೆರವಣಿಗೆ ಸಾಗಿದ 5.5 ಕಿಲೋ ಮೀಟರ್‌ವರೆಗೆ ಪೊಲೀಸರನ್ನು ಭದ್ರತೆಗೆ ನಿಯೋಜನೆ ಮಾಡಲಾಗಿತ್ತು. ಫುಟ್ ಪಾತ್ ಬಿಟ್ಟು ರಸ್ತೆಗೆ ಜನರು ಬರದಂತೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದರು. ಮುಂಜಾಗ್ರತಾ ಕ್ರಮವಾಗಿ ಬಾಂಬ್ ನಿಷ್ಕ್ರಿಯ ದಳದವರು ಮೆರವಣಿಗೆ ಸಾಗಿದ ರಾಜಬೀದಿಯಲ್ಲಿ ಇಂಚಿಂಚು ಜಾಗವನ್ನು ಪರಿಶೀಲನೆ ಮಾಡುತ್ತಿದ್ದರು.

## ಶಮಿ ಪೂಜೆ ನೆರವೇರಿಸಿದ ಯದುವೀರ್



ಮೈಸೂರು, ಅ.2(ಎಸ್‌ಪಿಎನ್)– ಮೈಸೂರು ಅರಮನೆ ಆವರಣದಲ್ಲಿರುವ ಭುವನೇಶ್ವರಿ ದೇಗುಲದಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗುರುವಾರ ಶಮಿ ಪೂಜೆ ನೆರವೇರಿಸಿದರು.

ವಜ್ರಮುಷ್ಠಿ ಕಾಳಗ ಮುಕ್ತಾಯವಾಗುತ್ತಿದ್ದಂತೆ ಭುವನೇಶ್ವರಿ ದೇವಾಲಯದವರೆಗೆ ವಿಜಯಯಾತ್ರೆ ನಡೆಯಿತು. ಬಳಿಕ ಯದುವೀರ್ ಒಡೆಯರ್, ಬನ್ನಿ ಮರಕ್ಕೆ ಪೂಜೆ ಸಲ್ಲಿಸಿದರು. ಪೂಜೆ ಮುಕ್ತಾಯವಾಗುತ್ತಿದ್ದಂತೆ ಯದುವೀರ್ ಅರಮನೆಗೆ ವಾಪಸ್ ಆದರು. ಇದರೊಂದಿಗೆ ಅರಮನೆ ದಸರಾ ಮುಕ್ತಾಯಗೊಂಡಿತು. ಪೊಲೀಸ್ ಬ್ಯಾಂಡ್ ಜೊತೆಗೆ ಪಟ್ಟದ ಆನೆ, ಕುದುರೆ, ಹಸು ವಿಜಯಯಾತ್ರೆಯಲ್ಲಿ ಭಾಗಿಯಾಗಿದ್ದವು. ಖಾಸಾ ಆಯುಧಗಳನ್ನು ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆ ಮಾಡಲಾಯಿತು. ಶ್ರೀಕಂಠದತ್ತ ಒಡೆಯರ್ ಬಳಸುತ್ತಿದ್ದ ಕಾರಿನಲ್ಲಿ ಯದುವೀರ್ ವಿಜಯಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

## ತಮಟೆ ಸದ್ದಿಗೆ ಕುಣಿದು ಕುಪ್ಪಳಿಸಿದ ಮಕ್ಕಳು, ಯುವತಿಯರು



ಮೈಸೂರು, ಅ.2(ಪಿಎಂ)– ಕಲಾತಂಡಗಳ ತಮಟೆ ಸದ್ದಿಗೆ ಮಕ್ಕಳು, ಯುವತಿಯರು ಸೇರಿದಂತೆ ವಯಸ್ಸನ್ನು ಲೆಕ್ಕಿಸಿದೆ ಹಲವರು ಕುಣಿದು ಕುಪ್ಪಳಿಸಿದರು.

ಜಂಬೂ ಸವಾರಿ ಮಾರ್ಗದಲ್ಲಿ ಸಾಗುತ್ತಿದ್ದ ಕಲಾತಂಡಗಳಲ್ಲಿ ಕಲಾವಿದರ ತಮಟೆ ಏಟಿಗೆ ಹೆಚ್ಚಾಗಿ ಮಕ್ಕಳು ಹಾಗೂ ಯುವತಿಯರು ಹೆಜ್ಜೆ ಹಾಕಿ ಸಂಭ್ರಮಿಸಿದ ದೃಶ್ಯ ಕಂಡು ಬಂತು. ತಮಟೆ ಕಲಾ ವಿದರನ್ನು ಕೈಬಿಸಿ ಕರೆಯುತ್ತಿದ್ದ ಮಕ್ಕಳು ಹಾಗೂ ಯುವತಿಯರು, ಕುಣಿದು ಸಂಭ್ರ ಮಿಸಿದರು. ಈ ಉತ್ತೇಜನಕ್ಕೆ ಮಾರು ಹೋದ ಕಲಾವಿದರು ಮತ್ತಷ್ಟು ಉತ್ಸಾಹ ದಲ್ಲಿ ತಮಟೆ ಬಾರಿಸುತ್ತಿದ್ದರು. ಬಹುತೇಕ ಯುವತಿಯರು ತಮಟೆ ನಾದಕ್ಕೆ ನರ್ತಿಸಿ ನಲಿದು ನಾಚಿ ನೀರಾಗುತ್ತಿದ್ದರು.

## ಚಾಮುಂಡಿಬೆಟ್ಟದಿಂದ ಮೆರವಣಿಗೆಯಲ್ಲಿ ಅರಮನೆಗೆ ಬಂದ ಚಾಮುಂಡೇಶ್ವರಿ ಉತ್ಸವಮೂರ್ತಿ



ಚಾಮುಂಡಿಬೆಟ್ಟದಿಂದ ಅರಮನೆ ಆವರಣಕ್ಕೆ ಬಿಗಿ ಭದ್ರತೆಯೊಂದಿಗೆ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ತರಲಾಯಿತು.

ಮೈಸೂರು, ಅ.2(ಎಂಕೆ)– ಜಂಬೂ ಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿ ಭಕ್ತಾದಿಗಳನ್ನು ಹರಸಿ, ಆಶೀರ್ವದಿಸುವ ನಾಡ ಅಧಿದೇವತೆ, ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ವಿವಿಧ ಪೂಜಾ ಕೈಂಕರ್ಯದೊಂದಿಗೆ ಚಾಮುಂಡಿಬೆಟ್ಟದಿಂದ ಅರಮನೆಗೆ ತೆರೆದ ವಾಹನದಲ್ಲಿ ವೇದ–ಮಂತ್ರ ಘೋಷದೊಂದಿಗೆ ತರಲಾಯಿತು.

ಬೆಳಗ್ಗೆ 8.30 ರಿಂದ 9 ಗಂಟೆ ಸುಮಾರಿಗೆ ದೇವಸ್ಥಾನದ ಆವರಣದಲ್ಲಿ ಶ್ರೀ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ನೇತೃತ್ವದಲ್ಲಿ ಅಲಂಕೃತ ತೆರೆದ ವಾಹನದಲ್ಲಿ ಉತ್ಸವಮೂರ್ತಿಯನ್ನಿರಿಸಿ ಪೂಜೆ ಸಲ್ಲಿಸಲಾಯಿತು. ಬಳಿಕ ಅಪಾರ ಭಕ್ತ ಸಮೂಹ ಹಾಗೂ ಬಿಗಿ ಭದ್ರತೆಯೊಂದಿಗೆ ಉತ್ಸವ ಮೂರ್ತಿಯನ್ನು ಲಲಿತಮಹಲ್ ರಸ್ತೆ ಮಾರ್ಗವಾಗಿ ಅರಮನೆಗೆ ತರಲಾಯಿತು.

ಮಾರ್ಗದುದ್ದಕ್ಕೂ ಅಲಂಕೃತ ಶಕ್ತಿದೇವಿಗೆ ವೇದ–ಮಂತ್ರಗಳೊಂದಿಗೆ ಪೂಜೆ ಸಲ್ಲಿಸಿ ತರಲಾಯಿತು. ಕುರುಬಾರಹಳ್ಳಿಯ ಸಂಗೊಳ್ಳಿ ರಾಯಣ್ಣ ವೃತ್ತ ಸೇರಿದಂತೆ ದಾರಿಯುದ್ದಕ್ಕೂ ನೆರೆದಿದ್ದ ಸಾವಿರಾರು ಭಕ್ತಾಧಿಗಳು ಜಂಬೂ ಸವಾರಿಗೂ ಮುನ್ನವೇ ದೇವಿಯ ದರ್ಶನ ಪಡೆದು ಪುಳಕಿತರಾದರು.

ನಂತರ ಅರಮನೆ ಆವರಣದಲ್ಲಿಯೂ ಉತ್ಸವ ಮೂರ್ತಿಯನ್ನು ಭಕ್ತಿ–ಭಾವದಿಂದ ಬರಮಾಡಿಕೊಳ್ಳಲಾಯಿತು. ಪೂಜೆ ಸಲ್ಲಿಸಿ, ಸ್ವಾಗತಿಸಲಾಯಿತು. ಮಧ್ಯಾಹ್ನದ ವೇಳೆಗೆ ಉತ್ಸವ ಮೂರ್ತಿಯನ್ನು ಚಿನ್ನದ ಅಂಬಾರಿಯಲ್ಲಿಟ್ಟಾಗಲೂ ಪೂಜಾ ಕೈಂಕರ್ಯಗಳು ಅಚ್ಚುಕಟ್ಟಾಗಿ ನೆರವೇರಿದವು.


## ಸರಿಯಾದ ಮುಹೂರ್ತದಲ್ಲಿ ಮೆರವಣಿಗೆಗೆ ಚಾಲನೆ: ಮುಖ್ಯಮಂತ್ರಿ ಸಮಯ ಪಾಲನೆ!



ಮೈಸೂರು, ಅ.2(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಆಕರ್ಷಣೀಯ ಜಂಬೂ ಸವಾರಿ ಮೆರವಣಿಗೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಾಹ್ನ 1.10ರಲ್ಲಿ ಶುಭ ಧನುರ್ ಲಗ್ನದಲ್ಲಿ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿ, ಈಡುಗಾಯಿ ಒಡೆಯುವ ಮೂಲಕ ಚಾಲನೆ ನೀಡಿದರು. ಸಾರಿಗೆ ಸಂಸ್ಥೆಯ ಐರಾವತ ಬಸ್‌ನಲ್ಲಿ ಕೆಲ ಸಚಿವರೊಂದಿಗೆ ಮಧ್ಯಾಹ್ನ 1.05 ನಿಮಿಷಕ್ಕೆ ಜಯ ಮಾರ್ತಾಂಡ ದ್ವಾರದ ಮೂಲಕ ಅರಮನೆ ಆವರಣಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಾಹ್ನ 1.08 ನಿಮಿಷಕ್ಕೆ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಬಂದರು. 1.18ರೊಳಗೆ ಪೂಜೆ ಸಲ್ಲಿಸಬೇಕಾಗಿದ್ದರಿಂದ ಪೂಜೆಗೆ ಮೊದಲೇ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸಿಎಂ ಆಗಮಿಸುತ್ತಿದ್ದಂತೆಯೇ ನಂಧಿ ಧ್ವಜಕ್ಕೆ ಪೂಜೆ ಸಲ್ಲಿಸಿ, ಮಂಗಳಾರತಿ ಬೆಳಗಿ ಈಡುಗಾಯಿ ಒಡೆದು 2025ನೇ ಸಾಲಿನ ಜಂಬೂ ಸವಾರಿ ಮೆರವಣಿಗೆಗೆ ಚಾಲನೆ ನೀಡಿದರು.

ಈ ಮೊದಲು ನಂದಿ ಧ್ವಜ ಪೂಜೆ ಹಾಗೂ ಜಂಬೂಸವಾರಿ ಮೆರವಣಿಗೆಯ ಉದ್ಘಾಟನೆ ವೇಳೆ ಸಮಯದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾಗುತ್ತಿತ್ತು. ಆದರೆ ಈ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಂದಿ ಧ್ವಜ ಪೂಜೆಯನ್ನು ಶುಭ ಮುಹೂರ್ತದಲ್ಲೆ ನೆರವೇರಿಸಿದರು. ಅಷ್ಟೆ ಅಲ್ಲದೆ ಜಂಬೂ ಸವಾರಿ ಮೆರವಣಿಗೆಗೂ ಕೂಡ ಶುಭ ಮುಹೂರ್ತದಲ್ಲೇ ವಿಧ್ಯುಕ್ತವಾಗಿ ಚಾಲನೆ ನೀಡಿದರು. ಚಿನ್ನದ ಅಂಬಾರಿಯಲ್ಲಿದ್ದ ತಾಯಿ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವ ವೇಳೆ ವೇದ ಮಂತ್ರಗಳನ್ನು ಪಠಿಸಲು ಅರ್ಚಕರ ವೃಂದ ಆಗಮಿಸಿತ್ತು. ಆದರೆ ಪೊಲೀಸರು ವೇದಿಕೆ ಬಳಿ ಬಿಡದ ಕಾರಣ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ವಾಪಾಸ್ಸಾದರು.

## ಕೆಎಸ್‌ಐಸಿ ನೌಕರರ ಸಂಘದಿಂದ ಚಾಮುಂಡೇಶ್ವರಿಗೆ ರೇಷ್ಮೆ ಸೀರೆ ಸಾಂಪ್ರದಾಯಿಕ ಉಡುಗೊರೆ







ಮೈಸೂರು, ಅ.2(ಎಂಟಿವೈ)– ಚಿನ್ನದ ಅಂಬಾರಿಯಲ್ಲಿ ಕಂಗೊಳಿಸುತ್ತಿದ್ದ ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಕೆಎಸ್‌ಐಸಿ ನೌಕರರ ಸಂಘ ನೀಡಿದ ತಿಳಿ ಕೇಸರಿ ಬಣ್ಣದ ಅಪ್ಪಟ ರೇಷ್ಮೆ ಸೀರೆ ನೂಲಿನಿಂದ ನೇಯ್ದಿರುವ, ಚಿನ್ನದ ಜರಿಯಿಂದ ಹೂವಿನ ಚಿತ್ತಾರದ ಡಿಸೈನ್ ಮಾಡಿರುವ ರೇಷ್ಮೆ ಸೀರೆಯಿಂದ ಅಲಂಕರಿಸಲಾಗಿತ್ತು.

ಮೈಸೂರಿನ ಕೆಎಸ್‌ಐಸಿ ಸಂಸ್ಥೆಯ ನೌಕರರ ಸಂಘ ಕಳೆದ ಹಲವು ವರ್ಷಗಳಿಂದ ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಯಲ್ಲಿ ಮೆರವಣಿಗೆಗೆ ಸಾಗುವ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ರೇಷ್ಮೆ ಸೀರೆ ನೀಡುವ ಸಂಪ್ರದಾಯ ಅನುಸರಿಸುತ್ತಿದ್ದು, ಈ ಬಾರಿಯೂ ಕೆಎಸ್‌ಐಸಿ ನೌಕರರೇ ಆಯ್ಕೆ ಮಾಡಿದ ಬಣ್ಣದ ಅಪ್ಪಟ ರೇಷ್ಮೆ ನೂಲಿನೊಂದಿಗೆ ಚಿನ್ನದ ಜರಿಯಿಂದ ಕೂಡಿರುವ ಹೂವಿನ ಚಿತ್ತಾರದ ಡಿಸೈನ್ ಮಾಡಲಾಗಿತ್ತು. ದಸರಾ ವೇಳೆ ಕೆಎಸ್‌ಐಸಿಯಿಂದ ಹೆಚ್ಚು ರೇಷ್ಮೆ ಸೀರೆ ಮಾರಾಟವಾಗುತ್ತವೆ. ಲಾಭದಲ್ಲಿರುವ ಹಿನ್ನೆಲೆಯಲ್ಲಿ ನೌಕರರ ಸಂಘದ ಸದಸ್ಯರು ಪ್ರತಿವರ್ಷ ಅಂಬಾರಿಯಲ್ಲಿ ವಿರಾಜಮಾನಳಾಗಿ ಕಂಗೊಳಿಸುವ ನಾಡದೇವಿಗೆ ರೇಷ್ಮೆ ಸೀರೆ ನೀಡುವ ಸೇವೆ ನಡೆಯುತ್ತಿದೆ.

ಈ ಸೀರೆಯ ಮೌಲ್ಯ ಸೇರಿದಂತೆ ಕೆಲ ಮಾಹಿತಿಯನ್ನು ಗೌಪ್ಯವಾಗಿರಿಸಲು ಕೆಎಸ್‌ಐಸಿ ನೌಕರರ ಸಂಘ ನಿರ್ಧರಿಸಿದೆ. ಆದರೆ, ಕೆಲವು ಸಾಮಾಜಿಕ ಜಾಲತಾಣದಲ್ಲಿ ಕೆಎಸ್‌ಐಸಿ ನೌಕರರ ಸಂಘ 2.4 ಲಕ್ಷ ರೂ. ಮೌಲ್ಯದ ರೇಷ್ಮೆ ಸೀರೆಯನ್ನು ಉಡುಗೊರೆ ನೀಡಿದೆ ಎಂದು ರೇಷ್ಮೆ ಸೀರೆಯ ಚಿತ್ರದೊಂದಿಗೆ ವೈರಲ್ ಆಗಿದೆ. ಈ ಕುರಿತು ಕೆಎಸ್‌ಐಸಿ ಅಧಿಕಾರಿಯೊಬ್ಬರು ಸ್ಪಷ್ಟನೆ ನೀಡಿದ್ದು, ಹಲವು ವರ್ಷಗಳಿಂದ ಕೆಎಸ್‌ಐಸಿ ನೌಕರರ ಸಂಘ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸುವ ಚಾಮುಂಡೇಶ್ವರಿ ಉತ್ಸವ ಮೂರ್ತಿ ಅಲಂಕರಿಸಲು ರೇಷ್ಮೆ ಸೀರೆ ನೀಡುತ್ತಿದ್ದಾರೆ. ಅದರ ಮೌಲ್ಯ ಬಹಿರಂಗಪಡಿಸುವುದಿಲ್ಲ ಎಂದಿದ್ದಾರೆ.

## ಜಂಬೂಸವಾರಿ ವೀಕ್ಷಿಸಿದ ಡಾ.ಶಿವರಾಜ್‌ಕುಮಾರ್, ನಟಿ ಸಪ್ತಮಿಗೌಡ





ಮೈಸೂರು,ಅ.2(ಜಿಎ)–ನಟ ಡಾ.ಶಿವರಾಜ್‌ಕುಮಾರ್ ಮತ್ತು ಕಾಂತಾರ ಖ್ಯಾತಿಯ ನಟಿ ಸಪ್ತಮಿಗೌಡ ಜಂಬೂಸವಾರಿ ಕಣ್ತುಂಬಿಕೊಂಡರು.

ವಿಶ್ವವಿಖ್ಯಾತ ಮೈಸೂರು ದಸರಾ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಯನ್ನು ನಟ ಡಾ.ಶಿವರಾಜ್ ಕುಮಾರ್, ಪತ್ನಿ ಗೀತಾ ಶಿವರಾಜ್‌ಕುಮಾರ್ ಒಟ್ಟಿಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಗ್ರ್ಯಾಂಡ್ ಮರ್ಕ್ಯೂರಿ ಹೋಟೇಲ್ ಮುಂಭಾಗ ಸಿದ್ಧ ಪಡಿಸಿದ್ದ ಕುರ್ಚಿ ಮೇಲೆ ಕುಳಿತು ಅಭಿಮಾನಿಗಳೊಟ್ಟಿಗೆ ದಸರಾ ವೀಕ್ಷಿಸಿದರು.

ದಸರಾ ವೀಕ್ಷಣೆ ಜೊತೆ ಅಭಿಮಾನಿಗಳೊಂದಿಗೆ ಫೋಟೋ ಕ್ಲಿಕ್ಕಿಸಿಕೊಂಡು ಎಂದಿನಂತೆ ನೃತ್ಯದ ಕೆಲವು ಹಾಡುಗಳಿಗೆ ನೃತ್ಯ ಮಾಡುವ ಮೂಲಕ ರಂಜಿಸಿದ್ದಾರೆ. ಇತ್ತೀಚೆಗೆ ದಸರಾ ಗಜಪಡೆಯ ಎಲ್ಲರ ನೆಚ್ಚಿನ ಭೀಮ ಆನೆಯನ್ನು ನೋಡಿ ಅದರೊಟ್ಟಿಗೆ ಭೀಮನನ್ನು ಅಪ್ಪಿಕೊಂಡು ಫೋಟೋ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ.

ನಟಿ ಸಪ್ತಮಿಗೌಡ ಬೆಳಗ್ಗೆ ಅರಮನೆ ಆವರಣಕ್ಕೆ ಆಗಮಿಸಿದ ಅವರು, ಬನ್ನಿ ಪೂಜೆ ನೋಡಲು ಮುಂದಾದರು. ಆದರೆ, ಅವಕಾಶವಿಲ್ಲದ ಕಾರಣ ಹೊರಭಾಗದಲ್ಲಿ ನಿಂತು ಯದುವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ಬನ್ನಿಪೂಜೆ ನಂತರ ನಡೆಸಿದ ವಿಜಯಯಾತ್ರೆಯನ್ನು ಕುತೂ ಹಲದಿಂದ ವೀಕ್ಷಿಸಿ, ನಂತರ ಚಾಮ ರಾಜೇಂದ್ರ ಒಡೆಯರ್ ವೃತ್ತದ ಆವರಣ ದಲ್ಲಿ ಕುಳಿತು ಜಂಬೂಸವಾರಿಯನ್ನು ಕಣ್ತುಂಬಿಕೊಂಡರು.

## ಮೈಸೂರು ಮಾನ್ಸೂನ್ ರೇಸ್

9ನೇ ದಿನ, ಶುಕ್ರವಾರ, 3–10–2025

**ಇಂದಿನ ರೇಸ್‌ಗೆ ನಮ್ಮ ಆಯ್ಕೆ**

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಶ್ರೀರಂಗಪಟ್ಟಣ ಪ್ಲೇಟ್ ಡಿ–II–1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಗ್ಯಾಂಡೋಲ್ ಫಿನಿ 2. ಲೆಕ್ಸ್ ಲೂಥರ್

II. ಮಂಡಕಲ್ಲಿ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ಜಿಸ್ ಮೋ 2. ದಿ ಗೋಲ್ಡನ್ ಕಪ್

III. ಶ್ರೀರಂಗಪಟ್ಟಣ ಪ್ಲೇಟ್ ಡಿ–I–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಎಲ್ ಅಲಮಿನ್ 2 ಡಪ್ಪಿ

IV ಜಸ್ಟಿಸ್ ಪಿ.ಮೇದಪ್ಪ ಮೆಮೋರಿಯಲ್ ಟ್ರೋಫಿ –1200ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ನಾಟಿ ಬ್ಲಷ್ 2. ಮೆಟ್ ಜಿಂಗರ್

V. ಮೈಸೂರ್ 2000 ಗಿನ್ನಿಸ್–1600 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1 ಎಕೋಸ್ ಆಫ್ ಟೈಂ 2. ಮನಿ ಬ್ಯಾಗ್

VI. ಮೀರೂಟ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. (ನೋ ವಿಫ್) ಸಂ.4.30ಕ್ಕೆ
1 ಲೈವ್ ದಿ ಡ್ರೀಮ್ 2 ಕನೆಕ್ಟಿಂಗ್ ಡಾಟ್

VII. ಪೆನ್ನಂಬೂರ್ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. ಮೈಸೂರ್ ಬೆಸ್ಟ್ ಹಾರ್ಸ್. ಸಂ.5.00ಕ್ಕೆ
1 ಟ್ರಂಪ್ ಬೇಬಿ 2 ಪ್ಲಾನೆಟ್ ಸೂಪರ್

| | |
|---|---|
| ದಿನದ ಅತ್ಯುತ್ತಮ | ಎಕೋಸ್ ಆಫ್ ಟೈಂ |
| ಡಬ್ಬಲ್ | ಜಿಸ್ ಮೋ, ಲೈವ್ ದಿ ಡ್ರೀಂ |
| ಜಾಕ್‌ಪಾಟ್ | 3, 4, 5, 6 ಮತ್ತು 7 |
| ಮಿನಿ ಜಾಕ್‌ಪಾಟ್ | 4, 5, 6 ಮತ್ತು 7 |
| I ಟ್ರಿಬಲ್ | 2, 3 ಮತ್ತು 4 |
| II ಟ್ರಿಬಲ್ | 5 6 ಮತ್ತು 7 |
| ಎಕ್ಸ್‌ಆಕ್ಟ್ | 1 ರಿಂದ 7 |

ಟಿಪ್‌ಸ್ಟರ್ ಪಿಜೆಸಿ

ಹಸಿರು ನಮ್ಮ ಉಸಿರು



ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ
ಶ್ರೀ ತನ್ವೀರ್ ಸೇಠ್
ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಶುಭಕೋರುವವರು:
ತನ್ವೀರ್ ಸೇಠ್ ಫೌಂಡೇಶನ್ ಹಾಗೂ ತನ್ವೀರ್ ಸೇಠ್ ಅಭಿಮಾನಿಗಳ ಬಳಗ




ಅಭಿವೃದ್ಧಿಯ ಹರಿಕಾರ, ಯುವಕರ ಆಶಾಕಿರಣ, ಶಾಸಕರು - ಕೆ.ಪಿ.ಸಿ.ಸಿ ಕಾರ್ಯಧ್ಯಕ್ಷರು ಹಾಗು ಮಾಜಿ ಸಚಿವರು
ಶ್ರೀ ತನ್ವೀರ್ ಸೇಠ್ ರವರಿಗೆ ಹುಟ್ಟು ಹಬ್ಬದ ಶುಭಾಶಯಗಳು
ಪ್ರಕಟಣೆ : ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಸಮಿತಿ, ನರಸಿಂಹರಾಜ ಕ್ಷೇತ್ರ , ಮೈಸೂರು.
ದಿನಾಂಕ : 03-10-2025
Muneer arts 8892401139